ಪ್ರಬುದ್ಧ ಕರ್ಣಾಟಕ

ಸಂಪುಟ ೯೨ ಸಂಚಿಕೆ ೩೫೩

೨೦೧೫

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಪ್ರಬುದ್ಧ ಕರ್ನಾಟಕ

ಸಂಪುಟ ೯೨

ಸಂಚಿಕೆ ೩೫೬

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೨೦೧೫

Prabuddha Karnataka : A Kannada Quarterly of the University of Mysore, Volume 92, Nos. 356; Edited by Prof. Priti Shrimandhar Kumar, Prof. K.N. Ganganaik and Prof. G.R. Thippeswamy; Published by the Director, Prasaranga, Manasagangotri, University of Mysore, MYSORE - 570 006; Pages : x+90=100

ಪ್ರಕಾಶಕರು

ಪ್ರೊ. ಎಂ.ಜಿ. ಮಂಜುನಾಥ

ನಿರ್ದೇಶಕರು

ಪ್ರಸಾರಾಂಗ, ಮಾನಸಗಂಗೋತ್ರಿ

ಮೈಸೂರು - ೫೭೦ ೦೦೬

ಮುದ್ರಕರು

ಶ್ರೀ ಸತೀಶ್

ನಿರ್ದೇಶಕರು

ವಿಶ್ವವಿದ್ಯಾನಿಲಯ ಮುದ್ರಣಾಲಯ

ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಮುನ್ನುಡಿ

ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ– ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಂಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ. ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕಕ್ಕೆ** ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

ಪ್ರೊ. ಕೆ.ಎಸ್. ರಂಗಪ್ಪ
ಕುಲಪತಿ

ಪ್ರಕಾಶಕರ ನುಡಿ

ಮೈಸೂರು ವಿಶ್ವವಿದ್ಯಾನಿಲಯವು ಜ್ಞಾನಪ್ರಸಾರದ ಮಹೋನ್ನತ ಉದ್ದೇಶದೊಂದಿಗೆ ಸ್ಥಾಪಿಸಿದ ಪ್ರಸಾರಾಂಗವು ಹೊರತರುತ್ತಿರುವ ಪ್ರಬುದ್ಧ ಕರ್ಣಾಟಕ ನಿಯತಕಾಲಿಕೆಯು ಕನ್ನಡ ನಾಡಿನ ವಿದ್ವತ್ಪತ್ರಿಕೆಗಳಲ್ಲಿ ಬಹು ಪ್ರತಿಷ್ಠಿತ ಸ್ಥಾನವನ್ನು ಪಡೆದಿದೆ. ಕನ್ನಡ ಸಾಹಿತ್ಯ, ಭಾಷಾ ವಿಜ್ಞಾನ, ಜಾನಪದ, ಶಾಸನಶಾಸ್ತ್ರ, ಗ್ರಂಥ ಸಂಪಾದನಾ ಶಾಸ್ತ್ರ, ಸ್ಥಳನಾಮ ವ್ಯಾಸಂಗ, ನಾಣ್ಯಶಾಸ್ತ್ರ, ಇತಿಹಾಸ, ಪುರಾತತ್ವ, ಸಂಸ್ಕೃತಿ ಹೀಗೆ ಹಲವು ಜ್ಞಾನ ಶಿಸ್ತುಗಳಿಗೆ ಸೇರಿದ ಸಂಶೋಧನಾ ಲೇಖನಗಳ ಪ್ರಕಟಣೆಗೆಂದೇ ಮೀಸಲಾಗಿದ್ದು ಕನ್ನಡ ಸಾಹಿತ್ಯಾಭಿಮಾನಿಗಳ, ಸಂಶೋಧಕರ, ವಿದ್ವಾಂಸರ ಮನ್ನಣೆ ಗಳಿಸಿದೆ.

ಕನ್ನಡದಕಣ್ವ ಬಿ.ಎಂ.ಶ್ರೀ, ರಾಷ್ಟ್ರಕವಿ ಕುವೆಂಪು, ಹಿರಿಯ ವಿದ್ವಾಂಸರಾದ ತೀನಂಶ್ರೀ, ಟಿ.ಎಸ್. ವೆಂಕಣ್ಣಯ್ಯ, ತ.ಸು. ಶಾಮರಾಯ, ಡಿ.ಎಲ್. ನರಸಿಂಹಾಚಾರ್, ನಾಡೋಜ ದೇಜಗೌ ಮುಂತಾದ ಹಿರಿಯರ ಪರಿಶ್ರಮ ಪ್ರೋತ್ಸಾಹಗಳಿಂದ ಪ್ರಬುದ್ಧ ಕರ್ಣಾಟಕವು ಪ್ರಬುದ್ಧವಾದ ಸ್ಥಾನವನ್ನು ಪಡೆದಿದೆ. ಪ್ರಸ್ತುತ ಪ್ರಬುದ್ಧ ಕರ್ಣಾಟಕದ ೯೨ನೇ ಸಂಪುಟ ೩೫೬ನೇ ಸಂಚಿಕೆ ಹೊರಬರುತ್ತಿದೆ.

ಪ್ರಸಾರಾಂಗದ ಪ್ರಗತಿಗೆ ಸದಾ ಬೆಂಬಲ ನೀಡುತ್ತಿರುವ ನೆಚ್ಚಿನ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರಿಗೆ, ಕುಲಸಚಿವರಾದ ಪ್ರೊ. ಸಿ. ಬಸವರಾಜು ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ, ಪ್ರಬುದ್ಧ ಕರ್ಣಾಟಕದ ಸಂಪಾದಕರೂ ಆದ ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್ ಅವರಿಗೆ, ಸಂಪಾದಕರಾದ ಪ್ರೊ. ಕೆ.ಎನ್. ಗಂಗಾನಾಯಕ್ ಅವರಿಗೆ, ಪ್ರೊ. ಜಿ.ಆರ್. ತಿಪ್ಪೇಸ್ವಾಮಿ ಅವರಿಗೆ, ಡಿ.ಟಿ.ಪಿ. ವಿಭಾಗದವರಿಗೆ, ಮುದ್ರಣಾಲಯದ ನಿರ್ದೇಶಕರಾದ ಶ್ರೀ ಸತೀಶ್ ಅವರಿಗೆ, ಪ್ರಸಾರಾಂಗದ ಹಾಗೂ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

ಪ್ರೊ. ಎಂ.ಜಿ. ಮಂಜುನಾಥ

ನಿರ್ದೇಶಕ, ಪ್ರಸಾರಾಂಗ

ಸಂಪಾದಕರ ನುಡಿ

ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ಪ್ರತಿಷ್ಠಿತ ತ್ರೈಮಾಸಿಕಗಳಲ್ಲಿ 'ಪ್ರಬುದ್ಧ ಕರ್ಣಾಟಕ'ವೂ ಒಂದಾಗಿದೆ ಎಂಬುದು ಸಂತೋಷದ ವಿಷಯ. ಇದರ ಹಾದಿಯನ್ನು ಗಮನಿಸುತ್ತ ಬಂದರೆ ಸೃಜನಶೀಲದೊಂದಿಗೆ ಸಂಶೋಧನಾತ್ಮಕ ಬರಹಗಳನ್ನು ಒಳಗೊಳ್ಳುವುದರ ಮೂಲಕ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿದೆ. ಕಾಲಕ್ರಮದಲ್ಲಿ ಸಮಾಜದಲ್ಲಿ ಬದಲಾವಣೆಯಾದಂತೆ ಸಾಹಿತ್ಯ ಕ್ಷೇತ್ರದಲ್ಲೂ ಬದಲಾವಣೆಗಳು ಕಾಣಿಸಿಕೊಂಡವು. ಬಗೆಬಗೆಯ ಜ್ಞಾನಶಿಸ್ತುಗಳು, ಅಧ್ಯಯನಗಳು ಗೋಚರವಾದವು. ಪ್ರಸ್ತುತ ಸಂದರ್ಭದ ಸಂಶೋಧನೆಯೂ ಅವನ್ನು ಎಟುಕಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದೆ. ಇಂದಿನ ಸಾಹಿತ್ಯಾಭಿರುಚಿಯ ಭರಾಟೆಯ ಸಂದರ್ಭದಲ್ಲಿ ಶಾಸನ ಸಾಹಿತ್ಯ, ಪ್ರಾಚೀನ, ನಡುಗನ್ನಡ ಸಾಹಿತ್ಯಾಧ್ಯಯನದ ಶಿಸ್ತು, ಸಂಶೋಧನೆ, ವೈಧಾನಿಕತೆ ದೂರವಾಗಬಾರದೆಂಬ ಎಚ್ಚರವೂ ಇದೆ. ಇಂತಹ ಎಚ್ಚರದಿಂದಲೇ ಹತ್ತು ಸಂಶೋಧನಾತ್ಮಕ ಲೇಖನಗಳನ್ನು ಪ್ರಬುದ್ಧ ಕರ್ಣಾಟಕ ಸಂಪುಟ – ೯೨ ಸಂಚಿಕೆ – ೩೫೬ ರಲ್ಲಿ ಸಂಕಲಿಸಿ ಕೊಡಲಾಗಿದೆ.

ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಈ ಮೂರೂ ಕಾಲಘಟ್ಟದ ಬರಹಗಳು ಈ ಸಂಚಿಕೆಯಲ್ಲಿವೆ. ಸಾಂಸ್ಕೃತಿಕ ನಾಯಕ ಮಂಟೇಸ್ವಾಮಿಯನ್ನು ಕುರಿತ ಲೇಖನದಿಂದ ಮೊದಲ್ಗೊಂಡು ಗಿರೀಶ್ ಕಾರ್ನಾಡರ 'ಹಯವದನ' ನಾಟಕ ಕುರಿತ ಲೇಖನದವರೆಗಿನ ವಿವಿಧ ರೀತಿಯ ಬರಹಗಳು ಇಲ್ಲಿ ಸೇರ್ಪಡೆಗೊಂಡಿವೆ. ಪ್ರತಿಯೊಂದು ತನ್ನದೇ ಆದ ವಿಶೇಷತೆಗೆ ಸಾಕ್ಷಿಯಾಗಿದೆ. ನಿರ್ಲಕ್ಷಿತ ಹಾಗೂ ಅಸ್ಪೃಶ್ಯ ಸಮಾಜಗಳ ಸಂವೇದನಾಶೀಲತೆಗೆ ಮಹತ್ವ ತಂದುಕೊಟ್ಟ ಮಂಟೇಸ್ವಾಮಿಯ ನಾಯಕತ್ವದ ಶೋಧನೆ ಡಾ. ಎಂ. ಸಂಜಯ್ಯ ಹೊಂಗನೂರು ಲೇಖನದಲ್ಲಿ ಕಂಡುಬರುತ್ತಿದೆ. ಮೌಖಿಕ ಪರಂಪರೆಯಲ್ಲಿ ದೇವತಾ ಕಲ್ಪನೆ ಬೆಳೆದುಬಂದ ಬಗೆಯೊಂದಿಗೆ ಗ್ರಾಮದೇವತಾಚರಣೆ ಜನಪದದ ಬದುಕಿನ ಭಾಗವಾಗುವ ರೀತಿಯತ್ತ ಹಂಸವೇಣಿಯವರ 'ಪ್ರಾಚೀನ ನಾಗರಿಕತೆಯಲ್ಲಿ ದೇವತೆಗಳ ಪರಿಕಲ್ಪನೆ' ಯಲ್ಲಿ ಗಮನಹರಿಸಲಾಗಿದೆ.

ಮಂಜುನಾಥ ಎಂ. ಅವರು ನೊಳಂಬಕುಲಸಂತತಿ ಪೆರುಮಾಳ್ ದಂಡನಾಯಕರ ವಿವರಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಚರ್ಚಿಸಿ, ಸಂಶೋಧನೆಗೆ ಗಟ್ಟಿನೆಲೆಯನ್ನು ತಂದುಕೊಟ್ಟಿದ್ದಾರೆ. ಪ್ರವಾಸಿಗರ ದೃಷ್ಟಿಯಲ್ಲಿ ವಿಜಯನಗರದ ಭೌಗೋಳಿಕ ಚಿತ್ರಣವನ್ನು ಪ್ರಭು ಡಿ. ತಮ್ಮ ಲೇಖನದಲ್ಲಿ ಕಟ್ಟಿಕೊಟ್ಟಿದ್ದಾರೆ. 'ಎಂ.ಕೆ. ಇಂದಿರಾ ಅವರ ಸಾಹಿತ್ಯ' ಕುರಿತ ಲೇಖನದಲ್ಲಿ ಡಾ. ಪ್ರೀತಿ ಶುಭಚಂದ್ರ ಅವರು ಕನ್ನಡ ಮಹಿಳಾ ಸಾಹಿತ್ಯದ ಹಿನ್ನೆಲೆಯಲ್ಲಿ ಇಂದಿರಾ ಅವರ ಸಮಗ್ರ ಸಾಹಿತ್ಯವನ್ನು ವಿಮರ್ಶೆಗೆ ಒಳಪಡಿಸಿದ್ದು, ವ್ಯಾಪಕ ಬದುಕಿನ ಹಿನ್ನೆಲೆಯಲ್ಲಿ ಅವರ ಕಥನ ಸಾಹಿತ್ಯದ ಸ್ಪಷ್ಟ ಹೆಜ್ಜೆ ಗುರುತುಗಳನ್ನು ಸಮರ್ಥವಾಗಿ ದಾಖಲಿಸಿದ್ದಾರೆ. ಮಹದೇವಸ್ವಾಮಿ ಹೆಗ್ಗೊತಾರ ಅವರ 'ಮೃತ್ಯುಂಜಯ : ಒಂದು ಚಾರಿತ್ರಿಕ ಅನುಸಂಧಾನ' ಸಾಮಾಜಿಕ, ಸೈದ್ಧಾಂತಿಕ ತತ್ವಗಳಿಂದ ಮೈತಳೆದ ಕೃತಿಯ ಪರಾಮರ್ಶೆಗೆ ಇದು ಸಾಕ್ಷಿಯೆಂಬಂತಿದೆ. ಡಾ. ಕೆ.ಎನ್. ಗಂಗಾನಾಯಕ್ ಅವರು 'ಎಂ.ಎಲ್. ಶ್ರೀಕಂಠೇಶಗೌಡರು' ಲೇಖನದಲ್ಲಿ ಶ್ರೀಕಂಠೇಶಗೌಡರ ಜೀವನ ವಿವರಗಳೊಂದಿಗೆ ಅವರ ಅನುವಾದ ನಾಟಕಗಳಾದ 'ಪ್ರತಾಪ ರುದ್ರದೇವ', 'ಪ್ರತಿಮಾರ್ಜುನೀಯಂ', 'ಸೀತಾಸ್ವಯಂವರಂ' ಈ ನಾಟಕಗಳ ವಿಶಿಷ್ಟತೆಯನ್ನು ಗುರುತಿಸಿದ್ದಾರೆ. ಎಸ್.ಡಿ. ಶಶಿಕಲಾ ಅವರು ತಮ್ಮ ದೀರ್ಘ ಲೇಖನದಲ್ಲಿ ಬಸವಣ್ಣ ಮತ್ತು ವಚನಕಾರ್ತಿಯರ ನಡುವೆ ನಡೆದಿರಬಹುದಾದ ಸಂವಾದದ ನೆಲೆಗಳನ್ನು ಗ್ರಹಿಸಲಾಗಿದ್ದು, ವಚನಕಾರರ ಮನಸ್ಥಿತಿ ತಾತ್ವಿಕ ನಿಲುವುಗಳು ಸಾಮಾಜಿಕ ಬೆಳವಣಿಗೆಗೆ ಮುಖಾಮುಖಿಯಾದ ರೀತಿಯತ್ತ ಗಮನಹರಿಸಲಾಗಿದೆ. ಆಶಾ ಎಸ್. ಅವರು ಜಯಂತ ಕಾಯ್ಕಿಣಿಯವರ 'ನೀರು' ಕತೆಯನ್ನು, ಎಚ್.ಎನ್. ಧನಂಜಯ ಅವರು ಕಾರ್ನಾಡರ 'ಹಯವದನ'ವನ್ನು ನಿಕಷಕ್ಕೆ ಒಡ್ಡಿ ಆ ಪಠ್ಯಗಳ ವಿವಿಧ ಆಯಾಮಗಳನ್ನು ಪರಿಶೀಲಿಸಿದ್ದಾರೆ. ಹೀಗೆ ಎಲ್ಲ ಲೇಖನಗಳೂ ತಮ್ಮ ಉದ್ದೇಶಿತ ನಿಲುವನ್ನು ಪ್ರತಿಪಾದಿಸುವಲ್ಲಿ ಯಶಸ್ಸನ್ನು ಕಂಡಿವೆ ಎಂಬುದೇ ನಮ್ಮ ಭಾವನೆ. ಸಂಪುಟದ ಲೇಖಕರಿಗೆ, ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನಮ್ಮ ಕೃತಜ್ಞತೆಗಳು.

ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್
ಪ್ರೊ. ಕೆ.ಎನ್. ಗಂಗಾನಾಯಕ್
ಪ್ರೊ. ಜಿ.ಆರ್. ತಿಪ್ಪೇಸ್ವಾಮಿ
ಸಂಪಾದಕರು

ಪರಿವಿಡಿ

ಈ ಸಂಚಿಕೆಯ ಲೇಖಕರು

೧. **ಡಾ. ಎಂ. ನಂಜಯ್ಯ ಹೊಂಗನೂರು**
ಸಹ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೯೦೦೭೮೫೯೮೨

೨. **ಹಂಸವೇಣಿ ಈ.**
ಸಂಶೋಧನ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ. ಮೈಸೂರು
ಮೊಬೈಲ್ : ೮೫೪೬೮೮೫೬೦೦

೩. **ಮಂಜುನಾಥ ಎಂ.**
ಸಂಶೋಧನ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾನಿಲಯ
ವಿದ್ಯಾರಣ್ಯ, ಹಂಪಿ
ಮೊಬೈಲ್ : ೯೯೭೨೯೬೦೬೮೪

೪. **ಪ್ರಭು ಡಿ.**
ಸಂಶೋಧನ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೮೮೬೮೧೮೬೯೪

೫. **ಡಾ. ಪ್ರೀತಿ ಶುಭಚಂದ್ರ**
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ. ಮೈಸೂರು
ಮೊಬೈಲ್ : ೯೪೪೯೩೨೩೯೫೦

೬. **ಮಹದೇವಸ್ವಾಮಿ ಹೆಗ್ಗೊತಾರ**
ಸಂಶೋಧನ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೪೪೯೭೭೭೭೦

೭. **ಡಾ. ಕೆ.ಎನ್. ಗಂಗಾನಾಯಕ್**
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೩೪೨೫೧೫೫೦೬

೮. **ಡಾ. ಎಸ್.ಡಿ. ಶಶಿಕಲಾ**
ಸಹಾಯಕ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೮೪೫೬೧೨೨೮೬

೯. **ಆಶಾ ಎಸ್.**
ಸಂಶೋಧನ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೭೮೨೯೨೪೦೪೪೨

೧೦. **ಡಾ. ಧನಂಜಯ್ಯ ಎಚ್.ಎಸ್.**
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

೧. ಮೌಖಿಕ ಕಥನದ ಸಾಂಸ್ಕೃತಿಕ ನಾಯಕರಾಗಿ ಮಂಟೇಸ್ವಾಮಿ

– ಡಾ. ಎಂ. ನಂಜಯ್ಯ ಹೊಂಗನೂರು

ಮಂಟೇಸ್ವಾಮಿ ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದ ಒಬ್ಬ ಸಂತ. ಈತ ಚಾರಿತ್ರಿಕ ವ್ಯಕ್ತಿ ಎನ್ನುವುದಕ್ಕೆ ಅನೇಕ ಆಕರಗಳಿವೆ. ಮುಟ್ಟನಹಳ್ಳಿ ಶಾಸನ, ವೀರ ಸಂಗಯ್ಯನ ನಂದಿ ಆಗಮಲೀಲೆ, ಚಿಲಾಳಸ್ವಾಮಿ ಷಟ್ಸಲ ಶಿವಾಯಣ, ದೇವಚಂದ್ರನ ರಾಜಾವಳಿ ಕಥೆ ಇನ್ನೂ ಮುಂತಾದ ಶಾಸನ ಹಾಗೂ ಪ್ರಾಚೀನ ಕಾವ್ಯಗಳಲ್ಲಿ ಮಂಟೇಸ್ವಾಮಿಯ ಉಲ್ಲೇಖಗಳಿವೆ. ಮಂಟೇಸ್ವಾಮಿ ಕಾವ್ಯ ಸಂಗ್ರಹವನ್ನು ಮೊಟ್ಟಮೊದಲು ಮಾಡಿದವರು ಜೀ.ಶಂ. ಪರಮಶಿವಯ್ಯನವರು (೧೯೭೦). ಧರೆಗೆದೊಡ್ಡವರ ವಚನ, ಸಿದ್ದಪ್ಪಾಜಿ ವಚನ, ರಾಚಪ್ಪಾಜಿ ವಚನ ಹಾಗೂ ಇನ್ನಿತರ ವಚನಗಳು ಎನ್ನುವ ನಾಲ್ಕು ಅಧ್ಯಾಯಗಳಲ್ಲಿ ಸುಮಾರು ೬೪೧೦ ಸಾಲುಗಳುಳ್ಳ ಕಾವ್ಯ ಇದಾಗಿದೆ. ಅನಂತರ ಹಿ.ಚಿ. ಬೋರಲಿಂಗಯ್ಯ ಅವರ ಸಂಪಾದನೆಯಲ್ಲಿ ೧೯೯೭ರಲ್ಲಿ ಮಂಟೇಸ್ವಾಮಿ ಅವರ ಪರಿಷ್ಕೃತವಾದ ಕಾವ್ಯ ಪ್ರಕಟವಾಯಿತು. ಪತ್ತು ಅಧ್ಯಾಯಗಳಲ್ಲಿ ಸುಮಾರು ೨೭,೫೪೫ ಸಾಲುಗಳಲ್ಲಿ ಇದು ಬಹಳ ವಿಸ್ತಾರವಾಗಿ ಬೆಳದು ನಿಂತಿದೆ.

ಹನ್ನೆರಡನೆಯ ಶತಮಾನದ ಶರಣ ಚಳವಳಿ ಅನೇಕ ಕಾರಣಗಳಿಂದಾಗಿ ವಿಫಲವಾದ ನಂತರ ಇದರಿಂದ ಬೇಸತ್ತ ಕೆಳವರ್ಗದ ಕೆಲವು ಸಾಂಸ್ಕೃತಿಕ ನಾಯಕರು ಆ ಒಕ್ಕೂಟದ ವಿರುದ್ಧ ಎದ್ದು ನಿಂತರು ಎಂಬ ವಿಚಾರವನ್ನು ಬಹಳ ಗಂಭೀರವಾಗಿ ಚರ್ಚಿಸಬೇಕಾಗುತ್ತದೆ. ಕೆಳವರ್ಗದ ಜನ ನಂತರದ ಅನಿರೀಕ್ಷಿತ ಸೋಲಿನಿಂದಾಗಿ ಹತಾಶರಾಗಿ ತಮ್ಮ ತಮ್ಮ ದಾರಿಗಳನ್ನು ತಾವು ನೋಡಿಕೊಳ್ಳುವಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಉತ್ತರ ದೇಶದಿಂದ ಬಂದ ಸಾಂಸ್ಕೃತಿಕ ನಾಯಕ ಮಂಟೇಸ್ವಾಮಿಯನ್ನು ನೋಡಬೇಕಾಗಿದೆ. ಮಂಟೇಸ್ವಾಮಿ ಶರಣ ಚಳವಳಿಯಲ್ಲಿ ಕಾಣಿಸಿಕೊಂಡಿದ್ದರು ಹಾಗೂ ಅಲ್ಲಮನ ಜೊತೆ

ಒಡನಾಟವನ್ನಿಟ್ಟುಕೊಂಡಿದ್ದರು ಎನ್ನುವುದಕ್ಕೆ ಯಾವುದೇ ಚಾರಿತ್ರಿಕ ಆಧಾರಗಳು ಸಿಕ್ಕುವುದಿಲ್ಲ. ಆದರೆ ಈ ಮಹಾನ್‌ಸಂತ ಶರಣ ಚಳವಳಿಯ ನಂತರ ಕಾಲಘಟ್ಟದಲ್ಲಿ ಇದ್ದವನು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಮಂಟೇಸ್ವಾಮಿ ಕೆಳವರ್ಗಕ್ಕೆ ಸೇರಿದವರು. ಅದರಲ್ಲೂ ದಲಿತವರ್ಗದ ಹೊಲೆಯರ ಗುಂಪಿನವನು ಎಂಬುದರಲ್ಲಿ ಯಾವುದೇ ಅನುಮಾನವೂ ಇಲ್ಲ. ಆದರೂ ಇವರು ಅಖಂಡ ಕೆಳಜಾತಿಗಳ ಪ್ರತಿನಿಧಿ, ತಳಸಮುದಾಯಗಳ ಲೋಕದೃಷ್ಟಿಯನ್ನು ಕಟ್ಟಿದ ಸಾಂಸ್ಕೃತಿಕ ನಾಯಕ ಎನ್ನುವುದು ಮಾತ್ರ ಸತ್ಯ.

ಮಂಟೇಸ್ವಾಮಿ ಕಾವ್ಯ ದಕ್ಷಿಣ ಕರ್ನಾಟಕದ ಬಹುದೊಡ್ಡ ಮೌಖಿಕ ಕಥನವಾಗಿದೆ. ನೀಲಗಾರರು ತಮ್ಮ ಕುಲನಾಯಕರಾದ ಮಂಟೇಸ್ವಾಮಿಯನ್ನು ಧರೆಗೆ ದೊಡ್ಡವರೆಂದು ಕರೆದುಕೊಂಡಿದ್ದಾರೆ. ಅವರ ಸಾಂಸ್ಕೃತಿಕ ಕಥಾನಕ್ಕೆ 'ಧರಗೆ ದೊಡ್ಡವರ ಕತೆ' ಎಂದು ಕರೆಯುತ್ತಾರೆ. ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು ಜಿಲ್ಲೆಗಳಲ್ಲಿ ಮಂಟೇಸ್ವಾಮಿ ಕಾವ್ಯ ಪರಂಪರೆಯನ್ನು ಮುನ್ನಡೆಸುವ ನೀಲಗಾರರನ್ನು ಹಾಗೂ ಮಂಟೇಸ್ವಾಮಿಯನ್ನು ಆರಾಧಿಸುವ ಭಕ್ತ ಪರಂಪರೆಯ ಸಮೂಹವನ್ನು ಕಾಣುತ್ತೇವೆ. ನೀಲಗಾರ ಎಂಬ ಪದ 'ಲೀಲೆ'ಗಾರದ ಗ್ರಾಮ್ಯ ರೂಪವಾಗಿದೆ. ಭೂಮಿಗೆ ಬಂದ ಮೊದಲ ನೀಲಗಾರನೇ ಮಂಟೇಸ್ವಾಮಿ. ಇವರು ಭೂಮಿ ಹುಟ್ಟುವುದಕ್ಕೂ ಮುಂಚೆ ಹುಟ್ಟಿದ ಕಾರಣದಿಂದಾಗಿ ಇವರನ್ನು 'ಧರೆಗೆ ದೊಡ್ಡವರು' ಎಂದು ಕರೆಯುತ್ತಾರೆ. ಮಂಟೇಸ್ವಾಮಿ ಎಂಬ ಪದವು 'ಮಹಾಂತಸ್ವಾಮಿ' ಪದದ ಜನಪದ ನುಡಿಯ ರೂಪವಾಗಿದೆ.

ಮಂಟೇಸ್ವಾಮಿ ದಕ್ಷಿಣಕ್ಕೆ ಬಂದ ಮೇಲೆ ಮೈಸೂರು ಒಡೆಯರಿಗೆ ಕಾಡುಗಳ್ಳ ಮಾರನಾಯಕನೊಡನೆ ಯುದ್ಧ ಮಾಡಿ ಗೆಲ್ಲಲು ನೆರವಾಗುತ್ತಾರೆ. ಅನಂತರ ಕುರುಬ ಬೊಪ್ಪೇಗೌಡನ ಕುರಿದೊಡ್ಡಿಯನ್ನು ಮಠವಾಗಿಸಿಕೊಂಡು ಅದನ್ನೇ ಮುಂದೆ ನೀಲಗಾರ ಪರಂಪರೆಯ ಕೇಂದ್ರವನ್ನಾಗಿ ಮಾಡಿಕೊಳ್ಳುತ್ತಾರೆ. ಕುರುಬ, ಒಕ್ಕಲಿಗ, ಬೇಡ, ಪಾಂಚಾಳ ಪರಿವಾರದವರನ್ನು ಗೆಲ್ಲುವ ಮೂಲಕ ಅವರನ್ನು ಒಕ್ಕಲು ಮಾಡಿಕೊಳ್ಳುವ ಕೆಲಸ ಮಾಡುತ್ತಾರೆ. ಅಂದು ಯಾವ ಆಹಾರ ವಸ್ತುಗಳು ನಿಷೇಧವಾಗಿದ್ದವೋ ಅವುಗಳನ್ನು ಮುಖ್ಯವೆಂದು ತಿಳಿದು, ಮಾಂಸ, ಮದ್ಯ, ಭಂಗಿಗಳು ಮಂಟೇಸ್ವಾಮಿ ಪರಂಪರೆಯ ಅನುಯಾಯಿಗಳಾದ ತಳ ಸಮಾಜದಲ್ಲಿ ಅವು ಪ್ರಧಾನ, ಶ್ರೇಷ್ಠ ಹಾಗೂ ಮುಖ್ಯ ಆಚರಣೆಗಳಾಗುತ್ತವೆ. ಆದಿಕಲ್ಯಾಣಕ್ಕೆ ಬರುವಾಗ ಮಂಟೇಸ್ವಾಮಿ ಸತ್ತ ಎಮ್ಮೆಕರುವನ್ನು ಹೊತ್ತುಕೊಂಡು ಎಮ್ಮೆಚಕ್ಕಳವ ಒದ್ದು, ಕೈಲಿ ಸುರೆಗಡಿಗೆ ಹಿಡಿದು ಕಿವಿಯಲ್ಲಿ ಭಂಗಿ ಚಿಲುಮೆ ಸಿಕ್ಕಿಸಿಕೊಂಡು

ಬಸವಣ್ಣ ನೀಲಮ್ಮ ಅವರ ಭಕ್ತಿ ಪರೀಕ್ಷೆಗೆ ಬರುತ್ತಾರೆ. ಸತ್ತ ಎಮ್ಮೆಕರು, ಚರ್ಮ, ಮಾಂಸ, ಹೆಂಡದ ಜೊತೆ ಗುರುತಿಸಿಕೊಳ್ಳುವ ಮಂಟೇಸ್ವಾಮಿ ದ್ರಾವಿಡ ಸಂಸ್ಕೃತಿ ಮತ್ತು ಆಚರಣೆಗಳ ಪ್ರತಿಪಾದಕನಾಗಿದ್ದಾರೆ. ಇಂದಿಗೂ ಮಂಟೇಸ್ವಾಮಿ ಸಂಸ್ಕೃತಿಯನ್ನು ಹಾಗೆಯೇ ಉಳಿಸಿಕೊಂಡು ಬಂದಿದೆ. ಸಾವಿರಾರು ಜನ ಭಕ್ತರಿದ್ದ ಜಾಗದಲ್ಲಿ ಇಂದು ಲಕ್ಷಾಂತರ ಜನಕ್ಕೆ ಏರಿದೆ. ಮದ್ಯ, ಮಾಂಸ, ಮಡ್ಡಿ, ಭಂಗಿ ಯಾವುದನ್ನು ನಿರಾಕರಿಸಿಲ್ಲ. ಕಾಲಕ್ಕೆ ಅನುಗುಣವಾಗಿ ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಅವು ಇಂದಿಗೂ ಜೀವಂತವಾಗಿ ಮುಂದುವರೆಯುತ್ತಿವೆ.

ಮಂಟೇಸ್ವಾಮಿ ಕೈಲಾಸ ಬಿಟ್ಟು, ಭೂಲೋಕಕ್ಕೆ ಬರುವುದು ಹಾಗೂ ಉತ್ತರದಿಂದ ಕತ್ತಲ ರಾಜ್ಯಕ್ಕೆ ಬರುವುದು ನರಮುಂಡಾ ಮಕ್ಕಳಿಗೆ ಬೆಳಕು ತರುವುದಕ್ಕಾಗಿ ಕೆಳಜಾತಿಗಳಿಗೆ ಅಸ್ಪೃಶ್ಯ ಅನಿಷ್ಟ–ಕನಿಷ್ಟ ಎನಿಸಿದ ಸರ್ವಜನವರ್ಗಗಳಿಗೂ ಬೆಳಕಾಗಬೇಕೆನ್ನುವ ಕಾಳಜಿ ಇಡೀ ಮಂಟೇಸ್ವಾಮಿ ಕಾವ್ಯದಲ್ಲಿ ಧ್ವನಿತವಾಗಿದೆ. ಅವರು ಕತ್ತಲರಾಜ್ಯದಲ್ಲಿ ಸತ್ತವರ ಮನೆಗೆ, ಹೆತ್ತವರ ಮನೆಗೆ, ಬಡವರ ಮನೆಗೆ, ಬಲ್ಲಿದರ ಮನೆಗೆ, ಕುರುಬರ ಮನೆಗೆ, ಕುಂಬಾರರ ಮನೆಗೆ, ಹೊಲೆಯರ ಮನೆಗೆ, ಮಾದಿಗರ ಮನೆಗೆ, ಅರಸರ ಮನೆಗೆ, ಗುರುಗಳ ಮನೆಗೆ, ಕುಲೇಳು ಹದಿನೆಂಟು ಜಾತಿಯವರ ಮನೆಗೂ ಜ್ಯೋತಿಯಾಗುತ್ತಾರೆ. ಅಲ್ಲದೆ ತಿಪ್ಪೆಯ ಮೇಲೆ ಹಚ್ಚಿಇಟ್ಟರೂ (ಅಸ್ಸಿಟ್ಟರೂ) ಏಕದುಡವಾಗಿ ಹತ್ಕ ಉರಿಯೋ ಜ್ಯೋತಿಯಾಗುವ ಮೂಲಕ ಅದು ಮಾನವೀಯತೆಯನ್ನು ಸಾರುತ್ತದೆ.

ಮಂಟೇಸ್ವಾಮಿ ಹಾಗೂ ಅವರ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿ ಅವರು ಲೋಕ ಕಲ್ಯಾಣಕ್ಕಾಗಿ, ಸಮಸಮಾಜದ ನಿರ್ಮಾಣಕ್ಕಾಗಿ ಮನುಷ್ಯರನ್ನೇ ಭಿಕ್ಷೆ ಪಡೆದಿದ್ದಾರೆ. ಕಾವ್ಯದಲ್ಲಿ ಉಲ್ಲೇಖವಿರುವಂತೆ ಕಾಲಜ್ಞಾನದ ಭಿಕ್ಷೆ, ಖಂಡಜ್ಞಾನದ ಭಿಕ್ಷೆ, ಅರಿವಿನ ಭಿಕ್ಷೆ, ಅಕ್ಷರ ಭಿಕ್ಷೆಗಳನ್ನು ಪಡೆದಿದ್ದಾರೆ. ಇದು ಅನಕ್ಷರಸ್ಥ ಸಮುದಾಯಗಳ ಪರವಾದ ಅಕ್ಷರದಾಹದ ಸಂಕೇತವಾಗಿದೆ. ಶಿಶು–ಮಕ್ಕಳ ಭಿಕ್ಷೆ ಕೇಳುವುದರ ಮೂಲಕ ಪ್ರಾರಂಭಿಸಿ, ತಳಭಿಕ್ಷೆ, ಒಕ್ಕಲುಭಿಕ್ಷೆ, ಕಬ್ಬಿಣದಭಿಕ್ಷೆಗಳನ್ನು ಪಡೆದಿದ್ದಾರೆ. ಹೀಗೆ ಬೇಡಿ ಪಡೆದ ಭಿಕ್ಷಾ ಪದ್ಧತಿಯಿಂದಲೇ ಮಂಟೇಸ್ವಾಮಿ ತಮ್ಮ ಪಂಥವನ್ನ ಹಾಗೂ ಸಮಸಮಾಜವನ್ನು ಕಟ್ಟುತ್ತಾರೆ. ಮೇಲುಕೀಳು ಬಡವ–ಬಲ್ಲಿದ, ಮಡಿ–ಮೈಲಿಗೆ ಎಲ್ಲವನ್ನು ಎಲ್ಲರನ್ನು ಒಂದು ಮಾಡುವ ಆಶಯ ಇಟ್ಟಿಕೊಂಡಿದ್ದವರು ಮಂಟೇಸ್ವಾಮಿ. ಆ ಕಾರಣಕ್ಕಾಗಿ ಅವರು ಹೋದ ಹೋದ ಕಡೆಯಲೆಲ್ಲಾ ಶಿಷ್ಯವೃಂದವನ್ನು ಹೆಚ್ಚಿಸಿಕೊಳ್ಳುತ್ತ, ಕೆಳವರ್ಗಗಳ ಕಾಯಕಕ್ಕೆ ಹೆಚ್ಚು ಮಹತ್ವಕೊಡುತ್ತ ಆ ಮೂಲಕ ಅವರಿಗೆ ದನಿಯಾಗಿರುವ ಅಸಂಖ್ಯಾತ ವಿವರಗಳು ಇಡೀ ಕಾವ್ಯದ ತುಂಬಾ ಮೇಳೈಸಿರುವುದನ್ನು ಕಾಣಬಹುದು.

ಶಿಷ್ಟ ಸಮಾಜ ಯಾವುದನ್ನು ತಿರಸ್ಕರಿಸಿತ್ತೋ ಅವುಗಳನ್ನೇ ಮಂಟೇಸ್ವಾಮಿ ಅವರು ಪುರಸ್ಕರಿಸಿದರು. ಕೀಳು, ಅಸಹ್ಯ, ಕೊಳಕು, ಅನಿಷ್ಟ, ಕನಿಷ್ಟ ಎನಿಸಿದವುಗಳನ್ನೇ ತಮ್ಮ ಸಂಕೇತಗಳು ಹಾಗೂ ಪ್ರತಿಭಟನಾ ಅಸ್ತ್ರಗಳನ್ನಾಗಿಸಿಕೊಳ್ಳುತ್ತ ಮಂಟೇಸ್ವಾಮಿ ಅವರು ಶ್ರೇಷ್ಠ-ಪವಿತ್ರ-ಉನ್ನತ ಹಾಗೂ ಮೌಲ್ಯವೆಂದು ಪ್ರತಿಪಾದಿಸಿದರು. ಆ ಮೂಲಕ ಸ್ಥಾವರ, ಶಿಷ್ಟ ಸಂಸ್ಕೃತಿ ಹಾಗೂ ಮಡಿವಂತ ಆಚರಣೆಗಳನ್ನು ಕೊನೆಗಾಣಿಸಿದರು.

ಮಂಟೇಸ್ವಾಮಿ ಅವರು ಶಿಷ್ಟ ಮತ್ತು ಸ್ಥಾವರ ಸಂಸ್ಕೃತಿಯ ಕೇಂದ್ರ ನೆಲೆಯಾದ ಕಲ್ಯಾಣಕ್ಕೆ ಹೋಗುವಾಗುವಿನ ಅವರ ವೇಷ ಭೂಷಣಗಳು ಬಹಳ ರೋಮಾಂಚನವಾಗಿವೆ. ಅಂದರೆ ಸತ್ತ ಎಮ್ಮೆಕರುವನ್ನು ಹೊತ್ತುಕೊಂಡು ಎಮ್ಮೆ ಚಕ್ಕಳ ಹೊದ್ದು, ಕೈಲಿ ಸುರೆಗಡಿಗೆ ಹಿಡಿದು ಕಿವಿಯಲ್ಲಿ ಭಂಗಿ ಚಿಲುಮೆ ಸಿಕ್ಕಿಸಿಕೊಂಡು ಬಸವಣ್ಣ ನೀಲಮ್ಮನವರ ಪರೀಕ್ಷೆಗೆ ಬರುತ್ತಾರೆ. ಈ ಹೆಂಡ, ಬಾಡು, ಭಂಗಿಯನ್ನು ಸಿದ್ಧರು, ಸೂಫಿಗಳು ಹಾಗೂ ನಾಥರು ತಮ್ಮ ಸಿದ್ಧಿಸಾಧನೆಗೆ ಉತ್ತೇಜಕವಾಗಿ ಬಳಸುತ್ತಿದ್ದ ಉದಾಹರಣೆಗಳಿವೆ. ಈ ಹಿನ್ನೆಲೆಯಲ್ಲಿ ತಿರಸ್ಕರಿಸಿದ ಪದ್ಧತಿ ಹಾಗೂ ವಸ್ತುಗಳು ಪ್ರತಿಸಂಸ್ಕೃತಿಯ ಸಂಕೇತಗಳಾಗಿ, ಪರ್ಯಾಯಮೌಲ್ಯ ಮತ್ತು ನಂಬಿಕೆಗಳಾಗಿ ಕಾವ್ಯದಲ್ಲಿ ಹೊಸ ಅರ್ಥವನ್ನು ಪಡೆದುಕೊಂಡಿವೆ.

ಕಾಲಜ್ಞಾನಿಯಾದ ಮಂಟೇಸ್ವಾಮಿ ಆಧುನಿಕತೆಯ ಮುನ್ಸೂಚನೆಯನ್ನು ನೀಡುತ್ತಾರೆ. ಅಂದರೆ ಕಲಿಯುಗದ ದಶಾವತಾರಗಳನ್ನು ತಿಳಿಸುತ್ತಾರೆ. ಕಲಿ ಎಂದರೆ ಆಧುನಿಕ ಆವಿಷ್ಕಾರಗಳೇ ಆಗಿವೆ. ಆಧುನಿಕತೆಯ ಹಿಂದೆಬಿದ್ದ ಮಾನವ ಅಂತಿಮವಾಗಿ ವಿನಾಶದತ್ತ ಸಾಗುತ್ತಾನೆ ಎಂಬುದನ್ನು ತಿಳಿಸುವುದೇ ಮಂಟೇಸ್ವಾಮಿ ಕಲಿಸಾರುವುದು ಆಗಿದೆ. ಇಂತಹ ನೂರಾರು ಆಧುನಿಕ ಜಗತ್ತಿನ ಭವಿಷ್ಯವಾಣಿಯನ್ನು ನುಡಿದವನು ಮಂಟೇಸ್ವಾಮಿ. ಹಾಗಾಗಿ, ಮಂಟೇಸ್ವಾಮಿಯ ಕಾವ್ಯ ಆಧುನಿಕತೆಯ ಹೆಸರಿನಲ್ಲಿ ಉಂಟಾಗುವ ತಾರತಮ್ಯ ಹಾಗೂ ಜಾಗತೀಕರಣದ ಪ್ರಕ್ರಿಯೆಗಳೆಲ್ಲವನ್ನು ಕಲಿಸಾರುವ ಭಾಗದಲ್ಲಿ ಪ್ರತಿರೋಧಿಸಿದೆ. ಇಂದು ಶೂದ್ರಾತಿಶೂದ್ರರೆಲ್ಲ ಮಂಟೇಸ್ವಾಮಿ ಪರಂಪರೆಗೆ ನಡೆದುಕೊಳ್ಳುತ್ತಾರೆ. ವಿಶೇಷವಾಗಿ ದಲಿತರು; ಕುಂಬಾರರು, ಉಪ್ಪಲಿಗರು ಮತ್ತು ನಾಯಕರು (ತೊರೆಯರು) ಮಂಟೇಸ್ವಾಮಿ ಕಾವ್ಯ ಸಂಪ್ರದಾಯದ ಗಾಯಕರಾಗಿದ್ದಾರೆ.

ಮಂಟೇಸ್ವಾಮಿಯ ಮೂಲಕ ಸಿದ್ದಪ್ಪಾಜಿ ಹಲಗೂರು ಪಂಚಾಳದವರನ್ನು ಗೆದ್ದು ಕಬ್ಬಿಣ ಭಿಕ್ಷೆ ಪಡೆಯುತ್ತಾರೆ. ಈ ಕಬ್ಬಿಣದ ಭಿಕ್ಷೆ ಪಡೆಯುವುದರ ಹಿಂದೆ ಒಂದು ದೊಡ್ಡ ಆರ್ಥಿಕ ವ್ಯವಸ್ಥೆಯನ್ನು ಪರಿವರ್ತಿಸುವ ಮಹತ್ವದ ಉದ್ದೇಶವಿದೆ.

ಕಬ್ಬಿಣದ ಭಿಕ್ಷೆ ಎನ್ನುವುದು ಒಂದು ಸಂಕೇತವಷ್ಟೆ. ಸಮಾಜದಲ್ಲಿ ಉತ್ಪಾದನೆಯಾಗುತ್ತಿದ್ದ ಆರ್ಥಿಕ ಅಸಮಾನತೆಯನ್ನು ತಡೆಯಲು ಮಂಟೇಸ್ವಾಮಿ ಅವರು ಒಂದು ತಾತ್ವಿಕ ಹೋರಾಟ ಮಾಡಿದರು. ಇಂದಿನ ಆರ್ಥಿಕತಜ್ಞರಿಗೆ ಮಂಟೇಸ್ವಾಮಿ ಅಂದು ರೂಪಿಸಿದ ಈ ಆರ್ಥಿಕ ಸಮಾನತೆಯ ನೀತಿ ಮಾದರಿಯಾದುದಾಗಿದೆ. ಹಾಗೆ ನೋಡಿದರೆ ಆರ್ಥಿಕ ವಿಕೇಂದ್ರೀಕರಣದ ಪರಿಕಲ್ಪನೆಯ ಆದ್ಯಪ್ರವರ್ತಕರೇ ಮಂಟೇಸ್ವಾಮಿ ಎನ್ನಬಹುದು.

ಮಂಟೇಸ್ವಾಮಿ ಕತ್ತಲ ದೇಶದಲ್ಲಿ 'ಜ್ಯೋತಿ' ಯಾಗುವ ಪ್ರತಿಮೆಯು ಸಮಾಜದಲ್ಲಿ ನಿರ್ಲಕ್ಷಿಸಿದ ಜನತೆಯನ್ನು ಸಬಲರನ್ನಾಗಿಸಿದೆ. ಅವರ ಈ ಜಾತ್ಯಾತೀತ ನಾಯಕತ್ವ ಸಮಾಜವಾದಿ ಜೀವನದರ್ಶನದ ಸಂಕಥನವಾಗಿದೆ. ಕೆಳಜಾತಿಗಳಿಗೆ ಸಾಮಾಜಿಕ ಮನ್ನಣೆ ಹಾಗೂ ಸಾಂಸ್ಕೃತಿಕ ಅಧಿಕಾರ ಸಿಕ್ಕಾಗ ಮಾತ್ರ ಸಮಾಜದಲ್ಲಿ ಅವರು ಸ್ವಾಭಿಮಾನದಿಂದ ಬದುಕಲುಸಾಧ್ಯ ಎನ್ನುವ ವಿಚಾರವನ್ನು ಮಂಟೇಸ್ವಾಮಿ ಅಂದು ಎತ್ತಿಹಿಡಿದಿದ್ದಾರೆ. ಅವರು ಎಲ್ಲಾ ಜಾತಿಗಳನ್ನು ಈಗಾಗಲೇ ಇದ್ದ ಜಾತಿ ಪ್ರಪಂಚದ ಆಚೆಗಿನ ಆಧ್ಯಾತ್ಮಿಕ ಪಯಣಕ್ಕೆ ಕರೆದುಕೊಂಡು ಹೋದ ಬಹುದೊಡ್ಡ ಸಾಂಸ್ಕೃತಿಕ ಚಳವಳಿಗಾರ. ಆದ್ದರಿಂದಲೇ ಮಂಟೇಸ್ವಾಮಿ ತಳಸಮುದಾಯಗಳ ಆಧ್ಯಾತ್ಮಿಕ ಶಕ್ತಿ ಹಾಗೂ ಸ್ವಾಭಿಮಾನದ ಸಂಕೇತಕ್ಕೆ ಸಾಕ್ಷಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಟೇಸ್ವಾಮಿ ಕಾವ್ಯಪರಂಪರೆ ಕೆಳಜಾತಿಗಳ ಅಲಕ್ಷಿತ ನೆಲೆಗಳ ಆಧ್ಯಾತ್ಮಿಕ ಚರಿತ್ರೆಯನ್ನು ಕಟ್ಟಿಕೊಡುತ್ತದೆ.

ನೀಲಗಾರರ ಕಥಾ ಜಗತ್ತೇ ತಳಸಮುದಾಯಗಳ ಸಂಘರ್ಷ ಹಾಗೂ ಅವರ ಸ್ವಾಭಿಮಾನದ ಆಂದೋಲನದಂತೆ ಕಂಡುಬಂದಿದೆ. ಈ ಕಾವ್ಯಪರಂಪರೆಯ ರೂಪಕ ಜಗತ್ತು, ಧಾರ್ಮಿಕ ಪ್ರಭುತ್ವ, ಆಧ್ಯಾತ್ಮಿಕ ಪ್ರಭುತ್ವಗಳಿಂದ ದೇವರು-ಧರ್ಮಗಳನ್ನು ಬಿಡುಗಡೆ ಮಾಡಿ 'ಪರಂಜ್ಯೋತಿ' ಪರಂಪರೆಯನ್ನಾಗಿಸಿದೆ. ಮಂಟೇಸ್ವಾಮಿ ನಾಯಕತ್ವದ ಸಾಂಸ್ಕೃತಿಕತೆಯು 'ಜಾತಿ'ಯನ್ನು 'ಕುಲ'ವನ್ನಾಗಿಸುವುದರ ಮೂಲಕ ಎಲ್ಲ ಜಾತಿವರ್ಗಗಳಿಗೆ ವೈಜ್ಞಾನಿಕವಾದ ಸಮಾನತೆಯನ್ನು ತಂದುಕೊಟ್ಟಿದೆ. ಅವರು ಪ್ರತಿಪಾದಿಸುವ ಸಾಮಾಜಿಕತೆಯು ವೈದಿಕ ಜಾತಿ ಸಮಾಜಕ್ಕಿಂತಲೂ ಭಿನ್ನವಾದದ್ದು. 'ಕುಲ' ಎಂಬ ಪರಿಕಲ್ಪನೆಯಲ್ಲಿ ಎಲ್ಲ ಕಾಯಕ ಜೀವಿಗಳನ್ನು ಸಂಘಟಿಸಿ ಭಕ್ತರನ್ನಾಗಿಸಿಕೊಳ್ಳುವುದು ಜಾತಿ ಸಂರಚನೆಯ ವಿರುದ್ಧವಾಗಿ 'ಕುಲ'ಗಳನ್ನು ಸಂಘಟಿಸುವುದೇ ಆಗಿದೆ.

ವಚನ ಚಳವಳಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಮೇಲ್ವರ್ಗಗಳ ಡಾಂಭಿಕತೆಯನ್ನು ಅಹಂಕಾರವನ್ನು ಒಣ ಆಚಾರ-ವಿಚಾರ ನೀತಿಗಳನ್ನು ಬಯಲು

ಮಾಡಿದ ಮಂಟೇಸ್ವಾಮಿ ತಮ್ಮ ನಾಯಕತ್ವದಲ್ಲಿ ಅನೇಕ ಹಿಂದುಳಿದ ವರ್ಗ ಹಾಗೂ ಅಸ್ಪೃಶ್ಯ ಜಾತಿಗಳಿಗೆ ದೀಕ್ಷೆ ನೀಡಿ ಅವರನ್ನು ತನ್ನ ಕುಲಪರಂಪರೆಯೊಳಗಿನ ಭಕ್ತನಾಗಿಸಿಕೊಳ್ಳುತ್ತವೆ. ಗುರುವಿಗೆ ಶಿಷ್ಯನಾದ ಮೇಲೆ ಜಾತಿಮೂಲ ಹಾಗೂ ಕುಟುಂಬ ಸಂಬಂಧ ಅಲ್ಲಿಗೆ ಕೊನೆಯಾಗುತ್ತದೆ. ಅನಂತರ ಭಕ್ತಪರಂಪರೆಯ ಮೂಲಕ ತನ್ನೆಲ್ಲಾ ಸಂಬಂಧಗಳು ಮುಂದುವರೆಯುತ್ತವೆ.

ಧರೆಗೆ ದೊಡ್ಡವರು ಎಂಬ ರೂಪಕವೇ ಮಂಟೇಸ್ವಾಮಿ ದುಡಿವ ಹಾಗೂ ಸಣ್ಣಪುಟ್ಟ ಕಸುಬುದಾರರ ಬದುಕು ಬವಣೆಗಳಿಗೆ ಬಹಳ ಆಪ್ತವಾಗಿ ಸ್ಪಂದಿಸಿದವನೆಂದು ಹೇಳುತ್ತದೆ. ಮಂಟೇಸ್ವಾಮಿ ಕಾವ್ಯಪರಂಪರೆಯು ಇತಿಹಾಸ ಮರೆಮಾಚಿದ ಜನಗಳ ಕಥೆಯನ್ನು ಸಾರುತ್ತದೆ. ಇಂದಿನ ಆಧುನಿಕ ಪ್ರಜಾಪ್ರಭುತ್ವವು ಬಡವರಿಗೆ ಅಕ್ಕಿ, ಶಿಕ್ಷಣ, ವಸತಿಗಳನ್ನು ನೀಡುವುದರಲ್ಲೆ ಕಾಲಕಳೆದರೆ; ನಮ್ಮ ಪರಂಪರೆಯ ಮಂಟೇಸ್ವಾಮಿ ಹೊಲೆ-ಮಾದಿಗರಿಗೆ ಸಾಂಸ್ಕೃತಿಕ ಹಕ್ಕುಗಳ ಹೋರಾಟವನ್ನು ಹೇಳಿಕೊಟ್ಟಿದ್ದಾರೆ. ಕಲ್ಯಾಣದಲ್ಲಿ ತಾವೇ ಲಿಂಗವಂತರು ಎನ್ನುತ್ತಿದ್ದ, ಕೇವಲ ಒಣ ಪ್ರತಿಷ್ಠೆಯ ಡಾಂಭಿಕರನ್ನು ಲೇವಡಿ ಮಾಡುತ್ತಲೇ ಅಂಥವರ ಲಿಂಗಗಳನ್ನು ಮಾಯ ಮಾಡುವುದರ ಮೂಲಕ ಲಿಂಗತ್ವ ತೋರಿಕೆಯದು ಎಂದು ಬಯಲುಗೊಳಿಸುತ್ತಾರೆ.

ಲಿಂಗವು ಜಾತಿಸೂಚಕ ಪ್ರತಿಮೆಯಾದಾಗ ಅಂತಹ ಲಿಂಗವನ್ನು ಮಂಟೇಸ್ವಾಮಿ ಹೆಂಡದ ಗಡಿಗೆಗೆ ಕಿತ್ತುಹಾಕುತ್ತಾರೆ. ಹಾಗೆಯೇ 'ಕೊತ್ತಿಗೆ ಲಿಂಗ', 'ನಾಯಿಗೆಲಿಂಗ' ಎಂದು ಕಲ್ಯಾಣದ ಪ್ರತಿಷ್ಠಿತರ ಲಿಂಗವನ್ನು ಅಪಮೌಲ್ಯೀಕರಿಸುತ್ತಾರೆ. ಹೀಗೆ ಜಾತಿಸೂಚಕ ಪ್ರತಿಮೆಗಳ ಶ್ರೇಷ್ಠತೆಯನ್ನು ಒಡೆದು ಇದಕ್ಕೆ ಪರ್ಯಾಯವಾಗಿ ತಿಪ್ಪೆಯ ಮೇಲೆ ಜ್ಯೋತಿ ಕಾಣಿಸಿಕೊಳ್ಳುತ್ತದೆ. ಮಂಟೇಸ್ವಾಮಿ ಕೀವು, ರಕ್ತಗಳಿಂದ ಅಸಹ್ಯವಾಗಿದ್ದರೂ ಕೂಡ ಮಡಿ ಮೈಲಿಗೆಯ ಕಲ್ಯಾಣವನ್ನು ಹಾಗೂ ಲಿಂಗವಂತರ ಲಿಂಗವನ್ನು ಅದರ ಪ್ರತಿಷ್ಠೆಗಳನ್ನು ಹೊಡೆದು ಹಾಕುತ್ತಾ, ಸಮಾಜದೊಳಗಿನ ತರತಮಗಳನ್ನು ಕೊನೆಗಾಣಿಸುತ್ತಾರೆ.

ಮಂಟೇಸ್ವಾಮಿ ಎಂದೂಕೂಡ ಜಾತಿ ಮೂಲದ ಸೂತಕಗಳನ್ನು ಒಪ್ಪದವರು. ಯಜಮಾನ ಸಂಸ್ಕೃತಿಯಿಂದ ಅಮಲಿಗೇರಿದ ಸಿದ್ದಪ್ಪಾಜಿ ಮತ್ತು ಪಾಂಚಾಳರನ್ನು ಇಂತಹ ಸೂತಕಗಳಿಂದ ಮುಕ್ತ ಮಾಡುತ್ತಾನೆ. ಮುಟ್ಟನ್ನು ಅಪವಿತ್ರವೆಂದು ನೋಡುವ ಸಮಾಜಕ್ಕೆ "ಮುಟ್ಟು ಹುಟ್ಟಿನ ಮೂಲ" ಎಂದು ಸಾರುತ್ತಾನೆ. ಹೀಗೆ ಸ್ಥಾಪಿತ ಮೌಲ್ಯ ಹಾಗೂ ಪ್ರಧಾನ ಸಂಸ್ಕೃತಿಗೆ ವಿರುದ್ಧವಾಗಿ ಕೆಲವರ್ಗಗಳ ಸಾಂಸ್ಕೃತಿಕ ಅಸ್ತಿತ್ವದ ಪರವಾಗಿ ಹೋರಾಡಿ ಪರ್ಯಾಯ ಸಂಸ್ಕೃತಿಯನ್ನು ಕಟ್ಟಿಬೆಳೆಸಿದರು.

ಮಂಟೇಸ್ವಾಮಿಯ ಸಾಂಸ್ಕೃತಿಕ ಪರ್ಯಟನೆಯೊಂದಿಗೆ ಸಾಗುವ ಈ ಮಂಟೇಸ್ವಾಮಿ ಕಥಾನಕ ಬಹಳ ಮುಖ್ಯವಾಗಿ ಶಿಶುಮಕ್ಕಳನ್ನು ಪಡೆಯುತ್ತ ಹೋಗುತ್ತದೆ. ಶಿಶುಮಕ್ಕಳನ್ನು ಪಡೆಯುವ ಪ್ರಕ್ರಿಯೆ ಇಲ್ಲಿ ಒಂದು ಸಂಕೇತವಾಗಿ ಕಾಣುತ್ತದೆ. ಅಂದರೆ ಒಂದೊಂದೇ ಸಮುದಾಯ ಮಂಟೇಸ್ವಾಮಿಯ ಸಾಂಸ್ಕೃತಿಕ ಗಡಿಯೊಳಗೆ ಸೇರಿಕೊಳ್ಳುತ್ತವೆ. ರಾಚಪ್ಪಾಜಿ, ಸಿದ್ದಪ್ಪಾಜಿ, ತೋಪಿನ ದೊಡ್ಡಮ್ಮ, ಚನ್ನಾಜಮ್ಮ, ಫಲಾರದಯ್ಯ, ಮಡಿವಾಳ ಮಾಚಯ್ಯನಂಥ ಭಕ್ತರು ಮಂಟೇಸ್ವಾಮಿ ಅವರ ಪ್ರಮುಖ ಅನುಯಾಯಿಗಳು. ಮಂಟೇಸ್ವಾಮಿ ಕಾವ್ಯದ ಉದ್ದಕ್ಕೂ ಮಾಟ, ಮಂತ್ರ, ಮೋಡಿ, ಮಾಯಕಾರ ವಿದ್ಯೆಗಳು ಆಗಾಗ್ಗೆ ಕಾಣಿಸಿಕೊಳ್ಳುತ್ತ ವಿಜೃಂಭಿಸುತ್ತವೆ. ಅಹಂಕಾರದಿಂದ ನಡೆದುಕೊಳ್ಳುತ್ತಿದ್ದವರ ಸೊಕ್ಕನ್ನು ಅಡಗಿಸಿ ಅವರನ್ನು ಬದಲಾಯಿಸುವ ಕಾರಣಕ್ಕಾಗಿ ಮಂಟೇಸ್ವಾಮಿ ಅವರಿಗೆ ಈ ಮಾಯಕಾರ ವಿದ್ಯೆ ಸಹಕಾರಿಯಾಗಿರಬಹುದು.

ಮಂಟೇಸ್ವಾಮಿ ಅಹಂಕಾರಿಗಳ ಸದ್ದು ಅಡಗಿಸಿ ಅವರು ಎಷ್ಟೇ ಪ್ರಭಾವಿಗಳಾದರೂ ಅವರ ಅಸ್ತಿತ್ವವನ್ನು ಅಲುಗಾಡಿಸುವ ಮಹಾಶಕ್ತಿವಂತರು. ಅವರಿಗೆ ಎಂಥ ಇಕ್ಕಟ್ಟಿನ ಸನ್ನಿವೇಶ ಎದುರಾದರೂ ಅದನ್ನು ಸೌಮ್ಯವಾಗಿಯೇ ತೆಗೆದುಕೊಳ್ಳುತ್ತಿದ್ದರು. ಅಸಾಧ್ಯ ಎಂದಾಗ ಮಾತ್ರ ಅವರು ಮೌನಿಯಾಗುತ್ತಿದ್ದರು. ಆಗಾಗ್ಗೆ ಕುಂತೂರು ಬೆಟ್ಟಹತ್ತಿ ಅದರ ತುತ್ತತುದಿಯಲ್ಲಿ ಕೂತು ಭಂಗಿ ಸೇವನೆ ಮಾಡುತ್ತಾರೆ. ಅವರ ಈ ಭಂಗಿಸೇವೆ ಕೇವಲ ಹೊರಗೆ ಹೊಗೆ ಹಾಕುವ ಕ್ರಿಯೆ ಅಲ್ಲ ಅದರೊಳಗೆ ಮಾನವನ ಬದುಕಿನ ಸಮಸ್ತ ವ್ಯವಹಾರಗಳು ಅಡಗಿರುತ್ತಿದ್ದವು. ಕುಂತಲ್ಲೇ ಕ್ಷಣಮಾತ್ರದಲ್ಲಿ 'ಖಂಡಗ ಗಟ್ಟಲೆ' ಭಂಗಿಯನ್ನು ಸೇದು ವಾಲುತ್ತ, ಜೋಲುತ್ತ ಇರುವಂಥ ಸ್ಥಿತಿಯಲ್ಲಿ ಅವರಿಗೆ ನೂರಾರು ಪರಿಹಾರಗಳು ಹೊಳೆಯುತ್ತಿದ್ದವು. ಆ ಸಂದರ್ಭದಲ್ಲಿ ಅವರು ತೆಗೆದುಕೊಂಡ ತೀರ್ಮಾನಗಳು ಫಲಿಸುತಿದ್ದವು. ಅವು ಜನಪರ ಹಾಗೂ ಜೀವಪರವಾದುವುಗಳಾಗಿರುತ್ತಿದ್ದವು.

ಮಠಮನೆ ಮಾಡಿಕೊಳ್ಳುವುದಕ್ಕೆ ಬೊಪ್ಪೇಗೌಡನ ಕುರಿದೊಡ್ಡಿಯನ್ನು ಮಂಟೇಸ್ವಾಮಿ ಮಾಡಿರುವ ಆಲೋಚನೆ ಕೂಡ ದಲಿತ ಸಂವೇದನೆಗೆ ಹತ್ತಿರವಾಗಿದೆ. ಯಾವುದೇ ಶಿಷ್ಟ ಸಂಸ್ಕೃತಿಯೊಳಗೆ ಕೊಳಕು-ಕನಿಷ್ಠ ಜಾಗಗಳಲ್ಲಿ ಪವಿತ್ರವಾದ ಕೆಲಸ ನಡೆಯುವುದಿಲ್ಲ. ಆದರೆ ಮಂಟೇಸ್ವಾಮಿ ಅವರು ಬೊಪ್ಪೇಗೌಡನಪುರದ ಕುರಿ ದೊಡ್ಡಿಯೇ ಶ್ರೇಷ್ಠವೆಂದು ತಿಳಿದು ಅದನ್ನೇ ತಮ್ಮ ಕೇಂದ್ರಸ್ಥಾನದ ಮಠ ಮನೆಯನ್ನಾಗಿ ಮಾಡಿಕೊಳ್ಳುತ್ತಾರೆ. ಕೊಳಕಿನಲ್ಲೇ ಸ್ವಚ್ಛತೆಯನ್ನು, ಕತ್ತಲೆಯಲ್ಲೇ ಬೆಳಕನ್ನು, ಕಸದಲ್ಲೇ ರಸವನ್ನು, ನಿರ್ಲಕ್ಷೆಯಲ್ಲೇ ಮಹತ್ವವಾದುದನ್ನು ಕಾಣುವ

ಹಾಗೂ ಸಾಧಿಸುವ ಚಲಗಾರ ಸಾತ್ವಿಕ ಕನಸುಗಾರ. ಇದು ಮಂಟೇಸ್ವಾಮಿ ಅವರು ಕಾಯಕ ಜೀವಿಗಳಲ್ಲಿರುವ ನಿಜವಾದ ಬದುಕನ್ನು ಗ್ರಹಿಸಿರುವ ಮಾದರಿಯಾಗಿದೆ. ಹಾಗೆಯೇ ಮಡಿವಾಳ ಮಾಚಯ್ಯನ ಕತ್ತೆಕೊಟ್ಟಿಗೆಯನ್ನು ಚಂದ್ರಶಾಲೆಯನ್ನಾಗಿ ಮಾಡಿಕೊಳ್ಳುತ್ತಾರೆ. ಇಲ್ಲೂ ಕೂಡ ಅಲಕ್ಷಿತ ಜಾಗಕ್ಕೂ ಮಹತ್ವ ತಂದುಕೊಡುವ ಆಶಯವಿರುವಂಥದ್ದು ಎದ್ದುಕಾಣುತ್ತದೆ.

ಹೀಗೆ ಮಂಟೇಸ್ವಾಮಿ ಅವರ ಸಾಂಸ್ಕೃತಿಕ, ನಾಯಕತ್ವ ಅಲಕ್ಷಿತ ಹಾಗೂ ಅಸ್ಪೃಶ್ಯ ಸಮಾಜಗಳ ಸಂವೇದನೆಗಳಿಗೆ ಮಹತ್ವ ತಂದುಕೊಡುವಲ್ಲಿ ಯಶಸ್ವಿಯಾಗಿದೆ. ಅದು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಹಿಂದುಳಿದ ಸಮಾಜಗಳ ಪರವಾದ ಹೋರಾಟವಾಗಿದ್ದು, ಸಮಸಮಾಜದ ನಿರ್ಮಾಣಕ್ಕೆ ಕಾರಣವಾಗಿದೆ. ಕನಿಷ್ಠತೆಯಲ್ಲಿ ಶ್ರೇಷ್ಠತೆಯನ್ನು ಕಾಣುವುದು ಹಾಗೂ ತಳಸಮುದಾಯಗಳನ್ನು ಗೌರವಿಸಿ ಅವರಿಗೊಂದು ಸಾಂಸ್ಕೃತಿಕ ಅಸ್ತಿತ್ವದಂತಹ ಶಿಷ್ಟ ನೆಲೆಯನ್ನು ಒದಗಿಸುವುದು ಮಂಟೇಸ್ವಾಮಿ ಅವರು ಮಾಡುವ ಸಾಂಸ್ಕೃತಿಕ ಹೋರಾಟದ ಮುಖ್ಯ ಉದ್ದೇಶವಾಗಿದೆ.

□□□

೨. ಪ್ರಾಚೀನ ನಾಗರಿಕತೆಗಳಲ್ಲಿ ದೇವತೆಗಳ ಪರಿಕಲ್ಪನೆ

– ಹಂಸವೇಣಿ ಈ.

ವೇದಪೂರ್ವ ಕಾಲದಿಂದಲೂ ಗ್ರಾಮದೇವತೆಗಳ ಪರಿಕಲ್ಪನೆ ಕಂಡುಬರುತ್ತಿದೆ. ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಗ್ರಾಮಗಳಲ್ಲಿ ಒಂದೊಂದು ವಿಧವಾದ ಗ್ರಾಮದೇವತೆಗಳು ನಿಶ್ಚಿತವಾಗಿ ಕಂಡುಬರುತ್ತಿವೆ. ಮಾನವನು ದೈವಾರಾಧನೆಯನ್ನು ತನ್ನ ಉಗಮದೊಂದಿಗೆಯೇ ಆರಂಭಿಸಿದನು. ತನ್ನ ಜೀವನವನ್ನು ಯಾವುದೋ ಕಾಣದ ಶಕ್ತಿ ನಿಯಂತ್ರಿಸುತ್ತಿದೆ ಎಂದು ತಿಳಿದ ಮಾನವ ಅದನ್ನು ಒಲಿಸಿಕೊಳ್ಳುವ ಸಲುವಾಗಿ ಆ ಶಕ್ತಿಗೆ ಅಧೀನನಾಗಿ ಆರಾಧಿಸತೊಡಗಿದನು. ಅಗೋಚರ ಶಕ್ತಿಯನ್ನು ಸುಪ್ರೀತಗೊಳಿಸಲು ನಾನಾ ವಿಧವಾದ ಆಚರಣೆಗಳನ್ನು ಸಹ ರೂಢಿಗತ ಮಾಡಿಕೊಂಡನು. ಅಗೋಚರಶಕ್ತಿಯ ಸಹಾಯವಿಲ್ಲದೇ ತನ್ನ ಜೀವನ ನಿರ್ವಹಣೆ ಕಠಿಣವಾದುದೆಂಬ ವಿಷಯ ಆತನಿಗೆ ಕಾಲಾನಂತರ ತಿಳಿಯಿತು. ಮಾನವನಿಗೆ ಸ್ವರ್ಗ–ನರಕಗಳೆರಡರ ಅರಿವು ಮೂಡಿದ ನಂತರದಲ್ಲಿ ದೈವೀಕಲ್ಪನೆ ಹೆಚ್ಚುತ್ತಲೇ ಬಂದಿತು. ಇಹ–ಪರಗಳೆರಡರಲ್ಲೂ ತಾನು ಸುಖ ಪಡೆಯಲು ದೈವಾರಾಧನೆಯೊಂದೇ ಮುಖ್ಯದಾರಿ ಎಂಬುದು ಆತನಿಗೆ ಖಚಿತವಾಯಿತು. ತನ್ನಂತೆ ದೇವರಿಗೆ ಆಸೆ–ಆಕಾಂಕ್ಷೆ, ಪ್ರೀತಿ–ದ್ವೇಷಗಳಿರುತ್ತವೆ ಎಂದು ತಿಳಿದು ಅವುಗಳನ್ನು ತಾನು ಪೂರೈಸಿದರೆ ತಾನು ಯಾವುದೇ ಕಷ್ಟಕಾರ್ಪಣ್ಯಗಳಿಗೆ ಒಳಗಾಗದೇ ಸಂತೋಷವಾಗಿರಬಹುದೆಂದು ನಿಶ್ಚಯಿಸಿದನು. ಈ ಎಲ್ಲ ಹಿನ್ನೆಲೆಯಲ್ಲಿ ದೈವಾರಾಧನೆ ಆರಂಭವಾಯಿತು.

ಒಂದು ಜೀವಿಗೆ ಜನನ ನೀಡಲು ತಂದೆ–ತಾಯಿ ಇಬ್ಬರೂ ಕಾರಣವಾದರೂ ಗರ್ಭಧಾರಣೆ, ಮಗುವಿನ ಲಾಲನೆ–ಪಾಲನೆ, ಆಹಾರ, ಬೆಳವಣಿಗೆಯಲ್ಲಿ ಮೂಲಾಧಾರವಾಗಿ ನಿಲ್ಲುವವಳು ತಾಯಿ. ಅದೇ ರೀತಿ ವಿಶ್ವದ ಸೃಷ್ಟಿ, ಬೆಳವಣಿಗೆ, ರಕ್ಷಣೆ ಮಾಡಿ ಎಲ್ಲರನ್ನು ಪೋಷಿಸುವವಳ ಸ್ಥಾನ ವಿಶ್ವಮಾತೆಗೆ ನೀಡಲಾಯಿತು. ಪ್ರತಿಯೊಂದು ವಿಷಯವನ್ನು ಹೆಚ್ಚು ಕಾಳಜಿವಹಿಸಿ ಪೋಷಿಸುವುದರಿಂದ ಆ ಮಹತ್ವದ ಸ್ಥಾನ ಸ್ತ್ರೀಗೆ ಲಭಿಸಿತು.

ಗ್ರಾಮದೇವತೆಗಳನ್ನು ವಿವಿಧ ಸಂಸ್ಕೃತಿಗಳು, ಜನಾಂಗಗಳು, ವಿವಿಧ ಕಾಲಗಳಲ್ಲಿ ವಿಭಿನ್ನವಾಗಿ ಅರ್ಥೈಸುತ್ತ ಬಂದಿದ್ದಾರೆ. ಅವುಗಳೆಂದರೆ ಪ್ರಾಚೀನ ನಾಗರಿಕತೆಗಳಲ್ಲಿ ದೇವತೆಗಳ ಪರಿಕಲ್ಪನೆ, ಬುಡಕಟ್ಟುಗಳಲ್ಲಿ ದೇವತೆಗಳ ಪರಿಕಲ್ಪನೆ, ಅನ್ಯಧರ್ಮೀಯರಲ್ಲಿ ದೇವತೆಗಳ ಪರಿಕಲ್ಪನೆ, ಕುಲದೇವತೆಯಾಗಿ ದೇವತೆಗಳ ಪರಿಕಲ್ಪನೆ, ಪ್ರಾಣಿ, ಭೂಮಿ, ಧಾನ್ಯ, ವೃಕ್ಷ ರೂಪಗಳಲ್ಲಿ ದೇವತೆಗಳ ಪರಿಕಲ್ಪನೆ.

ಇತಿಹಾಸ ಪೂರ್ವದ ಮತ್ತು ಶಿಲಾಯುಗ ಕಾಲದಲ್ಲಿಯೇ ದೇವತೆಯ ಪರಿಕಲ್ಪನೆಗಳು ಕಂಡುಬಂದಿವೆ. ಪ್ರಾಚೀನ ಕಾಲದಿಂದಲೂ ಆರಾಧನಾ ಪದ್ಧತಿಯು ನಡೆದುಕೊಂಡು ಬರುತ್ತಲೇ ಇದೆ. ಹಿಂದೆ ಅದು ಸೀಮಿತವಾಗಿದ್ದರೆ ಇಂದು ವಿಸ್ತಾರವಾಗಿದೆ. ಜೊತೆಗೆ ಅದರ ಆಚರಣೆಗಳು ವೈವಿಧ್ಯತೆಯನ್ನು ಸಹ ಪಡೆಯುತ್ತ ಬಂದಿದೆ. ಪ್ರಾಕೃತಿಕ ವಿಕೋಪಗಳಿಂದ ಭಯಭೀತನಾದ ಮಾನವ ತನ್ನಲ್ಲಿನ ತಪ್ಪುಗಳಿಂದ ತೊಂದರೆಗಳಾಗುತ್ತವೆ ಎಂದು ಭಾವಿಸಿ ತನ್ನ ತಪ್ಪುಗಳ ನಿಯಂತ್ರಣಕ್ಕಾಗಿ ದೈವಾರಾಧನೆಯನ್ನು ತಂದನು. ಪ್ರಕೃತಿಯಲ್ಲಿ ಕಂಡುಬರುವಂತಹ ಹೊಳೆ, ಗುಡ್ಡ, ಸೂರ್ಯ, ಚಂದ್ರ, ನಕ್ಷತ್ರ, ಮಳೆ, ಮೋಡ, ಭೂಕಂಪ, ಜ್ವಾಲಾಮುಖಿಗಳೆಲ್ಲವೂ ಸಹ ಆದಿಮಾನವನ ಗಮನ ಸೆಳೆದವು. ಅವುಗಳ ಆಕಾರ, ಕಾರ್ಯಗಳೆಲ್ಲವುಗಳಿಂದ ನಿಬ್ಬೆರಗಾದನು. ಇವುಗಳನ್ನು ಆರಾಧಿಸಿದರೆ ನನಗೆ ಯಾವುದೇ ತೊಂದರೆ ತೊಡಕುಗಳಾಗದು ಎಂಬ ಆಲೋಚನೆ ಆತನಲ್ಲಿ ಮೂಡಿತು. ಆದ್ದರಿಂದಲೇ ಇಂದಿಗೂ ಸೂರ್ಯನನ್ನು ಪೂಜ್ಯ ಭಾವನೆಯಿಂದ ಆರಾಧನೆ ಮಾಡಲಾಗುವುದು. ಅದಕ್ಕಾಗಿ ನಮ್ಮ ಜನಪದರ 'ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ....' ಎಂಬ ಗೀತೆಯು ನಮ್ಮಲ್ಲಿ ಎಷ್ಟಸಮಟ್ಟಿಗೆ ದೈವಕಲ್ಪನೆಯನ್ನು ಮೂಡಿಸಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಪ್ರಕೃತಿಯ ವಿವಿಧ ಸಂಪತ್ತುಗಳಾದ ಕಲ್ಲು, ಮಣ್ಣುಗಳನ್ನು ಸಹ ಪೂಜ್ಯ ಭಾವನೆಯಿಂದ ಆರಾಧಿಸಲಾಗುತ್ತದೆ. ಉದಾಹರಣೆಗೆ ಪಾಂಡವಪುರ ತಾಲ್ಲೂಕಿನ ಮಾರಮ್ಮ, ಬನಂತಮ್ಮ ದೇವತೆಗಳನ್ನು ಇಲ್ಲಿ ಹೆಸರಿಸಬಹುದು. ಎಲ್ಲ ಊರಿನ ಮಾರಮ್ಮ ದೇವತೆಯು ದೇವಾಲಯಗಳಲ್ಲಿ ಅಥವಾ ಬಯಲಲ್ಲಿಯೇ ಇದ್ದರೂ ಆಕೆಗೆ ನಿರ್ದಿಷ್ಟ ಸ್ವರೂಪವಿರುವುದಿಲ್ಲ. ಚಿಕ್ಕ–ಚಿಕ್ಕ ಕಲ್ಲುಗಳ ರೂಪದಲ್ಲಿ ಆಕೆ ನೆಲೆಸಿರುತ್ತಾಳೆ. ಬನಂತಮ್ಮನನ್ನು ಹಬ್ಬದ ಸಂದರ್ಭದಲ್ಲಿ ಎರೆಮಣ್ಣನ್ನು ತಂದು ಅದಕ್ಕೆ ಹಬ್ಬ ಮಾಡಿದ ನಂತರ ಆ ಮೂರ್ತಿಯನ್ನು ನೀರಲ್ಲಿ ವಿಸರ್ಜಿಸಲಾಗುವ ಪದ್ಧತಿ ಇದೆ. ಕೆಲವು ಕಡೆ ಮಾರಮ್ಮನು ಹುತ್ತದ ರೂಪದಲ್ಲಿ ನೆಲೆಸಿರುವುದು ಸಹ ಕಂಡುಬಂದಿದೆ.

"ಅನಾದಿಕಾಲದಲ್ಲಿ ಹುತ್ತ ಮತ್ತು ಹಾವು, ಯೋನಿ ಮತ್ತು ಲಿಂಗಗಳ ಪ್ರತೀಕವಾಗಿದೆ. ಲಿಂಗದ ಮಾಣಿಪೀಠವೇ ಯೋನಿ ಆಗಿದ್ದು, ಯೋನಿ-ಲಿಂಗಗಳ ಈ ನಿತ್ಯ ಸಂಯೋಗವನ್ನು ಆವರಿಸಿ ನಿಂತದ್ದು ಗರ್ಭಗುಡಿ. ಅಂದರೆ ಗರ್ಭಗುಡಿಯು ಗಂಡು-ಹೆಣ್ಣುಗಳ ಮಿಥುನದ ಪ್ರತೀಕವಾಗಿದೆ."[೧] ಇದು ವಾಸ್ತವ ಜೀವನಕ್ಕೂ ಹಾಗೂ ದೈವಗಳ ಆರಾಧನೆಗೂ ಇರುವ ನಿತ್ಯಸಂಬಂಧವನ್ನು ಪ್ರತಿನಿಧಿಸುತ್ತದೆ.

ಮೆಸಪಟೊಮಿಯ ಅಥವಾ ಸುಮೇರಿಯನ್ ನಾಗರಿಕತೆಯಲ್ಲಿ 'ಅನ, ಅನು', 'ಅಯ, ಎಂಕಿ', 'ಎನ್ಲಿಲ್, ಬಾಲ' ಎಂಬ ತ್ರಿಮೂರ್ತಿಗಳ ದೇವಾರಾಧನ ಪದ್ಧತಿ ಕಂಡುಬಂದಿದೆ. ಇದು ನಮ್ಮಲ್ಲಿನ ಬ್ರಹ್ಮ, ವಿಷ್ಣು, ಮಹೇಶ್ವರ ತ್ರಿಮೂರ್ತಿಗಳ ಆರಾಧನೆಗೆ ಸಮೀಪವಾಗಿದೆ. ಅದರಂತೆ 'ಅನ-ಅನು' ದೇವತೆಗೆ ಸೃಷ್ಟಿಕರ್ತನ ಸ್ಥಾನವಿದೆ. ಈ ದೇವತೆಯನ್ನು ಆ ಕಾಲದ ರಾಜ-ಮಹಾರಾಜರು ಮಾತ್ರ ಆರಾಧಿಸುತ್ತಿದ್ದರು. 'ಎರಿಚ್' ಎಂಬ ಪ್ರಾಚೀನ ನಗರ ಒಂದರಲ್ಲಿ ಮಾತ್ರ ಈ ದೇವತೆಗೆ ಗುಡಿ ನಿರ್ಮಿಸಿದ್ದು ಇಂದಿನ 'ವಾರ್ಕಾ' ನಗರದ ಬಳಿ ಈ ದೇವಾಲಯದ ಅವಶೇಷಗಳನ್ನು ಪತ್ತೆಹಚ್ಚಲಾಗಿದೆ. ಆ ದೇವತೆಗೆ ಪೂರ್ಣವಾಗಿ ಮಾನವನ ದೇಹರೂಪ ಕಲ್ಪಿಸಲಾಗದಿದ್ದರೂ ಸಹ ಕೋಣದ ಎರಡು ಕೊಂಬನ್ನು ಆ ದೇವತೆಗೆ ಸಂಕೇತವಾಗಿ ಪೂಜಿಸಲಾಗುತ್ತಿತ್ತು. ಆದ್ದರಿಂದಲೇ ಆ ದೇವತೆಯನ್ನು ಪೂಜಿಸುವ ರಾಜರು ಕೊಂಬುಳ್ಳ ಕೀರಿಟ ಧರಿಸುತ್ತಿದ್ದರು. ಇಲ್ಲಿನ ಕೋಣನ ಕೊಂಬಿನ ಸಂಕೇತ, ನಮ್ಮಲ್ಲಿ ಮಾರಮ್ಮನಿಗೆ ಕೋಣವನ್ನು ಬಲಿಕೊಡುವುದಕ್ಕೆ ಸಂಕೇತವಾಗಿದೆ.

'ಅಯ, ಎಂಕಿ' ದೇವತೆಗೆ ಪಾಲಕ-ರಕ್ಷಕನ ಸ್ಥಾನವಿದೆ. ಸುಮೇರಿಯನ್ನರು 'ಅಯ' ದೇವತೆಯನ್ನು ಪೂಜಿಸುತ್ತಿದ್ದರೂ ಕಾಲಾನಂತರದಲ್ಲಿ ಬಂದ ಸೆಮಟಿಕ್ ಜನಾಂಗವು 'ಅಯ' ದೇವತೆಯನ್ನು 'ಎಂಕಿ' ಎಂದು ಕರೆದರು. 'ಎಂಕಿ' ಪದವು 'En, Ki' ಎಂಬ ಎರಡು ಪ್ರತ್ಯೇಕ ಪದಗಳಿಂದ ಕೂಡಿದೆ. 'ಎಂಕಿ' ದೇವತೆಯನ್ನು 'Lord of Wisdom' ಎಂದು ಕರೆಯಲಾಗುತ್ತಿತ್ತು. ಈ ದೇವತೆಯೂ 'ಮತ್ಸ್ಯಾವತಾರ'ದಲ್ಲಿದ್ದು ಇವನ ವಾಸಸ್ಥಾನ ಸಮುದ್ರವಾಗಿತ್ತು. ಈತನೇ ನರಮಾನವನನ್ನು ಸೃಷ್ಟಿಸಿದನು. ಪ್ರಾಣಿಗೂ ಈತನಿಗೂ ಯಾವುದೇ ವ್ಯತ್ಯಾಸಗಳು ಕಂಡುಬರದಿದ್ದನ್ನು ಗಮನಿಸಿದ ಈ ದೇವತೆಯೂ ಸಮುದ್ರದಿಂದ ಹೊರಬಂದು ಮಾನವನಿಗೆ ಭಾಷೆ ಕಲಿಸಿಕೊಟ್ಟು ವಿವಿಧ ಕಲೆಗಳ ಬಗ್ಗೆ ಅರಿವು ಮೂಡಿಸಿದನು. ಇದರಿಂದ ಮಾನವ ಬೇಸಾಯ ಮಾಡಿ ಆಹಾರ ಧಾನ್ಯ ಬೆಳೆಯುವುದು, ಅನಂತರ ಅದರ ಸಂಗ್ರಹಣೆಮಾಡಿ ಸಾಮಾಜಿಕವಾಗಿ ಒಂದೆಡೆ ನೆಲೆನಿಲ್ಲುವುದನ್ನು ಕಲಿತನು.

ಈತ ಬೆಳಗಿನಿಂದ ಸಂಜೆಯವರೆಗೂ ಮಾನವನ ಅಭಿವೃದ್ಧಿಗಾಗಿ ಶ್ರಮಿಸಿದರೂ ಅದರಿಂದ ಯಾವುದೇ ಉಪಕಾರ ಬಯಸದೇ ಮತ್ತೆ ಸಮುದ್ರಕ್ಕೆ ವಾಪಸ್ಸಾಗುತ್ತಿದ್ದನು ಎಂಬ ಒಂದು ಪುರಾಣವನ್ನು 'ಬ್ಯಾಬಿಲೋನ್' ನಗರ ದೇವಾಲಯದ ಅಧಿಕಾರಿ ಗ್ರೀಕ್ ಭಾಷೆಗೆ ತರ್ಜುಮೆ ಮಾಡಿದ್ದಾರೆ.

'ಎನ್‌ಲಿಲ್ ಸಂಹಾರಕ ದೇವತೆ'– ಈಕೆ ಆರಂಭದಲ್ಲಿ ಉಗ್ರದೇವತೆಯಾಗಿ ಕಂಡುಬಂದು ಕಾಲಾನಂತರದಲ್ಲಿ ಸೌಮ್ಯದೇವತೆಯಾಗಿದ್ದಾಳೆ. ಗಾಳಿ, ಬಿರುಗಾಳಿ, ಸುಂಟರಗಾಳಿ, ಚಂಡಮಾರುತಗಳ ದೇವತೆಯೇ ಈಕೆ. ಭೂತ–ಪ್ರೇತಗಳ ಒಡತಿ, ಜನರ ಕಷ್ಟ ಕಾಯಿಲೆ ಸಾವುಗಳಿಗೆ ಕಾರಣವಾದ ಭೂತಗಣಗಳನ್ನು ಸಂಹರಿಸುವವಳು. ಆದ್ದರಿಂದ ಈ ದೇವತೆಯನ್ನು ಆರಾಧಿಸಲಾಗುತ್ತಿತ್ತು. ನಂತರದಲ್ಲಿ ತ್ರಿಮೂರ್ತಿ ದೇವತೆ ಪರಿಕಲ್ಪನೆ ಮಾಯವಾಗಿ ಏಕದೇವತಾ ಪರಿಕಲ್ಪನೆ ಒಡ ಮೂಡಿತು. ಇದರ ಫಲವಾಗಿ 'ಇರಿಡು' ನಗರದ ಜನರೊಂದಿಗೆ 'ಎರಿಚ್' ನಗರದ ಜನ ಬೆರೆತಾಗ ಅದು ಅಲ್ಲಿಯ 'ಅನ್ ಅಥವಾ ಅನು' ಮತ್ತು 'ಅಯ್ ಅಥವಾ ಅಯ' ದೇವತೆಗಳನ್ನು ಬೆಸೆದರು. ದೇವತೆಗಳನ್ನು ವಿವಿಧ ಧರ್ಮಗಳ ಹೆಸರುಗಳಿಂದ ಕರೆದು ವಿವಿಧ ಧರ್ಮಗಳ ಹಿನ್ನೆಲೆಯಲ್ಲಿ ಪೂಜಿಸಿದರೂ ಎಲ್ಲ ರೀತಿಯ ದೇಶ, ಕಾಲ, ಪ್ರದೇಶ, ಸಂಪ್ರದಾಯ, ಆಚರಣೆ ಒಂದೇ ಮೂಲದಿಂದ ಬಂದವೆಂಬುದಕ್ಕೆ ಇದು ಸೂಕ್ತ ಉದಾರಣೆಯಾಗಿದೆ. ದೇವನೊಬ್ಬ ನಾಮ ಹಲವು. ದೇವತೆಗಳನ್ನು ಈ ರೀತಿ ಒಗ್ಗೂಡಿಸುವ ಪ್ರಕ್ರಿಯೆಯನ್ನು ಸಂಸ್ಕೃತಿ ತಜ್ಞರು 'Syncritism' ಎಂದು ಕರೆದಿದ್ದಾರೆ. 'ಅಯನ್'ನೊಂದಿಗೆ 'ಎನ್‌ಲಿನ್' ದೇವತೆಯನ್ನು ಬೆಸೆದು ಒಂದೇ ರೂಪದಲ್ಲಿ ಸೃಷ್ಟಿ, ಸ್ಥಿತಿ, ಲಯಗಳನ್ನು ಒಗ್ಗೂಡಿಸಿದರು.[೨]

"ಆಫ್ರಿಕಾದ ನೀಗ್ರೋಗಳಲ್ಲಿ ಮತ್ತು ಪ್ರಾಚೀನ ಆರ್ಯರ 'ತುರ್ಕ್‌ಮಂಗೋಲ' ಮತ್ತು 'ಹ್ಯಾಮಿಟ್' ಸಮುದಾಯಗಳಲ್ಲಿ ವಿವಿಧ ಧಾರ್ಮಿಕ ಶ್ರದ್ಧೆಯ ಅಂಶಗಳು ಕಂಡುಬಂದಿದೆ. ಇವು ಸುಮೇರಿಯನ್ ಮತ್ತು ಚೈನಾ ಸಂಸ್ಕೃತಿಗಳಿಗೂ ಪ್ರೇರಕಶಕ್ತಿಯಾದವು. ಸೆಮೆಟಿಕರು 'ಅದಾದ್' ಮತ್ತು 'ಅಮರ್' ದೇವತೆಗಳಿಗೆ ಏಶಿಯಾ ಮೈನಾರ್‌ನ 'ಥೆಸಬ್', ಆರ್ಯರ 'ಇಂದ್ರ', ರೋಮನ್ನರ 'ಜೋವ್', ಗ್ರೀಕರ 'ಝೀಅಸ್', ಸ್ಕ್ಯಾಂಡಿಯನ್ನರ 'ಥೋರ' ಮೊದಲಾದ ದೇವತೆಗಳು ಉದಾರನೀತಿಗಳನ್ನು ಪಾಲಿಸಿ ಅನಾಚಾರ, ಅಸತ್ಯಗಳನ್ನು ದ್ವೇಷಿಸುತ್ತಿದ್ದರು."[೩]

"ಫಿನ್ನೊ ಉಗ್ರಿನ್ ಕುಲದಲ್ಲಿ ನೀರಿನ, ಅಡವಿಯ ದೇವತೆ 'ವಿರ್ ಅವಾ' ಎಂಬ ದೇವಕನ್ಯೆಯನ್ನು ಗ್ರಾಮದೇವತೆಯಾಗಿ ಆರಾಧಿಸುತ್ತಿದ್ದರು."[೪] ನದಿ ದೇವತೆಗಳ

ಕಲ್ಪನೆ ಹಲವು ಜನಾಂಗಗಳಲ್ಲಿದೆ. ಮದುವೆ, ಹಬ್ಬ ಸಂದರ್ಭಗಳಿಗೆ ಗಂಗೆಗೆ ಪೂಜೆ ಸಲ್ಲಿಸುವುದು ಇದೇ ಉದ್ದೇಶಕ್ಕಾಗಿ. ಪ್ರಪಂಚದಲ್ಲಿ ಪ್ರತಿಯೊಂದು ಜೀವರಾಶಿಗಳಿಗೆ ಉಸಿರಾಡಲು ಗಾಳಿ ಹೇಗೆ ಅಗತ್ಯವೋ ಅದೇ ರೀತಿ ನೀರು ಸಹ ಮುಖ್ಯವಾಗಿದೆ. ನಾವು ತಿನ್ನುವ ಆಹಾರಗಳಿಗಿಂತ ನೀರು ಹೆಚ್ಚಿನ ಪಾಧಾನ್ಯತೆ ಪಡೆದಿದೆ ಎಂದರೆ ತಪ್ಪಾಗಲಾರದು.

ಚೀನಾ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ. ಚೀನಾ ನಾಗರಿಕತೆಯ ಪುರಾತನ ಯುಗದಲ್ಲಿ ಚೀನಿಯರು ಹಲವಾರು ದೇವತೆಗಳನ್ನು ಪೂಜಿಸುವುದರ ಜೊತೆಗೆ ವಾಯು ಮತ್ತು ಆಕಾಶ ದೇವತೆಗಳನ್ನು ಆರಾಧಿಸುತ್ತಿದ್ದರು. ಅಲ್ಲದೇ ತಮ್ಮ ಪೂರ್ವಿಕರು ಸಹ ಸತ್ತ ಅನಂತರ ದೇವತೆಗಳಾಗುತ್ತಾರೆ ಎಂಬ ನಂಬಿಕೆಗಳನ್ನು ಹೊಂದಿದ್ದರು. ನಮ್ಮ ಮೊಮ್ಮಕ್ಕಳು ನಮ್ಮನ್ನು ದೇವರೆಂದು ಪೂಜಿಸಲಿ ಎಂಬ ಮಹದಾಸೆಯು ಅವರಲ್ಲಿ ನೆಲೆಯೂರಿದ್ದರಿಂದಲೇ ಈ ರೀತಿಯ ಆರಾಧನಾಪದ್ಧತಿ ಅವರಲ್ಲಿ ಆಚರಣೆಯಲ್ಲಿತ್ತು. ಚೀನಾ ಮತ್ತು ಜಪಾನ್ ಎರಡು ದೇಶಗಳು ಹೆಣ್ಣಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿವೆ. ಅಲ್ಲದೇ ಜಪಾನ್ ದೇಶವು ಸೂರ್ಯ ಹುಟ್ಟುವ ನಾಡು ಎಂದು ಹೆಸರು ಪಡೆದಿದೆ. ಇತರೆಡೆ ಸೂರ್ಯನನ್ನು ಪುರುಷ ಸ್ಥಾನದಲ್ಲಿಟ್ಟು ದೈವವೆಂದು ಪೂಜಿಸಲ್ಪಟ್ಟರೆ ಚೀನಾ, ಜಪಾನ್ ದೇಶಗಳಲ್ಲಿ ಸ್ತ್ರೀಯನ್ನು ದೇವತೆಯ ಸ್ಥಾನದಲ್ಲಿಟ್ಟು 'ಸೂರ್ಯದೇವಿ' ಎಂದು ಕರೆದು ಆರಾಧಿಸುವ ಪದ್ಧತಿ ಇದೆ. ಇದು ಅವರು ಹೆಣ್ಣಿಗೆ ನೀಡಿರುವ ಪಾಧಾನ್ಯತೆಯನ್ನು ಪ್ರತಿನಿಧಿಸುತ್ತದೆ.[೫]

ಗ್ರೀಕರು 'ಸೆಯುಸ್ ಅಥವಾ ಜಯುಸ್', 'ಅಥೆನಾ' ಮತ್ತು 'ಅಪೊಲೊ' ಎಂಬ ದೇವತೆಗಳನ್ನು ಆರಾಧಿಸುತ್ತಿದ್ದರು. ಇಲ್ಲಿನ ದೇವತೆಗಳು 'ಒಲಂಪಸ್' ಬೆಟ್ಟದ ಮೇಲೆ ವಾಸಿಸುತ್ತಾರೆಂಬ ನಂಬಿಕೆ ಅವರಲ್ಲಿತ್ತು. ಸೆಯುಸ್ ಎಂಬ ದೇವತೆಗೆ ಆರು ಮೊಲೆಗಳಿದ್ದರೂ ಗಡ್ಡ ಬೆಳೆದಿರುವುದು ಕಂಡುಬಂದಿದೆ. 'ಹರ್ಕ್ಯುಲಸ್' ಎಂಬ ಗಂಡು ದೇವತೆಗೆ ಸ್ತ್ರೀವೇಷವಿದೆ. ಗ್ರೀಕರು ಆರಾಧಿಸುವ ದೇವರುಗಳಲ್ಲಿ ಗಂಡು–ಹೆಣ್ಣುಗಳಿಬ್ಬರನ್ನು ಒಂದೇ ದೇವತೆಯಲ್ಲಿ ಕಾಣುವ ಪದ್ಧತಿ ಇದೆ. ಇದು ನಮ್ಮ ಶಿವ–ಪಾರ್ವತಿಯರ ಅರ್ಧನಾರೀಶ್ವರ ತತ್ವದಂತಿದ್ದರೂ ಸಹ ಸ್ತ್ರೀ–ಪುರುಷರಿಬ್ಬರ ದೇಹರಚನೆಗಳೆರಡು ಮಿಶ್ರಣವಾಗಿ ಮೂರ್ತಿಗಳು ರಚನೆಯಾಗಿವೆ. ಸೊಪ್ರಸಿನಲ್ಲಿ 'ಅಪ್ರೊೖಡಾಯ್ಟ್' ಎಂಬ ಹೆಣ್ಣು ದೇವತೆಗೆ ಗಡ್ಡವಿದೆ.[೬]

'ಅಪೊಲೊ' ದೇವತೆಯು ಶ್ರೀಮಂತ ದೇವತೆಯಾಗಿದ್ದು ನವಯುವಕನಾಗಿ ಪ್ರೀತಿ, ನ್ಯಾಯ, ಕರುಣೆ, ಔದಾರ್ಯಗಳ ಪ್ರತೀಕವಾಗಿದ್ದನು. ಇವನು ಸಂಗೀತ–ಕ್ರೀಡೆಗಳಲ್ಲಿ ಪರಿಣಿತನಾಗಿದ್ದನು. ಅಪೊಲೊ ದೇವತೆಯ ಜೊತೆಯಲ್ಲಿಯೇ

'ಜಯುಸ್' ಮತ್ತು 'ಅಥೆನ' ದೇವತೆಗಳು ಪ್ರಮುಖ ದೇವರಾಗಿದ್ದರು. ಇವರಲ್ಲಿ ನಾಗಪೂಜೆ ಮತ್ತು ಶಿಶ್ನಪೂಜೆಗಳು ಆಚರಣೆಯಲ್ಲಿತ್ತು. ಯುದ್ಧಕ್ಕೆ ಹೋಗುವ ಮೊದಲು ಮತ್ತು ಬಹುಮುಖ್ಯ ಕಾರ್ಯಗಳಿಗೆ ಪ್ರಾಣಿಗಳನ್ನು ಬಲಿ ಕೊಡುವ ಪದ್ಧತಿ ಇದ್ದಿತು. ಹಂದಿ, ಬಸವ ಮತ್ತು ಕುರಿಗಳನ್ನು ದೇವರಿಗೆ ಬಲಿಕೊಡುತ್ತಿದ್ದರು. ಇವರು 'ಡಯೋನೀಸ್' ಎಂಬ ದೇವತೆಯನ್ನು ಗಂಡು-ಹೆಣ್ಣು ಎರಡು ರೂಪದಲ್ಲಿ ಪೂಜಿಸುತ್ತಿದ್ದರು. ಇದು ಆ ಕಾಲದಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ನೀಡಿದ್ದ ಸಮಾನತೆಯ ಪ್ರತೀಕವು ಸಹ ಆಗಿರುವ ಸಾಧ್ಯತೆಗಳಿವೆ. ಇವುಗಳಷ್ಟೇ ಅಲ್ಲದೇ 'ಅಸ್ಟೂಮಿಕ್', 'ಡೆಮೆತರ್', 'ಓಸಿನ್' ಎಂಬ ದೇವತೆಗಳನ್ನು ಆರಾಧಿಸುತ್ತಿದ್ದರು. ಇದರಿಂದ ಗ್ರೀಕರಲ್ಲಿ ಬಹುದೇವತಾರಾಧನೆ ಪದ್ಧತಿ ಚಾಲ್ತಿಯಲ್ಲಿತ್ತು ಎಂಬುದು ತಿಳಿದುಬರುತ್ತದೆ.

ಈಜಿಪ್ಟ್ ನಾಗರಿಕತೆಯಲ್ಲಿ ಬಹುದೇವತಾರಾಧನಾ ಪದ್ಧತಿ ರೂಢಿಯಲ್ಲಿತ್ತು. ಆ ದೇವತೆಗಳು ನಿಸರ್ಗದ ಶಕ್ತಿಗಳ ಮೇಲೆ ನಿಯಂತ್ರಿತವಾಗುತ್ತಿದ್ದವು. ಇವರು ವಿವಿಧ ಕಾಲಘಟ್ಟದಲ್ಲಿ ಸೂರ್ಯದೇವನಾದ 'ರಾ', ಸೃಷ್ಟಿಕರ್ತ 'ಅಮುನ್', ಮತ್ತು ಮಾತೃದೇವತೆ 'ಐಸಿಸ್'ದೇವತೆಗಳನ್ನು ಆರಾಧಿಸುತ್ತಿದ್ದರು. ಇವರ ಬಹುದೇವತಾರಾಧನೆಯಲ್ಲಿ ಮೂಲವಸ್ತುಗಳು, ಪ್ರಾಣಿಗಳು ಹಾಗೂ ಅಮೂರ್ತಶಕ್ತಿಗಳ ಆರಾಧನೆ ಪ್ರಮುಖವಾಗಿ ಕಂಡುಬಂದಿದೆ. ಜೊತೆಗೆ ಮರಣಿಸಿದ 'ಫೆರೋ'ನನ್ನು ಸಹ ದೈವಿಕ ನೆಲೆಗಟ್ಟಿನಲ್ಲಿ ಆರಾಧಿಸುತ್ತಿದ್ದರು.[೭]

'ಐಸಿಸ್' ಅಲ್ಲಿನ ಆದಿವಾಸಿಗಳ ದೇವತೆಯಾಗಿ, ಜನರ ಯುದ್ಧದೇವತೆಯೂ ಆಗಿದ್ದಾಳೆ. ಈ ದೇವತೆ ಕ್ರಿ.ಪೂ.೨೦೦೦ಕ್ಕಿಂತಲೂ ಪೂರ್ವದವಳೆಂಬ ನಂಬಿಕೆ ಇದೆ. ಪ್ರಾಚೀನ ನಾಗರಿಕತೆಗಳಲ್ಲಿ ಹೆಣ್ಣು ಒಂದು ಮಗುವಿಗೆ ಜನನ ನೀಡುವುದರಿಂದ ಆಕೆಯನ್ನು ಫಲವತ್ತಾದ ಭೂಮಿಗೆ ಹೋಲಿಸಿ ಆರಾಧಿಸುತ್ತಿದ್ದರು. ಮಗು ಆಕೆಯ ಮೊಲೆಯಿಂದ ಜನಿಸುತ್ತದೆಂಬ ನಂಬಿಕೆಯಿದ್ದು ನಂತರ ಯೋನಿಯಿಂದ ಜನಿಸುತ್ತದೆ ಎಂಬ ಅರಿವು ಬಂದಿತ್ತು. ಆದ್ದರಿಂದ ಈಜಿಪ್ಟರು ತ್ರಿಕೋಣಾಕಾರದ ಯೋನಿಯನ್ನೆ ಮುಖ್ಯವಾಗಿ ಚಿತ್ರಿಸಿ ಪೂಜಿಸುತ್ತಿದ್ದರು.[೮]

ವಿಚಾರಗಳನ್ನು ಗ್ರಹಿಸಲು ಶಕ್ತಿ ಇಲ್ಲದ ಮಾನವ ಮಗುವಿಗೆ ಜನ್ಮ ನೀಡಿ ಆತನನ್ನು ಪೋಷಿಸಿ ಸಲಹುವ ಹೆಣ್ಣನ್ನೆ ದೈವವೆಂದು ತಿಳಿದು 'ಮಾತೃಪ್ರಧಾನ' ಕುಟುಂಬವ್ಯವಸ್ಥೆಗೆ ಮಾನ್ಯತೆ ನೀಡಿದನು. ವೈಜ್ಞಾನಿಕ ಸತ್ಯಗಳನ್ನು ತಿಳಿಯುವ ಬುದ್ಧಿಶಕ್ತಿ ಆತನಿಗೆ ಇರಲಿಲ್ಲ. ಕಾಲಾನಂತರ ಅನೇಕ ಸಂಶೋಧನೆಗಳ ಫಲವಾಗಿ ಹೆಣ್ಣು ಗರ್ಭಧರಿಸಲು ಪುರುಷ ಕಾರಣ ಎಂಬ ತಿಳುವಳಿಕೆ ಬಂದಿತು. ಇದರಿಂದ

ಹೆಣ್ಣನ್ನು ಕೀಳಾಗಿ ಕಂಡು ಮನೆಯ ಒಳಗೆ ಬಂಧಿಸುವ ಸ್ಥಿತಿ ಬಂದೊದಗಿತು. ಇವುಗಳೆಲ್ಲದರ ಪರಿಣಾಮ 'ಪುರುಷ ಪ್ರಧಾನ' ಸಮಾಜವೇ ತಲೆಎತ್ತುತ್ತ ಬಂದಿತು. ಮಾತೃಪ್ರಧಾನತೆ ಇಂದು ಬೆರಳೆಣಿಕೆಯಷ್ಟು ಮಾತ್ರ ಇರುವುದನ್ನು ಕಾಣುತ್ತಿದ್ದೇವೆ. ಆದರೂ ಗಂಡು ಮಕ್ಕಳಿಲ್ಲದ ಮನೆಯಲ್ಲೇ ಹೆಣ್ಣುಮಕ್ಕಳನ್ನು ಉಳಿಸಿಕೊಳ್ಳುವ ಕೆಲವು ವಿಚಾರಗಳು ಸಂಪ್ರದಾಯದ ಹಿನ್ನೆಲೆಯಲ್ಲಿ ಉಳಿದಿದೆ.

ಯೂರೋಪಿನ ಶಿಲಾಯುಗದ ಉತ್ಖನನ ಕಾಲದಲ್ಲಿ ಬಹು ಪ್ರಾಚೀನ ಮಣ್ಣಿನ ಹಾಗೂ ಕಲ್ಲಿನ ಪ್ರತಿಮೆಗಳು ದೊರೆತಿದ್ದು, ಸುಮಾರು ೩೦ ವರ್ಷಗಳ ಹಿಂದೆ ಮಧ್ಯಏಷ್ಯಾದಿಂದ ಬಂದವೆಂದು ಪುರಾತತ್ವ ವಿಜ್ಞಾನಿಗಳು ತಿಳಿಸಿದ್ದಾರೆ. ಅದೇ ರೀತಿ ರಷ್ಯಾದಲ್ಲಿ ಸುಮಾರು ೫೦ ಸಾವಿರ ವರ್ಷಗಳ ಹಿಂದೆ ೬೦ ಮೂರ್ತಿಗಳು ಲಭಿಸಿದ್ದು, ಅದರಲ್ಲಿ ೫೫ ಮೂರ್ತಿಗಳು ಮಾತೃದೇವತೆಗಳ ಮೂರ್ತಿಗಳೇ ಆಗಿವೆ. ಇವುಗಳೆಲ್ಲವು ಪಿತೃದೇವತೆಗಿಂತ ಸ್ತ್ರೀದೇವತೆಗಳಿಗೆ ಹೆಚ್ಚಿನ ಸ್ಥಾನ ಲಭಿಸಿತ್ತು ಎಂಬುದನ್ನು ಖಚಿತ ಪಡಿಸುತ್ತದೆ. ಆ ಎಲ್ಲ ಮೂರ್ತಿಗಳು ನಿರ್ದಿಷ್ಟ ಹೆಂಗಸರ ಮೂರ್ತಿಗಳಾಗಿರದೇ 'ವಿಶ್ವಜನನಿ'ಯ ಸಂಕೇತವಾಗಿ ಆರಾಧಿಸುತ್ತಿದ್ದ ಮೂರ್ತಿಗಳೇ ಆಗಿವೆ ಎಂಬ ಊಹೆಗೆ ಇಲ್ಲಿ ಅವಕಾಶವಿದೆ.[೯]

ಸಿಂಧೂ ನದಿಯ ನಾಗರಿಕತೆಯಲ್ಲಿ ಹೆಣ್ಣಿಗೆ ಪ್ರಮುಖ ಸ್ಥಾನ ನೀಡಿ ತಾಯಿ, 'ದೇವರಮಾತೆ' ಎಂದಷ್ಟೇ ಅಲ್ಲದೇ, ಸಕಲ ಜೀವರಾಶಿಗಳೆಲ್ಲವನ್ನು ಮಾತೃಸ್ಥಾನದಲ್ಲಿಟ್ಟು ಪೂಜಿಸಲಾಗಿದೆ. 'ಮಾತೃದೇವತಾರಾಧನೆ' ಆರ್ಯ-ದ್ರಾವಿಡ ಸಂಸ್ಕೃತಿಗಳೆರಡರ ಸಮ್ಮಿಲನವಾಗಿದೆ. ಹೆಣ್ಣಿನ ಪ್ರಮುಖ ಅಂಗಗಳಾದ ಸ್ತನ, ಗರ್ಭ, ಯೋನಿಗಳನ್ನು ಮಾತೃದೇವತೆಯ ಸಂಕೇತವಾಗಿಯೇ ಆರಾಧಿಸುತ್ತಿದ್ದರು. ಸಿಂಧೂ ನಾಗರಿಕತೆಯಲ್ಲಿ ದೊರೆತಿರುವ ಕಲ್ಲುಗಳನ್ನು ಸೃಷ್ಟಿಯ ಅಂಗವಾದ ಯೋನಿಗೆ ಸಮೀಕರಿಸಿ ಪೂಜಿಸುತ್ತಿದ್ದದ್ದು ಕಂಡುಬಂದಿದೆ. "ಬೋರ್ನಿಯಾ ಮಲೇಶಿಯಾಗಳಲ್ಲಿ ಸತ್ತ ಮಾನವನ ಮೆದುಳನ್ನು ತೆಗೆದು ಧಾರ್ಮಿಕ ವಿಧಿಗಳ ನಂತರ 'ಪ್ರೇತ ಭೋಜನ' ಎಂಬ ಹೆಸರಿನಲ್ಲಿ ಮೆದುಳನ್ನು ತಿನ್ನುವ ಪದ್ಧತಿ ಅಲ್ಲಿನ ಆದಿವಾಸಿಗಳಲ್ಲಿತ್ತು. ಈ ಧಾರ್ಮಿಕ ಆಚರಣೆಯು ಸತ್ತ ವ್ಯಕ್ತಿಯನ್ನು ದೈವತ್ವಕ್ಕೇರಿಸಿ ಪೂಜಿಸುವ ನಂಬಿಕೆಯಾಗಿದೆ. ದೇವರಪೂಜೆ ನಂತರ ನಾವು ಹೇಗೆ ಪ್ರಸಾದ ಸ್ವೀಕರಿಸುತ್ತೇವೋ ಅದೇ ರೀತಿ ಸತ್ತ ವ್ಯಕ್ತಿಯೂ ಪೂಜನೀಯ ಎಂಬ ದೃಷ್ಟಿಯಿಂದ ಮೆದುಳನ್ನು ತಿನ್ನುತ್ತಿದ್ದರು. ಈ ಮೂಲಕ ಸತ್ತ ವ್ಯಕ್ತಿಯನ್ನು ದೈವತ್ವದ ನೆಲೆಯಲ್ಲಿ ಆರಾಧಿಸುತ್ತಿದ್ದರು ಎಂಬುದನ್ನು ತಿಳಿಸಲಾಗುತ್ತಿತ್ತು.[೧೦]

"ಮೆಕ್ಸಿಕೋ ಜನಾಂಗದವರಾದ 'ಎಜ್ಟೆಕ್' ಮಂದಿ ಹಲವಾರು ದೇವತೆಗಳನ್ನು ಪೂಜಿಸುತ್ತಿದ್ದರು. ಇವರ ಆರಾಧನ ವಿಧಿಗಳು ಗ್ರೀಕ್‌ನ 'ಎಲೆಯೂಸಿಸ್' ದೇವತೆಯ ಪೂಜಾವಿಧಿಗಳನ್ನು ಹೋಲುತ್ತಿತ್ತು. ಈ ಜನಾಂಗದವರು ಮಹಾಮಾತೃ ಮತ್ತು ಆಕೆಯ ಹೆಣ್ಣುಮಕ್ಕಳನ್ನು ಗ್ರೀಕ್ ದೇಶದ ಡೆಮೆಟರ್ ಮತ್ತು ಕೋರೆಗಳ ಪ್ರತಿರೂಪವೆಂದು ನಂಬಿದ್ದರು."[೧೧]

"ಹರಪ್ಪ ಮತ್ತು ಮೊಹೆಂಜೊದಾರೊ ನಾಗರಿಕತೆಗಳು ಪ್ರಾಚೀನವಾದವೆಂಬ ಹೆಸರು ಪಡೆದಿವೆ. ಅದರಲ್ಲಿ ಒಂದಾದ ಹರಪ್ಪ ನಾಗರಿಕತೆಯ ಕಾಲದ ಮುದ್ರೆಯೊಂದು ಸ್ತ್ರೀದೇವತೆಯ ಆರಾಧನೆ ಬಗ್ಗೆ ಕುರುಹು ನೀಡಿದೆ. ಆ ಮುದ್ರೆಯಲ್ಲಿ ಒಂದು ಸ್ತ್ರೀ ರೂಪವಿದ್ದು ಆಕೆಯ ಗರ್ಭದಿಂದ ಸಸಿಯೊಂದು ಚಿಗುರೊಡೆದಿರುವ ರೀತಿ ಕಂಡುಬಂದಿದೆ. ಮತ್ತೊಂದು ಬದಿಯಲ್ಲಿ ನೇಗಿಲನ್ನು ಹಿಡಿದಿರುವ ರೂಪವಿದೆ. ಇದು ಪ್ರಾಚೀನ ಕಾಲದಲ್ಲಿ ಹೆಣ್ಣು ಹೇಗೆ ಪೂಜ್ಯವಾದ ಸ್ಥಾನ ಅಲಂಕರಿಸಿದ್ದಳು ಎಂಬುದನ್ನು ತಿಳಿಸುತ್ತದೆ. ಸ್ತ್ರೀಗೆ ಗರ್ಭಧಾರಣ ಶಕ್ತಿಯಿದೆ ಎಂಬುದನ್ನು ನಿರೂಪಿಸಲು ಗರ್ಭದಿಂದ ಸಸ್ಯ ಹೊಮ್ಮುತ್ತಿರುವಂತೆ ಚಿತ್ರಿಸಲಾಗಿರಬಹುದು. ಸಸ್ಯಕ್ಕೆ ಸಂಬಂಧಿಸಿದ ಇನ್ನೊಂದು ಮುದ್ರೆಯನ್ನು, ವೃಕ್ಷದ ಎರಡು ಕೊಂಬೆಯನ್ನು ಹಿಡಿದು ನಿಂತಿದ್ದು, ಒಬ್ಬ ವ್ಯಕ್ತಿ ಅವಳ ಮುಂದೆ ತಲೆಬಾಗಿ ನಿಂತಿದ್ದಾನೆ. ಅವರ ಮುಂದೆ ಮೇಕೆ ಇದ್ದು ಅದರ ಕೆಳಗೆ ಏಳು ವಿಗ್ರಹಗಳಿವೆ. ಅದು ಇಂದಿನ ಸಪ್ತ ಮಾತೃಕೆಯರ ತತ್ವಕ್ಕೆ ಸಮೀಪವಾಗಿದೆ."[೧೨] ಹರಪ್ಪದಲ್ಲಿ ದೊರೆತಿರುವ ಮಾತೃದೇವತೆಯ ಗೊಂಬೆ 'ಸುಡಾವ' ಎಂಬ ವಿಶಿಷ್ಟ ಮಣ್ಣಿನಿಂದ ತಯಾರಿಸಲಾಗಿದೆ. ಇದು ಕ್ರಿ.ಪೂ. ೩೦೦೦-೨೦೦೦ರ ಅವಧಿಯಲ್ಲಿ ತಯಾರಾಗಿದೆ. ಆಕಾರ-ರಚನೆಯಲ್ಲಿ ಸ್ತ್ರೀರೂಪವಿದ್ದರೂ ಮೂರ್ತಿ ಸ್ಪಷ್ಟವಾಗಿಲ್ಲ. ಶಿವ ಮತ್ತು ಶಕ್ತಿಯ ಕಲ್ಪನೆ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಹರಪ್ಪ ಮತ್ತು ಮೊಹೆಂಜೋದಾರೋ ಉತ್ಖನನದಿಂದ ಪಶುಪತಿ ಹಾಗೂ ಕಿರೀಟಧಾರಿ ಹೆಣ್ಣಿನ ವಿಗ್ರಹಗಳು ದೊರೆತಿವೆ.

ಭಾರತದಲ್ಲಿ ದೈವಿಕ ಕಲ್ಪನೆಯನ್ನು ಪುರುಷ ಮತ್ತು ಸ್ತ್ರೀ ಸಂಕೇತದಲ್ಲಿ ಆರಾಧಿಸುತ್ತಿದ್ದ ಪದ್ಧತಿ ಇದ್ದಿತು. ಜೊತೆಗೆ ಆಫ್ರಿಕಾ, ಈಜಿಪ್ಟ್, ಏಶಿಯಾ ಮೈನರ್, ಪುರಾತನ ಗ್ರೀಸ್ ಮೊದಲಾದೆಡೆ ಈ ಪದ್ಧತಿ ಆಚರಣೆಯಲ್ಲಿತ್ತು. ವೇದಗಳ ಆರಂಭ ಕಾಲದಲ್ಲಿ ಶಿವ-ಶಕ್ತಿಯ ಕಲ್ಪನೆ ಇಲ್ಲದೇ ಸಿಂಧೂನದಿ ಸಂಸ್ಕೃತಿಯಲ್ಲಿ ಶಿವ-ಶಕ್ತಿಯಂಥ ದೇವತೆಗಳ ಪಾತ್ರ ಹಿರಿದಾಗಿತ್ತು ಎಂದು ಜಾನ್ ಮಾರ್ಷಲ್ ಅಭಿಪ್ರಾಯ ಪಡುತ್ತಾರೆ.[೧೩]

ಗ್ರಾಮದೇವತೆಗಳನ್ನು ಆರಾಧಿಸುವ ಮುಖ್ಯಕಾರಣ ಗ್ರಾಮದಲ್ಲಿನ ಜನರ, ಪ್ರಾಣಿಗಳ ರೋಗರುಜಿನ ನಿವಾರಿಸುತ್ತಾಳೆ, ಮಳೆ-ಬೆಳೆ ಉತ್ತಮವಾಗಿಸುತ್ತಾಳೆ, ಗ್ರಾಮಕ್ಕೆ ಭೂತ-ಪ್ರೇತ-ಗಾಳಿಗಳು ಸೋಕದಂತೆ ಕಾವಲು ಕಾಯುತ್ತಾಳೆ, ಬಂಜೆತನವನ್ನು ನಿವಾರಿಸಿ ಮಕ್ಕಳಭಾಗ್ಯ ಕರುಣಿಸುತ್ತಾಳೆ, ಕಂಕಣಭಾಗ್ಯ ಕೂಡುವಂತೆ ಮಾಡುತ್ತಾಳೆ, ಊರಿನ ಒಳಜಗಳಗಳನ್ನು ನಿವಾರಿಸುತ್ತಾಳೆ. ಈ ಎಲ್ಲ ಜವಾಬ್ದಾರಿಗಳನ್ನು ಹೊತ್ತು ಮಕ್ಕಳಿಗೆ ಹೆತ್ತ ತಾಯಂತೆ ಗ್ರಾಮದೇವತೆಯೂ ಎಲ್ಲರನ್ನು ರಕ್ಷಿಸಿ ಕಾಪಾಡುತ್ತಾಳೆ. ಆದ್ದರಿಂದ ಪ್ರಾಚೀನ ಕಾಲದಿಂದಲೂ ಗ್ರಾಮದೇವತೆಗೆ ವಿಶಿಷ್ಟವಾದ ಸ್ಥಾನ ಲಭಿಸಿದೆ.

ಪರಾಮರ್ಶನ ಗ್ರಂಥಗಳು

೧. ಗೌರೀಶ ಕಾಯ್ಕಿಣಿ, ಕರ್ನಾಟಕ ಸ್ತ್ರೀ-ಗ್ರಾಮದೇವತೆಗಳು. ಕಣಜ ಅಂತರಜಾಲ ಜ್ಞಾನಕೋಶ.

೨. ಸುಮೇರಿಯನ್ ನಾಗರಿಕತೆ ಲೇಖನವನ್ನು ಅಂತರ್ಜಾಲದಿಂದ ಬಳಸಿಕೊಳ್ಳಲಾಗಿದೆ.

೩. ಕಣಜ ಅಂತರಜಾಲ ಜ್ಞಾನಕೋಶದ 'ಜಾನಪದ ಧರ್ಮದ ಸ್ವರೂಪ' ಎಂಬ ಲೇಖನವನ್ನು ಬಳಸಿಕೊಳ್ಳಲಾಗಿದೆ.

೪. ಕಣಜ ಅಂತರಜಾಲ ಜ್ಞಾನಕೋಶದ ಡಾ. ದೇವೇಂದ್ರ ಕುಮಾರ ಹಕಾರಿ, ಕರ್ನಾಟಕ ಸ್ತ್ರೀ-ಗ್ರಾಮದೇವತೆಗಳು ಎಂಬ ಲೇಖನವನ್ನು ಬಳಸಿಕೊಳ್ಳಲಾಗಿದೆ.

೫. ಚೀನಾದ ಇತಿಹಾಸ ಲೇಖನವನ್ನು ಅಂತರ್ಜಾಲದಿಂದ ಬಳಸಿಕೊಳ್ಳಲಾಗಿದೆ.

೬. ಚೆನ್ನಣ್ಣ ವಾಲೀಕಾರ, ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪು. ೬೦, ೧೯೮೮.

೭. ವಿಕಿಪೀಡಿಯ- ಈಜಿಪ್ಟಿನ ಪುರಾತನ ಸಾಹಿತ್ಯ ಲೇಖನವನ್ನು ಅಂತರಜಾಲದಿಂದ ಬಳಸಿಕೊಳ್ಳಲಾಗಿದೆ.

೮. ಅದೇ.

೯. ಉದ್ಧೃತ-ಡಾ. ವಿಲ್ಯಂ ಮಾಡ್ಸ, ಕರ್ನಾಟಕ ಸ್ತ್ರೀ ಗ್ರಾಮದೇವತೆಗಳು, ಕಣಜ ಅಂತರಜಾಲ ಜ್ಞಾನಕೋಶದ ಲೇಖನ. (Readers Digest Library. 622ff.)

೧೦. ಅದೇ.

೧೧. ಕಣಜ ಅಂತರಜಾಲ ಜ್ಞಾನಕೋಶದ 'ದೇವರ ಕಲ್ಪನೆ', ಲೇಖಕ ಡಾ. ಬಿ.ಪಿ. ಪಾಟೀಲ.

೧೨. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪು. ೨೫, ೨೦೦೯.


೧೩. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು ಪು. ೨೨, ೨೦೦೯.

□□□


೩. ಮೋಡಕುಲಸಂತತಿ-ಪೆರುಮಾಳ್ ದಂಡನಾಯಕರು

- ಮಂಜುನಾಥ ಎಂ.

ಚೋಳರ ಕಾಲದಲ್ಲಿ ಮಾಂಬಳ್ಳಿ ಸಮೀಪವಿರುವ ಮುಡಿಗುಂಡ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಪದಿನಾಡು ಪ್ರಾಂತ್ಯವನ್ನೊಳಗೊಂಡಂತೆ ಸುತ್ತಲಿನ ಹದಿನಾಲ್ಕು ನಾಡುಗಳನ್ನು ಸೇರಿಸಿ ಮುಡಿಗುಂಡ ಚೋಳಮಂಡಲವನ್ನು ರಚಿಸಿ ಚೋಳ ರಾಜರು ಆಡಳಿತ ನಡೆಸುತ್ತಿದ್ದರು. ಹೊಯ್ಸಳ ದೊರೆ ಎರಡನೆಯ ಸೋಮೇಶ್ವರನ ಕಾಲದಲ್ಲಿ ಚಾಮರಾಜನಗರ ಸಮೀಪವಿರುವ ತೆರಕಣಾಂಬಿಗೆ ಆಡಳಿತ ಕೇಂದ್ರ ಬದಲಾಯಿಸಲ್ಪಟ್ಟಿತು. ಹೊಯ್ಸಳ ದೊರೆಗಳಿಗೆ ಪರಮನಿಷ್ಠೆಯಿಂದ ನಡೆದುಕೊಂಡ ಮನೆತನವೊಂದು ಇಲ್ಲಿಂದ ಸುಮಾರು ಒಂದು ಶತಮಾನ ಕಾಲ ಹದಿನಾಲ್ಕು ನಾಡುಗಳನ್ನು ಪಾಲಿಸಿತು. ಶಾಸನಗಳಲ್ಲಿ ಮೋಡಕುಲವೆಂದು ಉಲ್ಲೇಖಿತವಾಗಿರುವುದುಂಟು. ಅತ್ರೇಯಗೋತ್ರದ ವಿಷ್ಣುದೇವ, ಮಾಚಾಂಬಿಕೆಯಿಂದ ಈ ಮನೆತನ ಆರಂಭವಾಗಿರುವುದನ್ನು ಗುರುತಿಸಬಹುದು. ಪೆರುಮಾಳ್ ದಂಡನಾಯಕರು, ಮಾದವ ದಣ್ಣಾಯಕರು ಮೋಡಕುಲದ ಪ್ರಸಿದ್ಧ ವ್ಯಕ್ತಿಗಳು. ಬೆಟ್ಟದ ಕೋಟೆ ಕೈಫಿಯತ್ತು, ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿರುವ ಸುಮಾರು ೫೦ಕ್ಕೂ ಹೆಚ್ಚು ಶಾಸನಗಳು ಮೋಡಕುಲ ಹಾಗೂ ಪೆರುಮಾಳ್ ದಂಡನಾಯಕರ ಕುರಿತು ಹೆಚ್ಚಿನ ಮಾಹಿತಿಯನ್ನು ನೀಡುತ್ತವೆ. ಬಿ.ಎಲ್. ರೈಸ್‌ರವರು 'Mysore and coorg Inscription' ನಲ್ಲಿ ಚರ್ಚಿಸುತ್ತ "ಹೊಯ್ಸಳ ಬಲ ತನ್ನ ಅವನತಿಯ ಅಂಚನ್ನು ಮುಟ್ಟುತ್ತಿದ್ದಾಗ ಮೂರನೇ ಬಲ್ಲಾಳನ ಆಳ್ವಿಕೆಯಲ್ಲಿದ್ದ ಗಣ್ಯಮಂತ್ರಿ, ಮಾಲಂಗಿಯಲ್ಲಿ ಬಾಲಶಾಲೆ ಸ್ಥಾಪಿಸಿದ ಪೆರುಮಾಳ್ ದಂಡನಾಯಕ ಅವನ ಮಗ ಮಾದವ ದಣ್ಣಾಯಕರು ಹೊಯ್ಸಳರ ಅವನತಿಯನ್ನು ಕೆಲವು ಕಾಲ ತಡೆದು ಈ ಭಾಗದ ಆಳ್ವಿಕೆಯನ್ನು ಮಾಡಿದ್ದಾರೆ." ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೯ರಲ್ಲಿ ಮೋಡಕುಲದವರ ವಂಶಾವಳಿಯನ್ನು ನೀಡಿದೆ.[೧]



ಮೇಲಿನ ವಂಶಾವಳಿಯು ಅಪೂರ್ಣ ಹಾಗೂ ದೋಷಪೂರಿತವಾಗಿದೆ. ಪೆರುಮಾಳ್ ದಂಡನಾಯಕರು ವಿಷ್ಣುದೇವ, ಮಾಚಾಂಬಿಕೆಯರ ಪುತ್ರನೆಂದು ಹೇಳಿರುವುದು ಸರಿಯಾಗಿದೆ. ನಾಗಮಂಗಲ ತಾಲ್ಲೂಕು ಬೆಳ್ಳೂರಿನ ಮೂರು ಶಾಸನಗಳಲ್ಲಿ ಅತ್ರೇಯಗೋತ್ರದ ವಿಷ್ಣುದೇವ, ಮಾಚಾಂಬಿಕೆಯರ ಸುಪುತ್ರ ಪೆರುಮಾಳ್ ದಂಡನಾಯಕರೆಂಬ ಉಲ್ಲೇಖವಿದೆ.[೨] ತಡಿಮಾಲಂಗಿ ಶಾಸನದಲ್ಲಿಯೂ ಇದೇ ಅಂಶವಿದೆ.[೩] ಆದರೆ ಪೆರುಮಾಳ್ ದಂಡನಾಯಕರ ಇಬ್ಬರು ಪುತ್ರರಾದ ಮಂಚಯ ದಣ್ಣಾಯಕ, ಮಾದವ ದಣ್ಣಾಯಕರನ್ನು ಮಾತ್ರ ವಂಶಾವಳಿಯಲ್ಲಿ ಉಲ್ಲೇಖಿಸಿದ್ದು, ಕೇತಯ ದಣ್ಣಾಯಕರನ್ನು ಮಾದವ ದಣ್ಣಾಯಕರ ಪುತ್ರರೆಂದು ಹೇಳಿರುವುದು ಸಮಂಜಸವಾಗಿಲ್ಲ. ಚಾಮರಾಜನಗರ ತಾಲ್ಲೂಕಿನ ಕೊತ್ತಲವಾಡಿ ಶಾಸನದಲ್ಲಿ ಮಾದವ ದಣ್ಣಾಯಕ, ಕೇತಯ ದಣ್ಣಾಯಕ ಪೆರುಮಾಳ್ ದಣ್ಣಾಯಕರ ಸುಪುತ್ರರೆಂದು ಹೇಳಿದೆ.[೪] ಈ ಇಬ್ಬರು ತೆರಕಣಾಂಬಿಯಲ್ಲಿ ಅಲ್ಲಾಳನಾಥ ದೇವರ ಪ್ರತಿಷ್ಠೆಯನ್ನು ಮಾಡಿಸಿ ಭೂಮಿಯನ್ನು ದತ್ತಿಬಿಟ್ಟಿದ್ದಾರೆ. ಇದೇ ತಾಲೂಕಿನ ಆಲದೂರು ಶಾಸನದಲ್ಲಿ ಪೆರುಮಾಳ್ ದಂಡನಾಯಕರ ಮತ್ತೊಬ್ಬ ಮಗ ಲಕ್ಷ್ಮೀನಾರಾಯಣದೇವ ದಂಡನಾಯಕನ ಉಲ್ಲೇಖವಿದೆ.[೫] ಬೇಲೂರಿನ ಎರಡು ಶಾಸನಗಳಲ್ಲಿ ಪೆರುಮಾಳ್ ದಂಡನಾಯಕ ಅಳಿಯ ರುದ್ರಣ್ಣನ ಹೆಸರಿದೆ. ಮೇಲಿನ ಮಾಹಿತಿಗಳ ಆಧಾರಗಳ ಮೇಲೆ ಮೋಡಸಂತತಿಯ ವಂಶಾವಳಿಯನ್ನು ಈ ರೀತಿಯಲ್ಲಿ ರಚಿಸಬಹುದು.



ಬೆಳ್ಳೂರಿನ ಮಾದವ ದೇವಾಲಯದಲ್ಲಿರುವ ಶಾಸನದಲ್ಲಿ ಬಸವಿಯಕ್ಕಳನ್ನು ಪೆರುಮಾಳ್ ದಂಡನಾಯಕರ ತಂಗಿಯೆಂದು ಹೇಳಿದೆ.[೬] ಗ್ರಾಮದ ಪ್ರಸನ್ನ ಮಾದವ ದೇವರ ಪಕ್ವಾನದ ಉಪಹಾರಕ್ಕೆ ಕುಂಬಾರಗುಂಡಿಯಲ್ಲಿ ಗದ್ದೆಯನ್ನು, ಪೆರುಮಾಳ್‌ದಣ್ಣಾಯಕರು ಅವರ ಹೆಸರಿನ ಕೆರೆಯಲ್ಲಿ ಭೂಮಿಯನ್ನು ದತ್ತಿ ಬಿಟ್ಟಿದ್ದಾರೆ. ಇದೇ ಶಾಸನದಲ್ಲಿ ಇವರ ಮಗ ಲಕ್ಷ್ಮೀನಾರಾಯಣ ದಣ್ಣಾಯಕನು ನೀಡಿದ ದತ್ತಿಯ ವಿವರವಿದೆ. ಇದೇ ದೇವಾಲಯದಲ್ಲಿರುವ ಇನ್ನೊಂದು ಶಾಸನದಲ್ಲಿ ಬೆಳ್ಳೂರನ್ನು ಉದ್ಭವ ನರಸಿಂಹಪುರವೆಂಬ ಅಗ್ರಹಾರವನ್ನಾಗಿ ಮಾಡಿ ವೀರನರಸಿಂಹದೇವರು ಪೆರುಮಾಳ್ ದಂಡನಾಯಕರಿಗೆ ಧಾರಾಪೂರಕವಾಗಿ ನೀಡಿದ್ದಾರೆ.[೭] ಇಲ್ಲಿ ಪೆರುಮಾಳರು ಅಲ್ಲಾಳ ಸಮುದ್ರವೆಂಬ ಕೆರೆಯನ್ನು ನಿರ್ಮಿಸಿದ್ದಾರೆ.

ಪೆರುಮಾಳ್ ದಂಡನಾಯಕರ ಉಲ್ಲೇಖವಿರುವ ಮೊದಲ ಶಾಸನ ಚಾಮರಾಜನಗರ ತಾಲ್ಲೂಕಿನ ಎಡೂರುನಲ್ಲಿದೆ.[೮] ಕ್ರಿ.ಶ. ೧೨೪೦ರ ಎರಡನೇ ಸೋಮೇಶ್ವರನ ಕಾಲದ ಶಾಸನದಲ್ಲಿ ಪದಿನಾಲ್ಕು ನಾಡಿನ ಸಮಸ್ತ ಪ್ರಭುಗಾವುಂಡರು ಮೂಗೂರಿನ ಪ್ರದೇಶಿನಾಯಕ ದೇವರಿಗೆ ದೇವಧನವಾಗಿ ಮೂಗೂರನ್ನು ನೀಡಿದ್ದಾರೆ.

ಪೆರುಮಾಳ್ ದಂಡನಾಯಕರು ಅಲ್ಲಾಳನಾಥನ ಆರಾಧಕರಾಗಿದ್ದು ವೈಷ್ಣವ ಧರ್ಮದ ಏಳಿಗೆಗೆ ಶ್ರಮಿಸಿದ್ದಾರೆ. ಬೆಳ್ಳೂರಿನಲ್ಲಿ ಹದಿನೆಂಟು ನಾಡ ಶ್ರೀವೈಷ್ಣವರು ನಾಗಮಂಗಲದ ಶ್ರೀ ಚನ್ನಕೇಶವ ದೇವರಿಗೆ ಪೆರುಮಾಳ್ ದಂಡನಾಯಕರ ಮುಂದಾಳತ್ವದಲ್ಲಿ ದತ್ತಿ ಬಿಟ್ಟಿದ್ದಾರೆ.[೯] ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಲ್ಲಿರುವ ಶಾಸನದಲ್ಲಿ ಇವರು ಎಡತಲೆಯವರೆಂಬ ಉಲ್ಲೇಖವಿದೆ.[೧೦] ಎಡತಲೆ ಯಳಂದೂರು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿರುವ ಶಾಸನದಲ್ಲಿ ಪೆರುಮಾಳ್ ದಂಡನಾಯಕನ ಮಗ ಮಂಚಣ್ಣ ದಂಡನಾಯಕರ ಹೆಸರಿದೆ. ಮೂರನೆಯ ನರಸಿಂಹನ ಕಾಲದಲ್ಲಿ ಪುಂಗನೂರಿನಲ್ಲಿದ್ದಾಗ ಯಳಂದೂರಿನ ಚೋಳೇಂದ್ರಸಿಂಹ ಚತುರ್ವೇದಿ ಮಂಗಲದ ಕಪಾಲೇಶ್ವರ ದೇವರಿಗೆ ಭೂಮಿ ನೀಡಿದ್ದಾರೆ.[೧೧] ವೀರಬಲ್ಲಾಳನ ಕಾಲದಲ್ಲಿ ನರಸಮಂಗಲದ ಜನಾರ್ಧನ ದೇವಾಲಯದ ಅಮೃತಪಡಿ ಪೂಜೆಗೆ ರಾಮಸಮುದ್ರವನ್ನು ದತ್ತಿ ಬಿಟ್ಟಿದ್ದಾರೆ.[೧೨] ಆಲಗೋಡಿನ ಚನ್ನಕೇಶವ ದೇವಾಲಯದಲ್ಲಿ ರಂಗಮಂಟಪ, ಸಭಾಮಂಟಪವನ್ನು ನಿರ್ಮಿಸಿದ್ದಾರೆ.[೧೩]

ಪೆರುಮಾಳ್ ದಂಡನಾಯಕರು ಶಿಕ್ಷಣದ ಮಹಾನ್ ಪ್ರೋತ್ಸಾಹಕರಾಗಿದ್ದರು. ತಡಿಮಾಲಂಗಿಯಲ್ಲಿ ಬಾಲಶಾಲೆಯನ್ನು ಸ್ಥಾಪಿಸಿ ಕನ್ನಡ, ನಾಗರ, ತಿಗುಳ ಭಾಷೆಯನ್ನು ಬೋಧಿಸುವ ಅಲ್ಲಿನ ಉಪಾಧ್ಯಾಯರ ಜೀವನಕ್ಕೆ ೧ ಗದ್ಯಾಣವನ್ನು ನೀಡಿದ್ದಾರೆ. ಇದೇ ಗ್ರಾಮದ ತಂಡಿಶೆಟ್ಟಿಯ ಮಗ ಚೊಕ್ಕಗವುಡ, ಮಾದಿಗವುಡನ ಮಗ ಮಿಂಡಗವುಡ ೨ ಗದ್ಯಾಣವನ್ನು ಉಪಾಧ್ಯಾಯರ ಜೀವಿತಕ್ಕೆ ಹಲವು ರೀತಿಯ ತೆರಿಗೆಯ ಹಣವನ್ನು ನೀಡಿದ್ದಾರೆ.[೧೪]

ಮೈಸೂರು ತಾಲ್ಲೂಕಿನ ದೇವಹಳ್ಳಿಯ ಶಾಸನ ಪೆರುಮಾಳ್ ದಂಡನಾಯಕರು ದೇವನಹಳ್ಳಿ ಮುತ್ತಿಗೆಯನ್ನು ವಿವರಿಸುತ್ತದೆ.[೧೫] ಹೊಯ್ಸಳರ ದಂಡು ಸಂತೆಯೂರಿನಲ್ಲಿದ್ದಾಗ ಉರುಗತ್ತಿ ಬಾಕಬೋವನ ಮಗ ಹೊಯ್ಸಳಚಾರಿಯ ಪ್ರಧಾನ ಹೆಮ್ಮಡಿಯು ಮರಣ ಹೊಂದಲಾಗಿ ಆತನ ಗಂಡುತನವನ್ನು ಮೆಚ್ಚಿ ಕುಟುಂಬಕ್ಕೆ ಭೂಮಿಯನ್ನು ನೀಡಿದ್ದಾರೆ.

ಬೇಲೂರಿನ ಚನ್ನಕೇಶವ ದೇವಾಲಯದಲ್ಲಿರುವ ಎರಡು ಶಾಸನದಲ್ಲಿ ಪೆರುಮಾಳ್ ದಂಡನಾಯಕನ ಅಳಿಯ ರುದ್ರಣ್ಣನ ಉಲ್ಲೇಖವಿದೆ. ಶ್ರೀವೈಷ್ಣವ ಯತಿ ಕಮಲನಾಥತೀರ್ಥರ ಯತಿಭಿಕ್ಷೆಗೆ ನಾಲ್ಕು ಗದ್ಯಾಣವನ್ನು, ಮತ್ತೊಂದು ಶಾಸನದಲ್ಲಿ ಒಂದು ಗದ್ಯಾಣವನ್ನು ನೀಡಿದ್ದಾನೆ.[೧೬] ಇದೇ ತಾಲ್ಲೂಕಿನ ನರಸಿಪುರ ಶಾಸನದಲ್ಲಿ ಪೆರುಮಾಳ್ ದಂಡನಾಯಕರ ತಾಯಿ ಮಾಚಿಯಮ್ಮ ಕ್ರಿ.ಶ. ೧೨೮೦ರಲ್ಲಿ ಮರಣಹೊಂದಲಾಗಿ ಇವರ ವೃಂದಾವನವನ್ನು ನಿರ್ಮಿಸಿ ದತ್ತಿ ಬಿಟ್ಟಿದ್ದಾರೆ.[೧೭] ಇದೇ ಗ್ರಾಮದಲ್ಲಿ ಪೆರುಮಾಳ್ ಸಮುದ್ರವೆಂಬ ಕೆರೆಯನ್ನು ನಿರ್ಮಿಸಿದ್ದಾರೆ.

ಪೆರುಮಾಳ್ ದಂಡನಾಯಕರ ಉಲ್ಲೇಖವಿರುವ ಎಲ್ಲಾ ಶಾಸನಗಳಲ್ಲಿಯೂ ಅವರನ್ನು ಮೋಡ ಕುಲಕಮಳಮಾರ್ತಾಂಡ, ಇಮ್ಮಡಿ ರಾವುತರಾಯನೆಂಬ ಬಿರುದುಗಳ ಉಲ್ಲೇಖವಿದೆ. ಮೊದಲನೆ ಬಿರುದು ಆತನ ಮನೆತನವನ್ನು ಸೂಚಿಸುತ್ತದೆ. ರಾವುತರಾಯನೆಂದರೆ ಅಶ್ವ ಸವಾರರ ಒಡೆಯನೆಂಬ ಅರ್ಥವಿದೆ. ಬೆಳಗಾವಿಯ ಹಿಪ್ಪರಗಿಯಲ್ಲಿ ಮೈಲಾರನನ್ನು ರಾವುತರಾಯನೆಂದು ಕರೆಯುತ್ತಾರೆ.[೧೮] ಎಂ.ಎಂ. ಕಲಬುರ್ಗಿಯವರು ಮೈಲಾರನ ಕುರಿತ ತಮ್ಮ ಲೇಖನವೊಂದರಲ್ಲಿ ರಾವುತರಾಯನೆಂಬ ಅಶ್ವರೋಹಿ ಕ್ರಮೇಣ ದೈವತ್ವಕ್ಕೇರಿ ಮೈಲಾರನಾದನೆಂದು ಹೇಳಿದ್ದಾರೆ.[೧೯] ಪೆರುಮಾಳ್ ದಂಡನಾಯಕರು ಇಮ್ಮಡಿ ರಾವುತರಾಯನಾದರೆ ಎಂ.ಎಂ. ಕಲಬುರ್ಗಿಯವರು ಹೇಳಿರುವ ರಾವುತರಾಯ, ಹಿಪ್ಪರಗಿಯ ರಾವುತರಾಯ ನಡುವಿನ ಸಂಬಂಧದ ವಿಶ್ಲೇಷಣೆ ಹೆಚ್ಚಿನ ಸಂಶೋಧನೆಗೆ ಯೋಗ್ಯವಾದ ವಿಷಯವಾಗಿದೆ.

ಪೆರುಮಾಳ್ ದಂಡನಾಯಕರ ನಂತರ ಅವರ ಮಗ ಮಾದವ ದಣ್ಣಾಯಕರು ಹದಿನಾಲ್ಕು ನಾಡುಗಳ ಮಹಾಪ್ರಧಾನರಾಗಿ ಪ್ರಮುಖ ಪಾತ್ರವಹಿಸಿದ್ದಾರೆ. ಹರದನಹಳ್ಳಿಯ ಐದು ಶಾಸನಗಳಲ್ಲಿ ಇವರ ಉಲ್ಲೇಖವಿದ್ದು, ಇದೇ ಗ್ರಾಮದ ಸಮೀಪವಿರುವ ಮಗ್ಗೆಯ ಇವರ ಜನ್ಮಸ್ಥಳವೆಂದು ಹೇಳಿದೆ. ಇವರ ಕಾಲದಲ್ಲಿ ಹರದನಹಳ್ಳಿಯ ಅಣಿಲೇಶ್ವರ ದೇವಾಲಯದ ರಂಗಮಂಟಪದ ನಾಲ್ಕು ಕಂಬಗಳನ್ನು ಕ್ರಮವಾಗಿ ಒರೆಗಾವುಂಡನ ಮಗ ಹಿರೇಗೌವುಡ, ಮಿಂಡಗೌವುಡ, ಮಾದಯನ ಮಗ ನಾಡಿಗವುಡ, ಮೊರೆಗೌವುಂಡನ ಮಗ ಮಂಡಿಗೌವುಡ, ರಾಯಗೌವುಡನ ಮಗ ಮೋಡಗವುಡನು ನಿರ್ಮಿಸಿದ್ದಾರೆ.[೨೦] ಇದೇ ದೇವಾಲಯದಲ್ಲಿರುವ ಮತ್ತೊಂದು ಶಾಸನದಲ್ಲಿ ಮಗ್ಗೆಯದ ಪುರಷಗೌವುಡನ ಮಗ ಮಾರಗೌವುಡ ಅಣಿಲೇಶ್ವರ ದೇವರ ನಂದಾದೀವಿಗೆಗೆ ಕಂಬಹಳ್ಳಿ, ಬಂಡಿಗೆರೆಯನ್ನು ದತ್ತಿ ಬಿಟ್ಟಿದ್ದಾರೆ.[೨೧] ಕಿಲಗೆರೆಯಲ್ಲೇ ಅಲ್ಲಪ್ಪ ದಣ್ಣಾಯಕರ ಪತ್ನಿ ಚಾಮವ್ವೆ ದಣ್ಣಾಯಕಿ ತೆರೆಕಣಾಂಬಿಯಲ್ಲಿ ಗೋಪಿನಾಥ ದೇವರನ್ನು ಪ್ರತಿಷ್ಠಾಪಿಸಿ ದೇವರ ಅಂಗರಂಗ ಭೋಗಕ್ಕೆ ಮಾದವ ದಂಡನಾಯಕರು ಕೆಲ್ಲಿಗೆರೆ, ಬೆಲುಕುಪ್ಪೆ ಗ್ರಾಮವನ್ನು ದತ್ತಿ ಬಿಟ್ಟಿದ್ದಾರೆ.[೨೨] ತೆರಕಣಾಂಬಿಯಲ್ಲಿ ಅಲ್ಲಾಳನಾಥ ದೇವರನ್ನು ಪ್ರತಿಷ್ಠಾಪಿಸಿ ಸಹೋದರ ಕೇತಣ್ಣ ದಣ್ಣಾಯಕರ ಜೊತೆಸೇರಿ ಕೊತ್ತಲವಾಡಿ ಗ್ರಾಮವನ್ನು ದಾನವಾಗಿ ನೀಡಿದ್ದಾರೆ.[೨೩] ತ್ರಿಯಾಂಬಕಪುರದಲ್ಲಿ ತಮ್ಮ ತಂದೆಯ ಹೆಸರಿನಲ್ಲಿ ಪೆರುಮಾಳ್ ಪುರವನ್ನು ನಿರ್ಮಿಸಿ ಗ್ರಾಮದ ಶ್ರೀವೈಷ್ಣವರಾದ ಗೋವಿಂದದಾಸ, ರಾಮದಾಸ, ಶ್ರೀರಂಗದಾಸರಿಗೆ ನೀಡಿದ್ದಾರೆ.[೨೪] ಗುಂಡ್ಲುಪೇಟೆಯ ಗೋಪಿನಾಥ ದೇವರ ಅಂಗರಂಗಭೋಗಕ್ಕೆ ಕಣ್ಣೆಗಾಲವನ್ನು ದತ್ತಿಬಿಟ್ಟಿದ್ದಾರೆ. ಎಡತಲೆಯ ವೇಣುಗೋಪಾಲಸ್ವಾಮಿ ದೇವಾಲಯ ನಿರ್ಮಾಣ, ಅಭಿವೃದ್ಧಿ ಮೋಡಕುಲ ಸಂತತಿಯ ಕಾಲದಲ್ಲಾಗಿದೆ.

ಅಡಿಟಿಪ್ಪಣಿಗಳು

೧. ಎಪಿಗ್ರಾಫಿಯ ಕರ್ನಾಟಿಕ ಸಂ. ೯, ಪುಟ LXV.

೨. ಎ.ಕ. ಸಂ. ೭ ನಾಗಮಂಗಲ ಶಾಸನಸಂಖ್ಯೆ ೭೩, ೭೪, ೭೫.

೩. ಎ.ಕ. ಸಂ. ೫ ಟಿ. ನರಸೀಪುರ ಶಾಸನಸಂಖ್ಯೆ ೨೩೮, ತಡಿಮಾಲಂಗಿ, ಕ್ರಿ.ಶ. ೧೨೯೦, ಪುಟ ೬೨೦.

೪. ಎ.ಕ.ಸಂ. ೪ ಚಾಮರಾಜನಗರ, ಶಾಸನಸಂಖ್ಯೆ ೩೦೯, ಕೊತ್ತಲವಾಡಿ, ಕ್ರಿ.ಶ. ೧೩೦೩, ಪುಟ ೨೦೨.

೫. ಅದೇ, ಶಾಸನಸಂಖ್ಯೆ ೧೦೮, ಆಲದೂರು, ಕ್ರಿ.ಶ. ೧೨೮೫, ಪುಟ ೬೨.

೬. ಎ.ಕ. ಸಂ. ೭, ನಾಗಮಂಗಲ ಶಾಸನಸಂಖ್ಯೆ ೭೪, ಬೆಳ್ಳೂರು, ಕ್ರಿ.ಶ. ೧೨೭೧, ಪುಟ ೬೯.

೭. ಅದೇ, ಶಾಸನಸಂಖ್ಯೆ ೮೨, ಬೆಳ್ಳೂರು, ಕ್ರಿ.ಶ. ೧೨೬೯, ಪುಟ ೮೫.

೮. ಎ.ಕ. ಸಂ. ೪, ಚಾಮರಾಜನಗರ, ಶಾಸನಸಂಖ್ಯೆ ೧೨೮, ಎಡೂರು, ಕ್ರಿ.ಶ. ೧೨೪೭, ಪುಟ ೭೩.

೯. ಎ.ಕ.ಸಂ. ೭, ನಾಗಮಂಗಲ, ಶಾಸನಸಂಖ್ಯೆ ೮೩, ಬೆಳ್ಳೂರು, ಕ್ರಿ.ಶ. ೧೨೬೯, ಪುಟ ೮೭.

೧೦. ಎ.ಕ. ಸಂ. ೬, ಪಾಂಡವಪುರ, ಶಾಸನಸಂಖ್ಯೆ ೧೮೫, ಮೇಲುಕೋಟೆ, ಕ್ರಿ.ಶ. ೧೩೧೯, ಪುಟ ೨೫೯.

೧೧. ಎ.ಕ. ಸಂ. ೪, ಯಳಂದೂರು, ಶಾಸನಸಂಖ್ಯೆ ೦೭, ಯಳಂದೂರು, ೧೩ನೇ ಶತಮಾನ, ಪುಟ ೨೭೬.

೧೨. ಅದೇ, ಚಾಮರಾಜನಗರ, ಶಾಸನಸಂಖ್ಯೆ ೨೯೬, ನರಸಮಂಗಲ, ೧೩ನೇ ಶತಮಾನ, ಪುಟ ೧೯೨.

೧೩. ಎ.ಕ. ಸಂ. ೫, ಟಿ. ನರಸೀಪುರ, ಶಾಸನಸಂಖ್ಯೆ ೦೭, ಟಿ. ನರಸೀಪುರ, ಕ್ರಿ.ಶ. ೧೨೯೦, ಪುಟ ೩೨೬.

೧೪. ಅದೇ, ಶಾ.ಸಂ ೨೩೮, ತಡಿಮಾಲಂಗಿ, ಕ್ರಿ.ಶ. ೧೨೯೦, ಪುಟ ೬೨೧.

೧೫. ಅದೇ, ಮೈಸೂರು, ಶಾ.ಸಂ. ೨೦೪, ದೇವಗಳ್ಳಿ, ಕ್ರಿ.ಶ. ೧೨೭೪, ಪುಟ ೩೦೯.

೧೬. ಎ.ಕ. ಸಂ. ೯, ಬೇಲೂರು, ಶಾ. ಸಂ. ೮ ಮತ್ತು ೫೩, ಕ್ರಿ.ಶ. ೧೨೯೭, ಪುಟ ೬ ಮತ್ತು ೩೪.

೧೭. ಅದೇ, ಶಾ.ಸಂ. ೫೬೨, ನರಸೀಪುರ, ಕ್ರಿ.ಶ. ೧೨೮೦, ಪುಟ ೪೯೦.

೧೮. ಮಾರ್ಗ ಸಂ. ೧, ಎಂ.ಎಂ. ಕಲಬುರ್ಗಿ, ನರೇಶ್ ಆ್ಯಂಡ್ ಕಂಪನಿ, ಬೆಂಗಳೂರು, ಪುಟ ೩೫೨.

೧೯. ಅದೇ, ಪುಟ ೩೫೩.

೨೦. ಎ.ಕ. ಸಂ. ೪, ಚಾಮರಾಜನಗರ, ಶಾ.ಸಂ.೨೭೫, ೨೭೬, ೨೭೭, ೨೭೮ ಹರದನಹಳ್ಳಿ, ಕ್ರಿ.ಶ. ೧೩೪೦, ಪುಟ ೧೭೦, ೧೭೧.

೨೧. ಅದೇ, ಶಾ.ಸಂ. ೨೬೩, ಹರದನಹಳ್ಳಿ, ಕ್ರಿ.ಶ. ೧೩೧೬, ಪುಟ ೧೬೨.

೨೨. ಅದೇ, ಶಾ.ಸಂ.೩೦೬, ಕಿಲಗೆರೆ, ಕ್ರಿ.ಶ. ೧೩೧೮, ಪುಟ ೧೯೮.

೨೩. ಅದೇ. ಶಾ.ಸಂ. ೩೦೯, ಕೊತ್ತಲವಾಡಿ, ಕ್ರಿ.ಶ. ೧೩೦೩, ಪುಟ ೨೦೨.

೨೪. ಎ.ಕ.ಸಂ. ೩, ಗುಂಡ್ಲುಪೇಟೆ, ಶಾ. ಸಂ. ೧೫೨, ತ್ರಿಯಾಂಬಕಪುರ, ಕ್ರಿ.ಶ. ೧೩೧೦, ಪುಟ ೧೨೩.

೪. ಪ್ರವಾಸಿಗರ ಕಣ್ಣಲ್ಲಿ ವಿಜಯನಗರದ ಭೌಗೋಳಿಕ ಚಿತ್ರಣ

– *ಪ್ರಭು ಡಿ.*

ಭಾರತೀಯ ಮತ್ತು ಕರ್ನಾಟಕ ಇತಿಹಾಸಗಳೆರಡರಲ್ಲೂ ವಿಜಯನಗರ ಸಾಮ್ರಾಜ್ಯದ ಇತಿಹಾಸ ಮಹತ್ತ್ವಪೂರ್ಣವಾದುದು. ಆರಂಭಕಾಲದಲ್ಲಿ ಹೊಯ್ಸಳರ ಅಧೀನದಲ್ಲಿದ್ದ ಹಂಪೆ ಕ್ರಮೇಣ ಸ್ವತಂತ್ರ ರಾಜ್ಯದ ರಾಜಧಾನಿಯಾಗಿ ಪರಿವರ್ತನೆಯಾಯಿತು. ವಿಜಯನಗರದ ವಿಜಯಧ್ವಜ ಜಗತ್ಪ್ರಸಿದ್ಧವಾಗಲು ಸಂಗಮ, ಸಾಳ್ವ, ತುಳುವ ಮತ್ತು ಅರವೀಡು ವಂಶದ ಅರಸರ ಕೊಡುಗೆಯೇ ಕಾರಣ. ಈ ನಗರದ ಸಿರಿ ಸೊಬಗನ್ನು ಕಣ್ತುಂಬಿಕೊಳ್ಳಲು ದೇಶ–ವಿದೇಶಗಳಿಂದ ರಾಯಭಾರಿಗಳು, ಪ್ರವಾಸಿಗರ ದಂಡು ಆಗಮಿಸುತ್ತಿತ್ತು. ಹೀಗೆ ಬಂದ ಎಲ್ಲಾ ಪ್ರವಾಸಿಗರು ತಮ್ಮ ಅನುಭವಗಳನ್ನೇನು ದಾಖಲಿಸಿಲ್ಲ. ಆದರೆ ಹಲಕೆಲವು ದಾಖಲೆಗಳು ನಮಗೆ ಲಭ್ಯವಿವೆ. ಅವುಗಳಲ್ಲಿ ನಿಕಲೊ–ದೆ–ಕೊಂತಿ, ಅಬ್ದುಲ್ ರಜಾಕ್, ದುಆರ್ತೆ ಬಾರ್ಬೊಸ, ಫರ್ನ್ಯಾಂವ್ ನೂನಿಜ್, ಸೀಜರ್ ಫ್ರೆಡರಿಕ್ ಅವರ ದಾಖಲೆಗಳು ಪ್ರಮುಖ. ಇದನ್ನು ಹೆಚ್.ಎಲ್. ನಾಗೇಗೌಡ ಅವರು ***'ಪ್ರವಾಸಿ ಕಂಡ ಇಂಡಿಯಾ ಸಂಪುಟ ೨'*** ರಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಮೇಲಿನ ಎಲ್ಲಾ ಪ್ರವಾಸಿಗರು ಏಕಕಾಲದಲ್ಲೇನು ವಿಜಯನಗರಕ್ಕೆ ಭೇಟಿ ಕೊಡಲಿಲ್ಲ. ಪ್ರತಿಯೊಬ್ಬರ ಭೇಟಿಯ ಸಂದರ್ಭ ಕಾಲದ ಅಂತರವನ್ನು ಹೊಂದಿತ್ತು. ಈ ಹಿನ್ನೆಲೆಯಲ್ಲಿ ನಿಕೊಲೊ ಕೊಂತಿ ಮತ್ತು ಅಬ್ದುಲ್ ರಜಾಕ್ ಅವರು ಎರಡನೇ ದೇವರಾಯನ(೧೪೨೪–೧೪೪೬) ಕಾಲದಲ್ಲಿಯೂ ಬಾರ್ಬೊಸ ಮತ್ತು ನೂನಿಜ್ ಕೃಷ್ಣದೇವರಾಯನ(೧೫೦೯–೧೫೩೨) ಕಾಲದಲ್ಲಿಯೂ ಸೀಜರ್ ಫ್ರೆಡರಿಕ್ ತಾಳಿಕೋಟೆ ಕದನದ(೧೫೬೫) ನಂತರ ಭೇಟಿ ನೀಡಿರುವುದರಿಂದ ವಿಜಯ ನಗರದ ಮೂರು ಕಾಲಘಟ್ಟದಲ್ಲಿನ ಭೌಗೋಳಿಕ ಚಿತ್ರಣವನ್ನು ನಾವು ದಾಖಲಿಸಬಹುದಾಗಿದೆ.

ವಿಜಯನಗರದ ಹೆಸರು : ಪಾಶ್ಚಾತ್ಯ ಪ್ರವಾಸಿಗರು ವಿಜಯನಗರವನ್ನು ವಿವಿಧ ಹೆಸರುಗಳಿಂದ ಸಂಬೋಧಿಸಿದ್ದಾರೆ. ಪೋರ್ಚುಗೀಸರು ಬಿಸ್ನಗರ್, ಬಿದ್ನಜಗರ್, ಬಿಜನಘೇರ್ ಎಂದೂ ರಷ್ಯಾದ ನಿಕಿಟನ್ ಬಿಜನೇಗೇರ್ ಎಂದೂ; ಇಟಲಿಯ ನಿಕಲೊ ಕೊಂತಿಯು ಬಿಜನೇಗಾಲಿಯಾ ಎಂದೂ ಕರೆದಿದ್ದಾರೆ. ಅಬ್ದುಲ್ ರಜಾಕ್, ಮೇಲಿನವರ ಮಾತನ್ನೇ ಅನುಮೋದಿಸಿ ಕೊನೆಗೆ "ಇಂತಹ ನಗರವನ್ನು ಕಣ್ಣು ಕಂಡಿಲ್ಲ ಕಿವಿ ಕೇಳಿಲ್ಲ"[೧] ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾನೆ.

ಪ್ರವಾಸಿಗರು ಕಂಡ ವಿಜಯನಗರವನ್ನು ಪ್ರಮುಖವಾಗಿ ರಾಜಕೀಯ, ಭೌಗೋಳಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಸಮಂಜಸವಾಗಿದೆ. ವಿಜಯನಗರದ ಅರಸರ ದಂಡಯಾತ್ರೆ, ದಿಗ್ವಿಜಯ ಮತ್ತು ಯುದ್ಧಕ್ಕೆ ಸಂಬಂಧಿಸಿದಂತೆ ಡೊಮಿಂಗೊ ಪಾಯಸ್ ಮತ್ತು ನೂನಿಜ್‌ರ ದಾಖಲೆಗಳು ಅತಿ ಹೆಚ್ಚು ಮಾಹಿತಿಯನ್ನೇ ನೀಡುತ್ತವೆ. ಆದರೆ ನಮ್ಮ ಲೇಖನದ ಉದ್ದೇಶ 'ಪ್ರವಾಸಿಗರ ಕಣ್ಣಲ್ಲಿ ಕಂಡ ವಿಜಯನಗರದ ಭೌಗೋಳಿಕ ಚಿತ್ರಣ'ವನ್ನು ಕಟ್ಟಿಕೊಳ್ಳುವುದೆ ಆಗಿದೆ.

ವಿಜಯನಗರದ ಭೌಗೋಳಿಕ ವ್ಯಾಪ್ತಿ ಮತ್ತು ದುರ್ಗ : ವಿಜಯನಗರದ ಚಿತ್ರಣವನ್ನು ನೀಡುವ ಕ್ರಮದಲ್ಲಿ ಪ್ರವಾಸಿಗರ ಭೌಗೋಳಿಕ ಪ್ರಜ್ಞೆಯನ್ನು ಮೆಚ್ಚಲೇ ಬೇಕು. ಈ ಕುರಿತು ಅಬ್ದುಲ್ ರಜಾಕ್ "ಈ ನಗರವು ಹಲವು ಪರ್ವತಗಳಿಂದಲು ನದಿಗಳಿಂದಲೂ ಕೂಡಿತ್ತು"[೨] ಎಂದಿದ್ದಾನೆ. ಇದರಿಂದ ವಿಜಯನಗರವು ಒಂದು ಗಿರಿದುರ್ಗವೂ ಹೌದು ಎಂಬುದನ್ನು ದಾಖಲಿಸಿದ್ದಾನೆ. ಈತನ ಪ್ರಕಾರ ವಿಜಯ ನಗರವು ಏಳು ಸುತ್ತಿನ ಕೋಟೆಯಿಂದ ಆವೃತವಾಗಿತ್ತು. ಮೊದಲನೆ ಕೋಟೆಗೂ ಎರಡನೆ ಮತ್ತು ಮೂರನೆ ಕೋಟೆಗೂ ಮಧ್ಯ ಇರುವ ಜಾಗದಲ್ಲಿ ಬೇಸಾಯದ ಹೊಲಗಳು ಮನೆಗಳು ಮತ್ತು ತೋಟಗಳಿಂದ ಕೂಡಿತ್ತು. ಮೂರನೆ ಕೋಟೆಯಿಂದ ಏಳನೆಯ ಕೋಟೆಯವರೆಗೆ ಅಸಂಖ್ಯಾತ ಜನಗಳನ್ನು ಅನೇಕ ಅಂಗಡಿಗಳನ್ನು, ಅಂಗಡಿ ಬೀದಿಗಳನ್ನು ನೋಡಬಹುದು"[೩] ಎಂದಿದ್ದಾನೆ. ಡೊಮಿಂಗೊ ಪಾಯಾಸ್ ಕೂಡ "ಬಿಸ್ನಗರದ ಸುತ್ತ ಕಲ್ಲಿನಿಂದ ಆವರಿಸಿದ ಭದ್ರವಾದ ಕೋಟೆ ಇದೆ"[೪] ಎಂದಿದ್ದಾನೆ. ಇಂತಹ ಕಲ್ಲಿನ ಕೋಟೆಗಳು ಕೆಲವೊಮ್ಮೆ ದುರಸ್ತಿಗೆ ಒಳಗಾಗುತ್ತಿದ್ದುದನ್ನು ಪಾಯಾಸ್ ಹೇಳುವುದನ್ನು ಮರೆತಿಲ್ಲ.

ತುಂಗಭದ್ರ ನದಿ : ವಿಜಯನಗರದ ಜೀವನಾಡಿ ತುಂಗಭದ್ರ ನದಿ. ಈ ನಗರಕ್ಕೆ ಸಂಪೂರ್ಣ ಜಲಸಂಚಯನ ಈ ನದಿಯಿಂದಲೇ ಆಗುತ್ತಿತ್ತು. ಈ ನದಿಯನ್ನು ಪಾಯಸ್ ವಿಜಯನಗರದ ಉತ್ತರ ದಿಕ್ಕಿಗಿದೆ ಎಂದಿದ್ದಾನೆ. ಅದರ

ಜೊತೆಗೆ ಈ ನದಿಯ ಮೂಲಕವೇ ಆನೆಗೊಂದಿಗೆ ದೋಣಿ ಮುಖೇನ ಸಂಚಾರ ಕೈಗೊಳ್ಳುತ್ತಿದ್ದುದರ ಬಗ್ಗೆಯೂ ಹೇಳಿದ್ದಾನೆ. ಈ ಮೂಲಕ ತುಂಗಭದ್ರ ನದಿಯು ವಿಜಯನಗರದ ಪ್ರಮುಖ ಸಂಚಾರಿ ಮಾರ್ಗಗಳಲ್ಲಿ ಒಂದಾಗಿತ್ತು ಎಂದು ಪರಿಗಣಿಸಬಹುದು. ಸೀಜರ್ ಫ್ರೆಡರಿಕ್ ಹೇಳುವಂತೆ "ವಿಜಯನಗರದಲ್ಲಿ ಸತಿಪದ್ಧತಿಯನ್ನು ಈ ನದಿಯ ದಡದಲ್ಲಿ ನೆರವೇರಿಸಲಾಗುತಿತ್ತು."[೫] ಈ ಮೂಲಕ ತುಂಗಭದ್ರ ನದಿಯು ವಿಜಯನಗರದ ಜನರಿಗೆ ಪವಿತ್ರ ಧಾರ್ಮಿಕ ಸ್ಥಳವೂ ಆಗಿತ್ತು ಎಂದು ಊಹಿಸಬಹುದು.

ರಸ್ತೆಗಳು : ನಗರದ ಅಂದವನ್ನು, ವ್ಯವಸ್ಥೆಯನ್ನು ನಿರೂಪಿಸುವುದು ರಸ್ತೆಗಳು. ಅಳಿದುಳಿದು ಬಂದಿರುವ ವಿಜಯನಗರದ ನಗರ ವ್ಯವಸ್ಥೆಯ ರಸ್ತೆಗಳು ನೇರವಾಗಿಯೂ ಕಬ್ಬಿನ ಜಲ್ಲೆಯಾಕಾರದಲ್ಲಿಯು ಇರುವುದನ್ನು ನಾವು ಇಂದಿಗೂ ಕಾಣುತ್ತೇವೆ. ಆ ರಸ್ತೆಗಳ ಅಗಲ ಮತ್ತು ಅವಶ್ಯಕತೆಯ ಬಗ್ಗೆ ಕೆಲವು ಪ್ರವಾಸಿಗರು ಹೇಳಿದ್ದಾರೆ. ಈ ಸಂಬಂಧವಾಗಿ ಪಾಯಾಸ್ ಹೀಗೆ ಹೇಳಿದ್ದಾನೆ; "ರಾಜ ಬೀದಿಗಳು ಎಲ್ಲರಿಗೂ ಬೇಕಾದ ಸ್ಥಳವಾಗಿದ್ದವು. ಅಷ್ಟೇ ಅಲ್ಲದೇ ಇಲ್ಲಿಯ ರಸ್ತೆಗಳು ಅಗಲವಾಗಿಯೂ ಉದ್ದವಾಗಿಯೂ ಇದ್ದವು. ರಸ್ತೆಗಳು ಸಂಧಿಸುವ ಜಾಗದಲ್ಲಿ ಚೌಕಗಳನ್ನು ನಿರ್ಮಿಸಲಾಗುತಿತ್ತು. ಇಲ್ಲಿ ವಿದೇಶಿ ವರ್ತಕರು, ನಾನಾ ದೇಶದ ಜನರು ತುಂಬಿರುತ್ತಿದ್ದರು"[೬] ಎಂದಿದ್ದಾನೆ. ಇದನ್ನೇ ಬಾರ್ಬೋಸ ಅನುಸರಿಸಿದ್ದಾನೆ. ಇನ್ನು ಹೆದ್ದಾರಿಯನ್ನು ಕುರಿತು ಪಾಯಾಸ್ ಹೀಗೆ ಹೇಳಿದ್ದಾನೆ; "ನಾಗಲಾಪುರದಿಂದ ಕಮಲಾಪುರಕ್ಕೆ ಹೋಗುವ ರಸ್ತೆಯು ಕ್ರೀಡಾ ಯುದ್ಧದಲ್ಲಿ ಭಾಗವಹಿಸಲು ಬೇಕಿರುವಷ್ಟು ಅಗಲವಾಗಿವೆ. ರಸ್ತೆಯ ಇಕ್ಕೆಲದಲ್ಲಿ ಮನೆಗಳು ಅಂಗಡಿಗಳು ಇವೆ. ಇಲ್ಲಿ ಬೇಕಾದುದನ್ನು ಮಾರುತ್ತಾರೆ. ದಾರಿಯಲ್ಲಿ ಹೋಗುವವರಿಗೆ ನೆರಳಾಗಲೆಂದು ರಾಜ ಉದ್ದಕ್ಕೂ ಮರಗಳನ್ನು ನೆಡಿಸಿದ್ದಾನೆ."[೭] ಇದೇ ಸಂಗತಿಯನ್ನು ಪಾಯಾಸ್ ಮತ್ತೆ ಮತ್ತೆ ಉಲ್ಲೇಖಿಸಿದ್ದಾನೆ. ಇದರಿಂದ ವಿಜಯನಗರಕ್ಕೆ ಸಂಪರ್ಕ ಕಲ್ಪಿಸಿರುವ ರಸ್ತೆಗಳಲ್ಲಿ ಮರಗಳು ಅಥವಾ ಮರದ ತೋಪುಗಳು ಹೆಚ್ಚಾಗಿರುತ್ತಿದ್ದವೆಂಬುದು ವಿದಿತವಾಗುತ್ತದೆ. ಆದರೆ ಇಲ್ಲಿ ಸೂಕ್ಷ್ಮವಾಗಿ ಒಂದಂಶವನ್ನು ಗ್ರಹಿಸಬೇಕು. ವಿಜಯನಗರದೊಳಗಿನ ರಸ್ತೆಗಳಲ್ಲಿ ಎಲ್ಲಿಯೂ ಮರಗಿಡಗಳಿದ್ದ ಬಗ್ಗೆಯಾಗಲಿ ಅದರ ಸೂಕ್ಷ್ಮತೆಯನ್ನಾಗಲಿ ಯಾವೊಬ್ಬ ಪ್ರವಾಸಿಗನು ದಾಖಲಿಸಿಲ್ಲ. ನಗರದೊಳಗೆ ವೃಕ್ಷಗಳು ಅನಗತ್ಯವಾಗಿದ್ದವು. ದೈನಂದಿನ ಸಂಚಾರ ವ್ಯವಸ್ಥೆಗೆ ಇದರಿಂದ ತೊಂದರೆಯಾಗುತ್ತಿತ್ತೆಂಬುದನ್ನು ವಿಜಯನಗರದ ಜನತೆ ತಿಳಿದಿದ್ದಂತೆ ತೋರುತ್ತದೆ.

ಮನೆಗಳು : ವಿಜಯನಗರದಲ್ಲಿನ ಮನೆಗಳ ಬಗ್ಗೆ ಬಾರ್ಬೋಸ ಹೀಗೆ ಹೇಳೀದ್ದಾನೆ; "ಇಲ್ಲಿ ಒಂದು ಲಕ್ಷ ಮನೆಗಳಿಗಿಂತಲೂ ಹೆಚ್ಚು ವಾಸದ ಮನೆಗಳಿವೆ. ಅವುಗಳಲ್ಲಿ ಒಂದೇ ಅಂತಸ್ತಿನವು ಮೇಲ್ಛಾವಣಿ ಮಟ್ಟವಾಗಿರುತ್ತವೆ. ಮನೆಯ ಸುತ್ತಲೂ ಆವರಣ ಗೋಡೆ ಇರುತ್ತಿತ್ತು. ಆದರೆ ಜನಸಾಮಾನ್ಯರ ಮನೆಗಳೆಲ್ಲವೂ ಹುಲ್ಲು ಹೊದಿಸಿದ್ದವು"[೮] ಎಂದಿದ್ದಾನೆ. ಇದೇ ವಿಚಾರವನ್ನು ಪಾಯಾಸ್ ಹೇಳುತ್ತಾ "ಕೋಟೆಯೊಳಗಿನ ಮನೆಗಳ ಮೇಲ್ಛಾವಣಿ ಮಟ್ಟವಾಗಿದ್ದವು"[೯] ಎಂದಿದ್ದಾನೆ. ಈ ಇಬ್ಬರ ಹೇಳಿಕೆಗಳನ್ನು ಗಮನಿಸಿದರೆ, ಆ ಕಾಲದ ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ಮನೆಗಳು ನಿರ್ಮಾಣವಾಗುತ್ತಿದ್ದವು ಎಂದು ಅರ್ಥೈಸಬಹುದು.

ಈ ನಗರದಲ್ಲಿ ಜನವಸತಿಕೇಂದ್ರಗಳನ್ನು ಪ್ರವಾಸಿಗರು ವರ್ಣಿಸಿರುವ ರೀತಿಯನ್ನು ಗಮನಿಸಿದರೆ, ನಗರದ ಕೇಂದ್ರಭಾಗದಲ್ಲಿ ಅರಮನೆಯು ಅದರ ಸುತ್ತಲೂ ಆಡಳಿತಾಧಿಕಾರಿಗಳು, ರಾಜ್ಯಪಾಲರ ನಿವೇಶನವೂ ಅದರ ಸುತ್ತಲೂ ಸೈನ್ಯಾಧಿಕಾರಿಗಳು, ಬ್ರಾಹ್ಮಣರು, ವೈಶ್ಯರು ಮತ್ತು ಇತರ ಕಸುಬುದಾರಿಗಳ ಮನೆಗಳು ಕ್ರಮವಾಗಿ ರೂಪುಗೊಳ್ಳುತ್ತಿದ್ದವು. ಡೊಮಿಂಗೊ ಪಾಯಾಸ್‌ನ ವರ್ಣನೆ ವಿಶೇಷವಾಗಿದೆ. "ವಿಠಲನ ದೇವಸ್ಥಾನದ ಮುಂದೆಹೋದಂತೆ ಶ್ರೀಮಂತರ ಮನೆಗಳುಳ್ಳ ಅಗಲವಾದ ಹಾಗೂ ಸುಂದರವಾದ ಬೀದಿ ಇದೆ. ಇಲ್ಲಿ ಅನೇಕ ವರ್ತಕರು ವಾಸಮಾಡುತ್ತಾರೆ. ಅಲ್ಲದೆ ಇಲ್ಲಿ ಪ್ರತಿದಿನ ಸಂಜೆ ಸಂತೆ ಸೇರುತ್ತದೆ."[೧೦] ನಗರದ ಕೋಟೆಯ ಹೊರಭಾಗ ಕಟುಕರ ಮನೆಗಳಿದ್ದುದಾಗಿ ಹೇಳಿದ್ದಾನೆ. ಕರಕುಶಲ ಕೆಲಸಗಾರರ ವಾಸ ಮಾಡುವ ಕೇರಿಗಳು ಬೇರೆಯೇ ಇದ್ದವು. ಇವರು ನಾನಾ ತರಹದ ಸಾಮಾನುಗಳನ್ನು ಮಾಡಿ ಮಾರಾಟ ಮಾಡುತ್ತಿದ್ದರು. ಈ ಬೀದಿಯ ಕೊನೆಯಲ್ಲಿ ಸಣ್ಣ ದೇವಸ್ಥಾನಗಳಿರುತ್ತಿದ್ದವು. ಈತನ ಪ್ರಕಾರ ತಾತ್ಕಾಲಿಕವಾಗಿ ನಗರದ ಚೌಕಗಳಲ್ಲಿ ರಾಜಬೀದಿಗಳಲ್ಲಿ ಶ್ರೀಮಂತರ ಕೇರಿಗಳಲ್ಲಿ ಅಂಗಡಿಗಳನ್ನು ಹಾಕಲಾಗುತ್ತಿತ್ತು. ವ್ಯಾಪಾರದ ಉದ್ದೇಶಕ್ಕಾಗಿ ಅನೇಕ ಬಜಾರ್‌ಗಳಿರುತ್ತಿದ್ದವು. ಈ ಸಂಬಂಧವಾಗಿ ನೂನಿಜ್ ಮತ್ತು ಪಾಯಾಸ್ ಅನೇಕ ಉಪಯುಕ್ತ ಮಾಹಿತಿಯನ್ನು ನೀಡಿದ್ದಾರೆ.

ಬಜಾರ್‌ಗಳು : ಹಂಪಿಯು ವ್ಯಾಪಾರಕ್ಕೆ ಪ್ರಸಿದ್ಧಿಯನ್ನು ಹೊಂದಿತ್ತು. ಅಲ್ಲಿ ವಿಶಾಲವಾದ ಬಜಾರ್ ಬೀದಿಗಳು ಇಂದಿಗೂ ನೋಡುಗರ ಕಣ್ಣಿಗೆ ಕಾಣಸಿಗುತ್ತವೆ. ಆದರೆ, ಅಂದಿನ ಸಿರಿ ವೈಭವ ಇಂದು ಅಗೋಚರ. ವಿರೂಪಾಕ್ಷ ದೇವಸ್ಥಾನದ ಮುಂದೆ ಇರುವಂತಹ ವಿಶಾಲವಾದ ಬಜಾರ್ ವಜ್ರವೈಡೂರ್ಯದ ವ್ಯಾಪಾರಕ್ಕೆ ಪ್ರಸಿದ್ಧಿಯನ್ನು ಪಡೆದಿತ್ತು. ಕಮಲಾಪುರದ ಬಜಾರ್ ಮುಂತಾದವು ಪ್ರಮುಖ

ಬಜಾರ್ ಎಂದೆನಿಸಿಕೊಂಡಿದ್ದವು. "ಇಲ್ಲಿಯ ಬಜಾರ್‌ಗಳಲ್ಲಿ ತಾಮ್ರ, ಪಾದರಸ, ಸಿಂಧೂರ, ಕೇಸರಿ, ಗುಲಾಬಿ, ಗಂಧ ಮೊದಲಾದ ಸುಗಂಧ ವಸ್ತುಗಳನ್ನು, ವಜ್ರ, ವೈಡೂರ್ಯ, ಸಣ್ಣ ಮುತ್ತುಗಳು, ರೇಷ್ಮೆ ಬಟ್ಟೆಗಳು ಮೊದಲಾದ ಉಪಯುಕ್ತ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಹಾಗೆಯೇ ನಗರದ ಹೊರಗಡೆ ಬೀದಿಗಳಲ್ಲಿ ಮಾಂಸಮಾರುವ ಅಂಗಡಿಗಳಿದ್ದವು."[೧೧] ಅಬ್ದುಲ್ ರಜಾಕ್ ಕೂಡ ಬಜಾರ್‌ಗಳನ್ನು ಕುರಿತಂತೆ ಹೀಗೆ ಹೇಳಿದ್ದಾನೆ; "ಅಂಗಡಿ ಬೀದಿಗಳು ಬಹು ಉದ್ದವಾಗಿಯೂ ಅಗಲವಾಗಿಯೂ ಇವೆ. ಗುಲಾಬಿ ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ ಎತ್ತರವಾದ ವೇದಿಕೆಗಳನ್ನು ರಚಿಸಿಕೊಂಡಿದ್ದಾರೆ. ರತ್ನ ಪಡಿಯ ವ್ಯಾಪಾರಿಗಳು ಅಂಗಡಿ ಬೀದಿಗಳಲ್ಲಿ ಬಹಿರಂಗವಾಗಿ ವಜ್ರವೈಡೂರ್ಯಗಳನ್ನು ಮುತ್ತುಗಳನ್ನು ಮಾರುತ್ತಾರೆ"[೧೨] ಎಂದಿದ್ದಾನೆ.

ಸೂಳೆಗೇರಿಗಳು : ದೇವದಾಸಿಯರು, ವೇಶ್ಯೆಯರು ಮೊದಲಾದ ಸಮಾಜದ ಪ್ರತಿಷ್ಠಿತ ವರ್ಗ ವಿಜಯನಗರದಲ್ಲಿ ಇತ್ತು. ಇಲ್ಲಿಯ ವೇಶ್ಯೆಯರು ಉನ್ನತದರ್ಜೆಯವರಾಗಿದ್ದರು. ಇವರ ವಸತಿ ಸ್ಥಳಗಳಲ್ಲಿನ ವೈಭೋಗದ ವರ್ಣನೆಯನ್ನು ನೋಡಿದರೆ, ಇವರು ಸಾಮಾಜಿಕವಾಗಿ ಅಂಗೀಕರಿಸಲ್ಪಟ್ಟಿದ್ದರು. ನಗರಗಳಲ್ಲಿ ಇವರಿಗೆ ಪ್ರತ್ಯೇಕ ಕೇರಿಯೇ ಇರುತ್ತಿತ್ತು. ಇವು ಶ್ರೀಮಂತರ, ವರ್ತಕರ ಕೇರಿಗಳಿಗೆ ಸಮಾನವಾಗಿರುತ್ತಿತ್ತು. ಈ ಸಂಬಂಧವಾಗಿ ಅಬ್ದುಲ್ ರಜಾಕ್ ಹೀಗೆ ಹೇಳಿದ್ದಾನೆ; "ದರಬ್ ಖಾನೆಗೆ ಎದುರಾಗಿ ರಾಜ್ಯಪಾಲನ ಮನೆಯಿದೆ. ದರಬ್ ಖಾನೆಯ ಹಿಂಭಾಗದಲ್ಲಿ ಮುನ್ನೂರು ಗಜಕ್ಕಿಂತಲೂ ಹೆಚ್ಚು ಉದ್ದವೂ ಇಪ್ಪತ್ತು ಗಜಕ್ಕಿಂತಲೂ ಹೆಚ್ಚು ಅಗಲವೂ ಆದ ಕೇರಿಯೊಂದಿದೆ. ಇಲ್ಲಿಯ ಗೃಹಗಳ ಸಾಲಿನ ಎರಡೂ ಕಡೆಯೂ ಸಿಂಹ, ಹುಲಿ, ಚಿರತೆ ಮತ್ತು ಇತರ ಪ್ರಾಣಿಗಳನ್ನು ಚಿತ್ರಿಸಿದ್ದಾರೆ. ಮಧ್ಯಾಹ್ನವಾದ ಮೇಲೆ ವೇಶ್ಯಾಂಗನೆಯರು ಆ ಚಿತ್ರಗಳ ಮೇಲೆ ಕುಳಿತುಕೊಳ್ಳುತ್ತಿದ್ದರು. ಅಲ್ಲಿ ವಿಟರನ್ನು ಕಾಣುತ್ತಿದ್ದರು."[೧೩] ಎಂದು ಹೇಳಿ ಮುಂದೆ ಅವರ ಬೆಡಗು ಬಿನ್ನಾಣಗಳನ್ನು ವರ್ಣಿಸಿದ್ದಾನೆ.

ಅರಮನೆ : ವಿಜಯನಗರದ ಅರಮನೆಯನ್ನು ಹೊರಗಿನಿಂದ ನೋಡಿರುವುದಾಗಿ ಮೇಲೆ ಹೇಳಿರುವ ಎಲ್ಲಾ ಪ್ರವಾಸಿಗರು ಹೇಳಿಕೊಂಡಿದ್ದಾರೆ. ಆದರೆ ಅರಮನೆಯ ಒಳಾಂಗಣದ ಚಿತ್ರಣವನ್ನು ಎಲ್ಲರೂ ನೀಡಿಲ್ಲ. ಪ್ರಾಯಃ ಪ್ರವಾಸಿಗರಿಗೆ ಅರಮನೆಯ ಪ್ರವೇಶವಿದ್ದಂತೆ ಕಂಡುಬರುವುದಿಲ್ಲ. ಆದರೆ ರಾಜನ ಓಲಗ ಶಾಲೆಯಲ್ಲಿನ ಅನುಭವಗಳನ್ನು ಎಲ್ಲರೂ ದಾಖಲಿಸಿದ್ದಾರೆ. ಅಬ್ದುಲ್

ರಜಾಕ್ ತಾನು ಅರಮನೆಯನ್ನು ಸಂದರ್ಶಿಸಬೇಕಾಗಿ ರಾಜನಲ್ಲಿ ವಿನಂತಿ ಮಾಡಿಕೊಂಡು ಒಪ್ಪಿಗೆ ಪಡೆದು ನಿಯಮಾನುಸಾರ ಪರೀಕ್ಷೆಗೆ ಒಳಪಟ್ಟು ಅರಮನೆಯ ಒಳಗೆ ಪ್ರವೇಶಿಸಿ ಅಲ್ಲಿ ಕಂಡ ಸಂಗತಿಗಳನ್ನು ಪಟ್ಟಿಮಾಡಿದ್ದಾನೆ. "ಅರಮನೆಯ ಮಹಾದ್ವಾರದ ಎಡಗಡೆ ದಿವಾನಖಾನೆ, ದಫರ್ಖಾನೆ, ಟಂಕಶಾಲೆ, ದಿವಾನಖಾನೆಗೆ ಎದುರಾಗಿ ಗಜಶಾಲೆಯು ಇದ್ದುದಾಗಿಯೂ ದರಬ್‌ಖಾನೆಗೆ ಎದುರಾಗಿ ರಾಜ್ಯಪಾಲನ ಮನೆ ಇರುವುದಾಗಿ ಹೇಳಿದ್ದಾನೆ."[೧೪] ಬಾರ್ಬೊಸನ ಅರಮನೆ ಕುರಿತ ಹೇಳಿಕೆ ಈ ರೀತಿ ಇದೆ: "ಅರಮನೆಯ ಒಳಗೆ ಊಳಿಗಕ್ಕೆ ಬೇಕಾದ ಹೆಂಗಸರಿಗೆ ವಾಸದ ಮನೆಗಳನ್ನು ಕಟ್ಟಲಾಗಿದೆ."[೧೫] ನೂನಿಜ್ ಹೇಳುವಂತೆ "ರಾಜನ ಅರಮನೆಯು ದೊಡ್ಡದಾಗಿದ್ದು ಅದರಲ್ಲಿ ವಿಶಾಲವಾದ ಕೋಣೆಗಳಿವೆ. ರಾಜನ ಪ್ರತಿಯೊಬ್ಬ ಹೆಂಡತಿಗೂ ಬೇರೆ ಬೇರೆ ಕೋಣೆಗಳಿವೆ."[೧೬] ಪಾಯಾಸ್ ಬೇರೆಲ್ಲಾ ಪ್ರವಾಸಿಗರಿಗಿಂತ ಅರಮನೆಯನ್ನು ವಿಶೇಷವಾಗಿ ವರ್ಣಿಸಿದ್ದಾನೆ. "ಅರಮನೆಯ ಮಹಾದ್ವಾರದ ನಂತರ ವಿಶಾಲವಾದ ಬಯಲು, ಇದರನಂತರ ಮತ್ತೊಂದು ದ್ವಾರ ಅನಂತರ ಬಯಲು. ಅಲ್ಲಿ ತಗ್ಗಾದ ವಸಾರೆಗಳು. ಈ ಬಯಲಿನ ಉತ್ತರ ಭಾಗದ ಎಡಗಡೆಗೆ ಒಂದು ಅಂತಸ್ತಿನ ದೊಡ್ಡ ಭವನ ಇದರ ಕಂಬಗಳು ಆನೆ ಮುಂತಾದ ಆಕಾರದಲ್ಲಿದೆ. ಬಯಲಿನ ಪೂರ್ವಕ್ಕೆ ಹೆಬ್ಬಾಗಿಲಿಗೆದುರಾಗಿ ಜಯಮಹಲಿನಂತಹ ಭವನಗಳಿದ್ದವು. ಅರಮನೆಯ ಒಳಗಿನ ಬೀದಿಗಳನ್ನು ಕುರಿತಂತೆ ರಾಜನ ವಾಸದ ಜೊತೆಗೆ ರಾಜನ ಹೆಂಡತಿಯರಿಗೂ ಅವನ ಹನ್ನೆರಡು ಸಾವಿರ ಅವ್ವೆಯರಿಗೂ ವಾಸದ ಏರ್ಪಾಡು ಮಾಡಲಾಗಿದೆ. ಒಳಗಡೆ ಮನೆಗಳು ಸಾಲುಸಾಲಾಗಿದೆ. ಜಯಮಹಲಿನಲ್ಲಿ ಒಂದು ಸಣ್ಣ ದೇವಸ್ಥಾನವಿದೆ. ಅಲ್ಲಿ ಪ್ರತಿದಿನ ಪೂಜಾ ಕೈಂಕರ್ಯ ನೆರವೇರಿಸಲಾಗುತ್ತದೆ. ಜೊತೆಗೆ ಇಲ್ಲಿ ಮೂವತ್ತನಾಲ್ಕು ಬೀದಿಗಳಿವೆ"[೧೭] ಎಂದಿದ್ದಾನೆ. ರಾಜನ ಅಥವಾ ರಾಣಿಯ ಅಂತಃಪುರದ ಬಗ್ಗೆ ಯಾರು ಏನನ್ನು ಹೇಳಿಲ್ಲ. ಬಹುಶಃ ರಾಜ ಹಾಗೂ ಆತನ ಬಂಧುಗಳ ಹೊರತಾಗಿ ಅನ್ಯರಿಗೆ ಪ್ರವೇಶ ನಿಷಿದ್ಧವಾಗಿರಬೇಕು.

ಅರಮನೆಯಲ್ಲಿ ಓಲಗಶಾಲೆ ಮತ್ತು ನೃತ್ಯಶಾಲೆಗಳು ಮುಖ್ಯವಾಗಿರುತ್ತಿದ್ದವು. ನೃತ್ಯಶಾಲೆಗಳ ಬಗೆಗೆ ಪಾಯಾಸ್ ಹೀಗೆ ಹೇಳಿದ್ದಾನೆ. "ಈ ಶಾಲೆ ಬಹು ಉದ್ದವಾಗಿವೆ. ಆದರೆ ಅಗಲ ಕಡಿಮೆ. ಕಲ್ಲಿನಲ್ಲಿ ಕಡೆದ ಕಂಬಗಳು ಈ ಕಂಬಗಳ ಪಾದಗಳನ್ನು ಆನೆ ಮುಂತಾದ ಪ್ರಾಣಿಗಳ ಆಕಾರಕ್ಕೆ ಕೆತ್ತಿ, ಅನೇಕ ವಿಗ್ರಹಗಳನ್ನು ಆ ಕಂಬಗಳ ಮೇಲೆ ಕೆತ್ತಿರುವುದಾಗಿ"[೧೮] ಹೇಳಿಕೊಂಡಿದ್ದಾನೆ. ಬಾರ್ಬೊಸ ಅರಮನೆಯ ಒಳಗೆ ಪ್ರಮದ ವನವನ್ನು ಗುರುತಿಸಿ, "ಅಲ್ಲಿ ಕೊಳಗಳಿದ್ದು ರಾಜ ಅಥವಾ ರಾಣಿವಾಸದವರು ಜಲಕ್ರೀಡೆಯಾಡುತ್ತಿದ್ದುದಾಗಿ"[೧೯] ಹೇಳಿದ್ದಾನೆ.

ದೇವಸ್ಥಾನಗಳು : ಇಂದಿಗೂ ವಿಜಯನಗರದ ಕೇಂದ್ರಬಿಂದು ವಿರೂಪಾಕ್ಷ ಮತ್ತು ವಿಜಯ ವಿಠಲ ದೇವಸ್ಥಾನಗಳು. ಕೃಷ್ಣದೇವರಾಯನ ಕಾಲಕ್ಕಿಂತ ಪೂರ್ವದಲ್ಲಿ ಭೇಟಿಯಿತ್ತ ಪ್ರವಾಸಿಗರು ಮುಖ್ಯವಾಗಿ ವಿರೂಪಾಕ್ಷ ದೇವಾಲಯವೊಂದನ್ನೇ ವಿಶೇಷವಾಗಿ ವರ್ಣಿಸಿದ್ದಾರೆ. ವಿಜಯ ವಿಠಲ ದೇವಾಲಯವು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಿದ್ದರಿಂದಾಗಿ ಈ ದೇವಾಲಯದ ಹೆಚ್ಚು ವರ್ಣನೆ ಕಾಣಸಿಗುವುದಿಲ್ಲ. ವಿಜಯನಗರದ ಬಹುತೇಕ ಜನ ವಿಗ್ರಹಾರಾಧಕರು(ಹಿಂದೂಗಳು), ಆದ್ದರಿಂದ ದೇವಾಲಯಗಳು ಈ ನಗರದ ಜನಜೀವನದ ಪ್ರಮುಖ ಅಂಶವೇ ಆಗಿತ್ತು. ವಿರೂಪಾಕ್ಷ ದೇವಾಲಯವನ್ನು ಪಾಯಾಸ್ ಬಹು ವಿಶೇಷವಾಗಿ ವರ್ಣಿಸಿದ್ದಾನೆ. "ದೇವಸ್ಥಾನದ ಹೆಬ್ಬಾಗಿಲಿನ ಮೇಲೆ ನಾನಾ ಚಿತ್ರಗಳನ್ನು ಕಡೆದ ಗೋಪುರವಿದೆ. ಇದು ಮೇಲೆ ಹೋದಂತೆಲ್ಲ ಚಿಕ್ಕದಾಗುತ್ತವೆ. ಮಹಾದ್ವಾರವನ್ನು ಪ್ರವೇಶಿಸಿದರೆ ನಾಲ್ಕು ಸ್ತಂಭಗಳು ಕಾಣಿಸುತ್ತವೆ. ದೇವಾಲಯದ ಮುಂದೆ ಇರುವ ಸ್ತಂಭದ ಮುಂದೆ ಹೋದರೆ ಗರ್ಭಗುಡಿ. ಇಲ್ಲಿಯ ಹಣತೆಗಳು ಕಂಗೊಳಿಸುತ್ತದೆ. ಇದರ ಸಮೀಪ ಆಕಾರವಿಲ್ಲದ ಗುಂಡುಕಲ್ಲು."[೨೦] ಭಾರತೀಯ ಸಂಸ್ಕೃತಿಯ ಪರಿವೆ ಇಲ್ಲದ ಪಾಯಾಸ್ ವಿರೂಪಾಕ್ಷನ ವಿಗ್ರಹವನ್ನು ಗುಂಡುಕಲ್ಲು ಎಂದಿರುವುದು ಹಾಸ್ಯಾಸ್ಪದವಾಗಿದೆ. ವಿರೂಪಾಕ್ಷನ ದೇವಾಲಯದ ಹಿಂದೆ ಇರುವ ಪ್ರಾಕಾರದಲ್ಲಿ ಮಹಿಷಮರ್ಧಿನಿ, ಆಕೆಯ ಪವಿತ್ರ ಲಾಂಛನಗಳನ್ನು ಪಾಯಸ್ ಗುರುತಿಸಿ ಈ ದೇವಾಲಯದಲ್ಲಿದ್ದ ದೇವದಾಸಿಯರ ಬಗ್ಗೆ ಹೇಳಿದ್ದಾನೆ. "ಈ ದೇವಾಲಯದ ಮುಂಬದಿಯಲ್ಲಿ ಬಂದಂತಹ ಭಕ್ತಾಧಿಗಳು ತಂಗಲು ಯಾತ್ರಿ ನಿವಾಸಗಳನ್ನು ಕಟ್ಟಿದ್ದರು. ರಾಜನ ಭೇಟಿಯ ಸಂದರ್ಭದಲ್ಲಿ ಅನುಕೂಲವಾಗಲೆಂದು ಅರಮನೆಯೊಂದನ್ನು ಕಟ್ಟಿದ್ದಾರೆಂದು"[೨೧] ಪಾಯಾಸ್ ಹೇಳಿದ್ದಾನೆ. ಈ ದೇವಾಲಯದಲ್ಲಿ ಬೆಳಕಿಗಾಗಿ ಸಾವಿರಾರು ಹಣತೆಗಳು ಉರಿಯುತ್ತಿದ್ದವು. ವರ್ಷಕ್ಕೊಮ್ಮೆ ಈ ದೇವರ ಉತ್ಸವವು ಊರಿನ ರಾಜ ಬೀದಿಯಲ್ಲಿ ಮೆರವಣಿಗೆಯಾಗುತ್ತಿತ್ತು"[೨೨] ಎಂದಿದ್ದಾನೆ.

ಇರುಳಿನಲ್ಲಿ ವಿಜಯನಗರ : ಹಗಲಿನಲ್ಲಿ ಕಂಡ ವಿಜಯನಗರವನ್ನೇ ಅಲ್ಲದೆ, ಪ್ರವಾಸಿಗರು ಇರುಳಲ್ಲಿ ಅದನ್ನು ಕಂಡು ಅದರ ವಿವರಣೆಯನ್ನು ದಾಖಲಿಸಿದ್ದಾರೆ. ಪ್ರವಾಸಿಗರಿಗೆ ರಾತ್ರಿ ವೇಳೆಯ ವಿಜಯನಗರದ ನೋಟ ಬಹು ಆನಂದಮಯವಾಗಿದ್ದಿತ್ತು. ಈ ಕುರಿತು ನೂನಿಜ್ ಹೊರತಾಗಿ ಮತ್ತಾರು ಯಾವ ವಿಷಯವನ್ನು ಹೇಳಿಲ್ಲ. "ಶ್ರೀಮಂತ ಸರದಾರರು ರಾತ್ರಿ ವೇಳೆಯಲ್ಲಿ ಅವರವರ ಅಂತಸ್ತಿಗೆ ತಕ್ಕಂತೆ ನಾಲ್ಕರಿಂದ ಹನ್ನೆರಡು ಪಂಜುಗಳನ್ನು ಉಪಯೋಗಿಸುತ್ತಾರೆ.

ಈ ದೇಶದಲ್ಲಿ ಬೇಕಾದಷ್ಟು ಮೇಣವಿದೆ ಆದರೆ ಅದನ್ನು ಉಪಯೋಗಿಸುವ ವಿಧಾನ ಮಾತ್ರ ಗೊತ್ತಿಲ್ಲ"[೨೩] ಎಂದಿದ್ದಾನೆ.

ಕೆರೆ-ಕಟ್ಟೆಗಳು : ಮಾನವನ ಮೂಲಭೂತ ಅವಶ್ಯಕತೆಯಲ್ಲಿ ನೀರೂ ಒಂದು. ವಿಜಯನಗರವೂ ಬಯಲು ಸೀಮೆಯಾಗಿದ್ದರಿಂದ ನೀರಿನ ಅಭಾವ ಸಾಮಾನ್ಯವೇ ಆಗಿತ್ತು. ಜನಸಾಮಾನ್ಯರಿಗೆ ನೀರಿನ ತೊಂದರೆ ಉಂಟಾಗಬಾರದೆಂಬ ವಿಜಯನಗರದ ಅರಸರ ಸಾಮಾಜಿಕ ಕಾಳಜಿ ಹಲವು ಕೆರೆ-ಕಟ್ಟೆಗಳ ನಿರ್ಮಾಣಕ್ಕೆ ಕಾರಣವಾಯಿತು. ಪ್ರಕೃತಿ ನಿರ್ಮಿತ ಕೆರೆಗಳನ್ನು ಹೊರತುಪಡಿಸಿ ಇಲ್ಲಿಯ ಎಲ್ಲಾ ಕೆರೆಗಳಿಗೂ ತುಂಗಭದ್ರನದಿಯೆ ನೀರನ್ನು ಪೂರೈಸುತ್ತಿತ್ತು. ಡೊಮಿಂಗೊ ಪಾಯಾಸ್ ಈ ವಿಚಾರವಾಗಿ ಹೀಗೆ ಹೇಳಿದ್ದಾನೆ : "ರಾಜನು ಎರಡು ಗುಡ್ಡಗಳನ್ನು ಸೇರಿಸಿ ಕೆರೆಯನ್ನು ಕಟ್ಟಿಸಿದ್ದಾನೆ. ಈ ಕೆರೆಗಳಿಂದ ಕೊಳಾಯಿಗಳ ಮೂಲಕ ಹೊಲಗದ್ದೆ ತೋಟಕ್ಕೆ ನೀರನ್ನು ಹರಿಸುತ್ತಿದ್ದರು"[೨೪] ಎಂದಿದ್ದಾನೆ. ಈ ಕಾಲದ ಕೆರೆ-ಕಾಲುವೆಗಳು ಇಂದಿಗೂ ಸುಸ್ಥಿತಿಯಲ್ಲಿದ್ದು ಅಲ್ಲಿನ ಜನರಿಗೆ ನೀರನ್ನು ಸರಬರಾಜು ಮಾಡುತ್ತಿವೆ. ಇದೇ ಸಂಗತಿಯನ್ನು ಕನಕದಾಸರು ತಮ್ಮ ***ಮೋಹನ ತರಂಗಿಣಿ*** ಕಾವ್ಯದಲ್ಲಿ ವಿಸ್ತಾರವಾಗಿ ವರ್ಣಿಸಿದ್ದಾರೆ.

ಸಾಂಸ್ಕೃತಿಕ ನೋಟ : ಸನಾತನ ಸಂಸ್ಕೃತಿಯನ್ನು ಹೊಂದಿರುವ ಭಾರತ ಹಲವು ಸಾಂಸ್ಕೃತಿಕ ಭಿನ್ನತೆಯನ್ನು ಒಳಗೊಂಡಿದೆ. ಇಲ್ಲಿಯ ಹಬ್ಬ-ಹರಿದಿನಗಳು ಪ್ರವಾಸಿಗರ ಕಣ್ಮನವನ್ನು ಸೆಳೆದಿವೆ. ವಿಜಯನಗರದ ಜನತೆ ವಿಶೇಷವಾಗಿ ಆಚರಿಸುತ್ತಿದ್ದ ಯುಗಾದಿ, ದೀಪಾವಳಿ, ಹೋಕಳಿ ಮುಂತಾದವನ್ನು ಹೆಸರಿಸಿದ್ದಾರೆ. ಸೀಜರ್ ಫ್ರೆಡರಿಕ್‌ನನ್ನು ಹೊರತುಪಡಿಸಿ ಇಲ್ಲಿಗೆ ಬಂದ ಎಲ್ಲಾ ಪ್ರವಾಸಿಗರು ಮಹಾನವಮಿ ಹಬ್ಬದ ಆಚರಣೆಯನ್ನು ದಾಖಲಿಸಿದ್ದಾರೆ. ಈ ವೇಳೆ ವಿಜಯನಗರದ ಆಕರ್ಷಣೀಯ ಕೇಂದ್ರವಸ್ತುಗಳಲ್ಲಿ ಒಂದಾದ ***ಮಹಾನವಮಿ ದಿಬ್ಬದ*** ಕುರಿತು ಹೇಳಿದ್ದಾರೆ. ಒಂಬತ್ತು ದಿನಗಳ ಕಾಲ ನಡೆಯುವ ದಸರಾ ಉತ್ಸವಗಳಲ್ಲಿ ಕ್ರೀಡೆ, ರಥೋತ್ಸವ, ವಿಶೇಷ ಪೂಜಾ ಕೈಂಕರ್ಯಗಳನ್ನು ದಾಖಲಿಸಿದ್ದಾರೆ. ಮೂವರೂ ಪ್ರವಾಸಿಗರ ವರ್ಣನೆಯು ಒಂದೇ ರೀತಿಯಾಗಿರುವುದರಿಂದ ಅಬ್ದುಲ್ ರಜಾಕ್ ಒಬ್ಬನ ಮಾತನ್ನಷ್ಟೇ ಇಲ್ಲಿ ಉಲ್ಲೇಖಿಸಲಾಗಿದೆ. "ಈ ಉತ್ಸವಕ್ಕೆ ವಿಸ್ತಾರವಾದ ಅವನ ರಾಜ್ಯದ ಎಲ್ಲಾ ಕಡೆಗಳಿಂದ ಮಾಂಡಲಿಕರು, ಸರದಾರರು, ಮುಖ್ಯಸ್ಥರು ರಾಜಧಾನಿಗೆ ಬಂದು ಸೇರುತ್ತಾರೆ. ಒಂಬತ್ತು ಭವ್ಯಾಲಂಕೃತ ಮಂಟಪಗಳು ಸಿದ್ಧವಾಗುತ್ತವೆ. ಒಂಬತ್ತನೆಯ ಮಂಟಪದಲ್ಲಿ ರಾಜನ ಸಿಂಹಾಸನವಿರುತ್ತದೆ. ಈ ಮಂಟಪದ ಮುಂದೆ ನೃತ್ಯ, ಗಾಯನ, ದೊಂಬರಾಟ, ಆಟಪಾಠಗಳು ಮತ್ತಿತರ ಕ್ರೀಡೆಗಳನ್ನು ಆಡುತ್ತಾರೆ"[೨೫] ಎಂದಿದ್ದಾನೆ.

೧೫೬೫ರಲ್ಲಿ ತಾಳಿಕೋಟೆ ಕದನದ ನಂತರದಲ್ಲಿಯೂ ವಿಜಯನಗರ ಜನವಸತಿಕೇಂದ್ರವಾಗಿತ್ತು ಎಂಬುದಕ್ಕೆ ಸೀಜರ್ ಫ್ರೆಡರಿಕ್‌ನ ಮಾತುಗಳು ಉದಾಹರಣೆಯಾಗಿವೆ. ಈತನಲ್ಲಿ ಪಾಳುಬಿದ್ದ ಹಂಪೆಯ ಚಿತ್ರಣ ದಾಖಲಾಗಿದೆ. ಕ್ರಮೇಣ ಪಂಪೆಯು ಕ್ರೂರ ಮೃಗಗಳ ಮತ್ತು ಕಳ್ಳಕಾಕರ ಆವಾಸ ಸ್ಥಾನವಾದ ಬಗ್ಗೆ ಹೇಳಿದ್ದಾನೆ. ತುಂಗಭದ್ರ ನದಿಯ ದಡದಲ್ಲಿ ಸ್ತ್ರೀಯರು ಸತಿ ಹೋಗುತ್ತಿದ್ದ ಸಂಗತಿಯನ್ನು ಹೇಳಿದ್ದಾನೆ. ಉಳಿದ ಯಾವ ಭೌಗೋಳಿಕ ಚಿತ್ರಣದ ಅಂಶಗಳು ಈತನಲ್ಲಿ ಲಭ್ಯವಿಲ್ಲ.

ಪ್ರವಾಸಿಗರು ಕಂಡ ವಿಜಯನಗರವು ನಗರವೊಂದರ ಬಾಹ್ಯ ಅಂಶಗಳ ಶ್ರೀಮಂತಿಕೆಯನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಈ ಹಿನ್ನಲೆಯಲ್ಲಿ ಪ್ರಾಚೀನ ಕರ್ನಾಟಕದ ವೈಭವೋಪೇತ ವಿಜಯನಗರದ ರಚನೆ ಮತ್ತು ವಾಸ್ತುಶಿಲ್ಪದ ಮಹತ್ವವನ್ನು ಪ್ರವಾಸಿಗರು ಕಂಡು ಮನತುಂಬಿ ವರ್ಣಿಸಿರುವುದು ಅವರ ದಾಖಲೆಗಳಿಂದ ವಿದಿತವಾಗುತ್ತದೆ.

ಅಡಿಟಿಪ್ಪಣಿಗಳು

೧. ನಾಗೇಗೌಡ ಹೆಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ ೦೨, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೬, ಪುಟ. ೧೪೧.
೨. ಅದೇ.
೩. ಅದೇ.
೪. ಅದೇ ಪು. ೩೩೨.
೫. ಅದೇ.
೬. ಅದೇ ಪು. ೨೬೮.
೭. ಅದೇ ಪು. ೩೩೪.
೮. ಅದೇ ಪು. ೨೭೦.
೯. ಅದೇ ಪು. ೩೩೪.
೧೦. ಅದೇ ಪು. ೩೪೦.
೧೧. ಅದೇ ಪು. ೩೪೨.
೧೨. ಅದೇ ಪು. ೧೪೨.
೧೩. ಅದೇ ಪು. ೧೪೬.
೧೪. ಅದೇ.
೧೫. ಅದೇ ಪು. ೨೭೦.
೧೬. ಅದೇ ಪು. ೩೮೫.
೧೭. ಅದೇ ಪು. ೩೫೪.

೧೮. ಅದೇ.

೧೯. ಅದೇ ಪು. ೨೭೦.

೨೦. ಅದೇ ಪು. ೩೫೩.

೨೧. ಅದೇ ಪು. ೩೪೪.

೨೨. ಅದೇ.

೨೩. ಅದೇ ಪು. ೩೮೮.

೨೪. ಅದೇ ಪು. ೩೩೦.

೨೫. ಅದೇ ಪು. ೧೫೨.

ಆಕರ ಗ್ರಂಥ

೧. ನಾಗೇಗೌಡ ಹೆಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ ೦೨, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೬.

ಪರಾಮರ್ಶನ ಗ್ರಂಥ

೧. ಬೆಟಗೇರಿ ಕೃಷ್ಣಶಾಸ್ತ್ರಿ, ಕರ್ಣಾಟಕ ಜನಜೀವನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೩

೨. ಶ್ರೀಕಂಠಯ್ಯ ಕೆ., ವಿಜಯನಗರ ಕಾಲದ ಕನ್ನಡಸಾಹಿತ್ಯದ ಜನಜೀವನ ಚಿತ್ರ, ಗೀತಾ ಬುಕ್‌ಹೌಸ್, ೧೯೮೩

೩. Basavaraju (Ed), National Society of Urban Development, Hospet. 1978.

□□□

೫. ಎಂ.ಕೆ. ಇಂದಿರಾ ಅವರ ಸಾಹಿತ್ಯ

– ಡಾ. ಪ್ರೀತಿ ಶುಭಚಂದ್ರ

ಕಾದಂಬರಿ ಪ್ರಕಾರವೇ ಜೈವಿಕವಾಗಿ ಹೆಣ್ಣು ಪ್ರಕಾರವೆಂಬ ನಿಲುವು ಇಂಗ್ಲಿಷ್ ವಿದ್ವಾಂಸರಲ್ಲಿತ್ತು. ವೈಚಾರಿಕ ನೆಲೆಯ ರೂಪಾತ್ಮಕ ಮಾನದಂಡಗಳ ಹಂಗಿಲ್ಲದ ನಮ್ಯತೆ ಈ ಪ್ರಕಾರಕ್ಕೆ ಇದ್ದುದರಿಂದಲೋ ಏನೋ ಇಂಗ್ಲಿಷ್ ವಿಮರ್ಶೆ ಸಹಜವಾಗಿ ಕಾದಂಬರಿ ಪ್ರಕಾರದಲ್ಲಿ ರಚನೆ ಮಾಡಿದ ಲೇಖಕಿಯರ ಯತ್ನವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಪ್ರತಿಕೂಲ ವಿಮರ್ಶೆಯೂ ಬರದುದರಿಂದ, ಮೊದಲಿಗೆ ಗಂಡುನಾಮದಲ್ಲಿ ಕಾದಂಬರಿ ಬರೆಯುತ್ತಿದ್ದ ಲೇಖಕಿಯರೂ ಕ್ರಮೇಣ ಜನಪ್ರಿಯರಾಗತೊಡಗಿದರು. ವಸಾಹತೀಕರಣದ ಫಲಿತವಾಗಿ ಮೂಡಿಬಂದ ಕೈಗಾರೀಕೃತ ನಗರೀಕೃತ ಸಂದರ್ಭದ ಅವಶ್ಯಕತೆಯನ್ನು ಈಡೇರಿಸುವ ಸಾಧನವಾಗಿ ಯುರೋಪಿನಲ್ಲಿ ಕಾದಂಬರಿ ಪ್ರಕಾರ ಅಪ್ಯಾಯಮಾನವಾಯಿತು. ಶಿಕ್ಷಣದ ಅವಕಾಶ ಪಡೆದ ಓದುಬರಹ ಬಲ್ಲ ಮಧ್ಯಮವರ್ಗದ ಮಹಿಳಾ ಸಮುದಾಯ ಅನುಭವಿಸುವ ವಿರಾಮಕ್ಕೆ ಮನೋರಂಜನಾತ್ಮಕ ಆಹಾರವಾಗಿಯೂ ಕಾದಂಬರಿ ಪ್ರಕಾರ ಬಳಕೆಯಾಯಿತು. ಅದಷ್ಟೇ ಅಲ್ಲ; ಮಹಿಳಾ ಬದುಕಿನ ಅನುಭವಗಳ ಅಭಿವ್ಯಕ್ತಿಗೆ, ಅದರ ಯಶಸ್ವೀ ಸಂವಹನಕ್ಕೆ ಕಾದಂಬರಿ ಪ್ರಕಾರ ಸಶಕ್ತ ಮಾಧ್ಯಮವೂ ಆಯ್ತು.

ಎಲಾನ್ ಶೋಅಲ್ಟರ್, ಮಹಿಳಾ ಬರವಣಿಗೆಯ ಮೂರು ಘಟ್ಟಗಳನ್ನು ಹೀಗೆ ಗುರುತಿಸುತ್ತಾಳೆ :

೧) ಸ್ತ್ರೀಯಾತ್ಮಕ ಘಟ್ಟ – (Feminine Stage) ಪುರುಷ ಪ್ರಧಾನ ಮೌಲ್ಯಗಳುಳ್ಳ ಪುರುಷ ಬರವಣಿಗೆಯನ್ನು ಅನುಕರಿಸುವ, ಆ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡಂತಹ ಮಹಿಳಾ ಬರವಣಿಗೆ.

೨) ಸ್ತ್ರೀವಾದಿ ಘಟ್ಟ (Feminist Stage) – ಪ್ರಜ್ಞಾಪೂರ್ವಕವಾಗಿ, ಪುರುಷ ಪ್ರಧಾನ ಮೌಲ್ಯಗಳ ವಿರುದ್ಧ ಸಮರ ಸಾರುವ, ಮಹಿಳಾ ಶೋಷಣೆಯ ಸ್ವರೂಪವನ್ನು ಶೋಧಿಸಿ ಅನಾವರಣಗೊಳಿಸುವ, ಶೋಷಣಾಮುಕ್ತ

ಬದುಕಿನೆಡೆ ಮಹಿಳಾ ಸಮುದಾಯವನ್ನು ಮುನ್ನಡೆಸುವ ಆಂದೋಲನಕ್ಕೆ ಪೂರಕವಾದ, ರಾಜಕೀಯಾತ್ಮಕ ಆಶಯವುಳ್ಳ ಬರವಣಿಗೆ.

೩) ಸ್ತ್ರೀತ್ವದಘಟ್ಟ (Female Stage) ಪುರುಷ ಕೇಂದ್ರಿತ, ಎದುರಾಳಿ ಕುರಿತ ಪ್ರಜ್ಞೆಯನ್ನು ದಾಟಿ, ಮಹಿಳೆಯ ಸ್ವತ್ವದ ಶೋಧಕ್ಕೆ ಮಹಿಳೆಯಾಗಿ ಬರಹಗಾರ್ತಿಯರು ಬರಹದಲ್ಲಿ ತೊಡಗುವ ಘಟ್ಟ.

ಒಟ್ಟು ಕನ್ನಡ ಮಹಿಳಾ ಬರವಣಿಗೆಯನ್ನು ನಾವು ಈ ಹೊತ್ತು ಅವಲೋಕಿಸಿದರೆ, ಈ ಮೂರೂ ಘಟ್ಟಗಳನ್ನು ಏಕಕಾಲದಲ್ಲಿ ಹೊಂದಿರುವಂಥ ಸಂದರ್ಭದಲ್ಲಿ ಕನ್ನಡ ಮಹಿಳಾ ಸಾಹಿತ್ಯವಿದೆ ಎನ್ನಿಸುತ್ತದೆ. ಯಾಕೆ ಇದರ ಪ್ರಸ್ತಾಪ ಮಾಡಿದೆ ಎಂದರೆ, ಎಂ.ಕೆ. ಇಂದಿರಾ ಅವರ ಸಾಹಿತ್ಯವನ್ನು ಯಾವ ವರ್ಗಕ್ಕೆ ಸೇರಿಸಬೇಕು? ಎಂಬ ಸಂದಿಗ್ಧ ಹಾಗೂ ಸವಾಲು ವಿಮರ್ಶೆಯ ಸಂದರ್ಭದಲ್ಲಿ ಎದುರಾಗಿದೆ. ಡಾ. ಬಿ.ಎನ್. ಸುಮಿತ್ರಾಬಾಯಿ, ಗಿರಡ್ಡಿಗೋವಿಂದರಾಜ ಮೊದಲಾದ ವಿಮರ್ಶಕರು ಎಂ.ಕೆ. ಇಂದಿರಾರವರ ಸಾಹಿತ್ಯವನ್ನು ಸ್ತ್ರೀಯಾತ್ಮಕ ಮಾದರಿಯದಾಗಿ ಪರಿಭಾವಿಸುತ್ತಾರೆ. ಸಮೃದ್ಧ ಜೀವನಾನುಭವದ ಹಿನ್ನೆಲೆಯಲ್ಲಿ ಪರಂಪರಾಗತ, ಪುರುಷಪ್ರಧಾನ ಮೌಲ್ಯಗಳನ್ನೇ ಜೀವನದೃಷ್ಟಿಯಾಗಿ ಅಭಿವ್ಯಕ್ತಿಸುವ ಕಥನ ಇಂದಿರಾ ಅವರದ್ದು ಎಂಬ ನಿಲುವು ಇವರದು. ರೂಪಾತ್ಮಕ ಕೌಶಲ್ಯದ ಅಪೇಕ್ಷೆಯನ್ನು ಇಂದಿರಾ ಅವರ ಕಥನ ಹೊಂದಿಲ್ಲದಿರುವುದು ಒಂದು ಪರಿಮಿತಿಯಾದರೆ, ಈ ಹೊತ್ತಿನ ಸ್ತ್ರೀವಾದಿ ನೆಲೆಯಲ್ಲಿ ಮಹಿಳಾ ಬದುಕಿನ ಬಗೆಗಿನ ಪ್ರಶ್ನೆಗಳನ್ನು ಇಂದಿರಾ ಬರಹ ಎತ್ತದಿರುವುದೂ ಪರಿಹಾರ ಸೂಚನೆ ಇಲ್ಲದಿರುವುದೂ ಪರಿಮಿತಿ ಎಂಬ ನಿಲುವು ಕಂಡುಬರುತ್ತದೆ. ಹಾಗಾಗಿ ಇಂದಿರಾ ಕಥನಸಾಹಿತ್ಯದ ಓದು-ವಿಮರ್ಶೆಯನ್ನು ಯಾವ ನೆಲೆಯಲ್ಲಿ ಕೈಗೊಳ್ಳಬಹುದೆಂಬುದು ನಿಜಕ್ಕೂ ಸವಾಲಿನ ಸಂಗತಿಯಾಗಿದೆ.

ಎಂ.ಕೆ. ಇಂದಿರಾರವರ ಸಮಗ್ರ ಸಾಹಿತ್ಯದಲ್ಲಿ, ನಗರಕೇಂದ್ರಿತ ಬದುಕಿನ ಅಭಿವ್ಯಕ್ತಿಗಿಂತ ವಸಾಹತು ಪೂರ್ವ, ವಸಾಹತು ಗ್ರಾಮ್ಯ ಬದುಕು, ಅದರಲ್ಲೂ ಮಲೆನಾಡಿನ ಬದುಕಿನ ಅಭಿವ್ಯಕ್ತಿ ಮುಖ್ಯವೆನಿಸುತ್ತದೆ. ಇಂದಿರಾರವರು ತಮ್ಮ ಮೊದಲ ಕಾದಂಬರಿ **ತುಂಗಭದ್ರ**ವನ್ನು ೧೯೬೦ ರಲ್ಲಿ ಬರೆದಿದ್ದು, ೧೯೭೦ ರಲ್ಲಿ ಮೊದಲ ಆವೃತ್ತಿ ಪ್ರಕಟವಾಯಿತು. ಅಷ್ಟರಲ್ಲಾಗಲೇ ಅವರು ನಗರ ಬದುಕಿನ ನೆಲೆಯಲ್ಲಿದ್ದವರಾಗಿದ್ದರು. ಆದರೆ ಅವರ ವ್ಯಕ್ತಿತ್ವದ ಬೇರುಗಳು ದಟ್ಟ ಮಲೆನಾಡ ಸಾಮಾಜಿಕ ಹಾಗೂ ಪ್ರಾಕೃತಿಕ ಪರಿಸರದಿಂದ ಪೋಷಿತವಾಗಿದ್ದವು. ಅದರೊಟ್ಟಿಗೆ ಸಮಾಜ ಸುಧಾರಣೆಯ ಧ್ಯೇಯೋದ್ದೇಶವುಳ್ಳ ಸಾಹಿತ್ಯಾದಿ ಕಲಾ ಚಟುವಟಿಕೆಗಳಲ್ಲಿ

ತೊಡಗಿದ್ದ ಬಂಧುಗಳ ಮೂಲಕ ಒದಗಿ ಬಂದ ಕಲಾಸಂವೇದನೆ ಅವರ ಸೃಜನಶೀಲತೆಗೆ ಬಹುದೊಡ್ಡ ಪ್ರೇರಣೆ ನೀಡಿತು. ಕನ್ನಡ ಕಾದಂಬರಿ ಪರಂಪರೆಯ ಮೊದಲ ಘಟ್ಟದ ಅರೆ ಐತಿಹಾಸಿಕ, ಅದ್ಭುತ ರಮ್ಯ ಆದರ್ಶ–ವಾಸ್ತವಗಳ ಕರ್ಷಣವುಳ್ಳ ಕಥಾನಕಗಳ ಬದಲಿಗೆ ಇಂದಿರಾ ಅವರು ಕುವೆಂಪು ಕಥನದ ಹಾದಿಯಲ್ಲಿ ನಡೆದರೆನ್ನಬಹುದು. ಪಾಶ್ಚಾತ್ಯ ರೊಮ್ಯಾಂಟಿಕ್ ಪರಂಪರೆಯ ವರ್ಡ್ಸ್‌ವರ್ತ್ ಪ್ರಣೀತ ಕಾವ್ಯಮೀಮಾಂಸೆಯು ಗ್ರಾಮ್ಯ ಜನರ ಬದುಕಿನಿಂದಾಯ್ದ ಘಟನೆಗಳು, ಗ್ರಾಮ್ಯ ಭಾಷೆಯನ್ನು ಪರಿಷ್ಕರಿಸಿ ಅದಕ್ಕೆ ಕಲ್ಪನೆಯ ಬಣ್ಣ ಬೆರಸಿ ಅಭಿವ್ಯಕ್ತಿಸಿದ ಕಾವ್ಯವೇ ನೈಜಕಾವ್ಯವೆಂದಿತು. ಸಾವು ಬದುಕಿಗೆ ಹೇಗೆ ಇದ್ದಕ್ಕಿದ್ದಂತೆ ಅರ್ಥವನ್ನೂ ಪ್ರಖರತೆಯನ್ನೂ ನೀಡುತ್ತದೆಯೋ ಹಾಗೇ ಗ್ರಾಮ್ಯ ಪ್ರಕೃತಿಯಿಂದ ಕಲ್ಪಿತವಾದ ದೂರತ್ವವುಳ್ಳ ನಗರದ ನೆಲೆಯಲ್ಲಿ ಹೊಚ್ಚ ಹೊಸ ಬಗೆಯಲ್ಲಿ ಪ್ರಕೃತಿಯ ರಸಾಸ್ವಾದನದ ಶಿಕ್ಷಣ, ಅವಕಾಶ ಕುವೆಂಪುರವರಿಗೆ ದೊರಕಿತು. ಪ್ರಕೃತಿಯನ್ನು ಬಿಟ್ಟು ನಗರಕ್ಕೆ ತಾನು ಬಂದುದು ಪರಶುರಾಮನ ಮಾತೃಹತ್ಯಾದೋಷಕ್ಕೆ ಸಮಾನವೆಂಬ ವಿಷಾದ ಅವರ ಕವನದಲ್ಲಿ ವ್ಯಕ್ತವಾಗಿದೆ. 'Go back to nature' ಎಂಬ ರೊಮ್ಯಾಂಟಿಕ್ ತುಡಿತವು ಪ್ರಕೃತಿ ಸೌಂದರ್ಯಾಸ್ವಾದನೆ ಮೂಲಕ ಭಾವಗೀತೆಯನ್ನೂ, ಮಾನವ ಪ್ರಕೃತಿ ಹಾಗೂ ನಿಸರ್ಗದೊಂದಿಗಿನ ಅವಿನಾಭಾವ ಕಲ್ಪನೆಯ ಮೂಲಕ ಕಾದಂಬರಿಗಳನ್ನೂ ರಚಿಸಲು ಕುವೆಂಪು ಅವರಿಗೆ ಪ್ರೇರಣೆ ನೀಡಿತು.

ಕುವೆಂಪು ಅವರಿಗೆ ದಕ್ಕಿದ ಈ ಪ್ರೇರಣೆಯ ಜಾಡನ್ನೇ ಹಿಡಿದು ಎಂ.ಕೆ. ಇಂದಿರಾ ಅವರ ಕಥನದ ಸ್ವರೂಪವನ್ನು ವಿವರಿಸಿಕೊಳ್ಳಬಹುದೆನ್ನಿಸುತ್ತದೆ. ಫಣಿಯಮ್ಮ, ಕೃಷ್ಣವೇಣಿ, ತಗ್ಗಿನಮನೆ ಸೀತೆ, ಗೌರಿ, ಕಮಲ, ಚೆನ್ನ, ಸರಸ, ನರಸು, ಪದ್ಮಾವತಿ, ಸಾವಿತ್ರಿ, ಶಂಕರಿ ಮುಂತಾದ ಮಹಿಳಾ ಪಾತ್ರಗಳು ಸನಾತನ ಪುರುಷಕೇಂದ್ರಿತ ಮೌಲ್ಯಾದರ್ಶಗಳ ಕೊಂಡಾಟಕ್ಕೆ ಕೆತ್ತಿದ್ದ ಸ್ತ್ರೀಪಾತ್ರ ಮಾದರಿಗಳೆಂಬ ವಿಮರ್ಶನ ಆಕ್ಷೇಪವಿದೆಯಷ್ಟೆ! ಆದರೆ ಈ ಕೊಂಡಾಟದ ಸರಣಿಯ ಮಧ್ಯದ ಬಿರುಕುಗಳೊಳಗಿನ ಮೌನವಾಗಿ, ಹೇಳದೇ ಉಳಿದಿರುವ ವಿರುದ್ಧಾತ್ಮಕ ಪ್ರತಿರೋಧದ ದನಿಗಳನ್ನು ಗ್ರಹಿಸಬಲ್ಲ ಸಾಧ್ಯತೆಯೂ ಓದಿಗೆ ಇದೆಯಲ್ಲವೆ? ಇಂಥ ಸಾಧ್ಯತೆಯ ಕುರಿತಾದ ಹೊಳಹನ್ನು ಎಂ.ಕೆ. ಇಂದಿರಾ ಅವರ 'ಕಲಾದರ್ಶಿ' ಕಾದಂಬರಿಯ ಓದು ಹೇಗೆ ನೀಡುತ್ತದೆಂಬುದು ಕುತೂಹಲಕಾರಿಯಾಗಿದೆ.

ಈ ಕಾದಂಬರಿ ಕಾಲ್ಪನಿಕ ಕೃತಿ ಎಂದು ಇಂದಿರಾ ಸ್ಪಷ್ಟವಾಗಿ ಹೇಳುತ್ತಾರೆ. ವಸ್ತು ಮತ್ತು ಪಾತ್ರಗಳಿಗೆ ಹೊಂದಿಕೆಯಾಗಲೆಂದು ಮಲೆನಾಡಿನ ಪರಿಸರವನ್ನು

ತಮ್ಮ ಈ ಕಾದಂಬರಿಯ ಕಲಾಕ್ಷೇತ್ರವಾಗಿ ಬಳಸಿಕೊಂಡಿರುವುದಾಗಿ ಅವರು ಹೇಳುತ್ತಾರೆ. 'ಹಿರೇತೋಟ'ಎಂಬ ಮಲೆನಾಡಿನ ಒಂದು ಸುಂದರ ತಾಣವನ್ನು, ಆ ತಂಪಿನ ಗ್ರಾಮದ ಮೋಹಕ್ಕಾಗಿ ತಾವು ಬಳಸಿಕೊಂಡಿರುವುದಾಗಿ ಅವರು ಸ್ಪಷ್ಟೀಕರಿಸುತ್ತಾರೆ. ಚಿತ್ರಕಲೆಯ ಕೇಂದ್ರಬಿಂದುವಾಗಿದ್ದ ಒಬ್ಬ ಯುವತಿಯ ಪ್ರಮಾಣಬದ್ಧ ಅಂಗರೇಖೆಗೆ ಬದಲಾಗಿ, ೧೪ರ ಬಾಲೆಯ ಅಂಗರೇಖೆಯು ಆಕಸ್ಮಿಕವಾಗಿ ಕಿಟ್ಟಿ ಅನ್ನುವ ಚಿತ್ರಕಲಾವಿದನಿಗೆ ಗೋಚರವಾಗುತ್ತದೆ. ಮಲೆನಾಡಿನ ನಿಸರ್ಗ ಚಿತ್ರವನ್ನು ಸಂಗ್ರಹಿಸುವ ಸಲುವಾಗಿ ಆತ ತನ್ನ ಚಿಕ್ಕಮ್ಮನೂರಿಗೆ ಬಂದಿರುತ್ತಾನೆ. ಆ ಮನೆಯ ಮೊಮ್ಮಗಳಾದ ಪಾಪಚ್ಚಿ, ಅನಾಥಳಾಗಿ ಆ ಮನೆಯ ಆಶ್ರಯ ಪಡೆಯುತ್ತಾಳೆ. ಯಾವ ಬಗೆಯ ನಯನಾಜೂಕಿಲ್ಲದ, ಕೆದರಿದ ತಲೆ, ಕೊಳಕು ಸೀರೆಯ ಪರದೇಶಿ ಹುಡುಗಿ ಆಕೆ. ಬಿಡುವಿಲ್ಲದ ಕೆಲಸ, ಬೈಗುಳ, ಹೊಡೆತ ತಿನ್ನುತ್ತಲೇ ಆಕೆ ಅದ್ಯಾವುದರ ಅರಿವೂ ಇಲ್ಲದಂತೆ ಕೆಲಸದಲ್ಲಿ ತೊಡಗುತ್ತ ದನಕರುಗಳ ಚಾಕರಿಯನ್ನು ಪ್ರೀತಿಯಿಂದ ಮಾಡುತ್ತ ನಿಸರ್ಗದೊಂದಿಗೆ ನಿಸರ್ಗದವಳಾಗಿ ನಿರಾತಂಕ ನಿಶ್ಚಿತ ಭಾವವುಳ್ಳ ಮುಗ್ಧ ಹೆಣ್ಣವಳು. ಕಿಟ್ಟಿಯ ಗಮನಕ್ಕೆ ಇವೆಲ್ಲ ಬರುತ್ತಿದ್ದಂತೆ ಆತನಿಗೆ ತನ್ನ ಕಲೆಗೆ ಸೂಕ್ತ ರೂಪದರ್ಶಿ ಇವಳೇ ಎನ್ನುವುದು ಖಚಿತವಾಗತೊಡಗುತ್ತದೆ. ಆಕೆಯ ಪ್ರಮಾಣಬದ್ಧ ಅಂಗರೇಖೆಯನ್ನು ವಿವಿಧ ಭಂಗಿಗಳಲ್ಲಿ ಆತ ಗುರುತುಮಾಡಿಕೊಳ್ಳುತ್ತಾನೆ. ಆ ಅಂಗರೇಖೆಯೊಳಗಿನ 'ಚೈತನ್ಯ'ವನ್ನು ಅವನ ಕಲಾಪ್ರಜ್ಞೆ ಕಾಣುತ್ತದೆ. ಆ 'ಚೈತನ್ಯ'ದ ಒಡೆಯ ತಾನಾಗಬೇಕೆಂಬ ತಾರುಣ್ಯದ ವಯೋಸಹಜ ವಾಂಛೆ ಅವನಲ್ಲಿ ಮೊಳೆಯುತ್ತದೆ. ಇಡೀ ಕಾದಂಬರಿ ಪಾಪಚ್ಚಿಯ ಅಧೀನಸ್ಥಿತಿಯ ದಾರುಣತೆಯನ್ನು ಕಿಟ್ಟಿಯ ಅನುಕಂಪದ ನೋಟದ ನೆಲೆಯಲ್ಲಿ ಚಿತ್ರಿಸುತ್ತದೆ. ಈ ಅನುಕಂಪ ಕಲಾವಿದ ಕಿಟ್ಟಿಯದು ಮಾತ್ರವಲ್ಲದೆ ಕತೆಗಾರ್ತಿ ಇಂದಿರಾರವರದೂ ಹೌದು! ಆದರೆ ನಿಸರ್ಗದೊಂದಿಗೆ ನಿಸರ್ಗದಂತಿದ್ದ ಪಾಪಚ್ಚಿಗೆ ಸ್ವತಃ ತನ್ನ ದಾರುಣತೆಯಾಗಲಿ, ತನ್ನ ಅಂಗಸೌಷ್ಠವದ ಆಕರ್ಷಕತೆಯಾಗಲಿ, ಕಿಟ್ಟಿಯ ಪ್ರಣಯಾಭಿಲಾಶೆಯಾಗಲಿ ಅರಿವಿನ ವಿಷಯವಾಗುವುದಿಲ್ಲ. ನಾಗರಿಕ ಮನಸ್ಸಿನ ಆವರಣಗಳಿಲ್ಲದ ಆಕೆಯ ಮುಗ್ಧ ಸ್ಥಿತಿಯ ಆರಾಧನೆಯೇ ಕಿಟ್ಟುವಿಗೆ ಸೌಂದರ್ಯಾಸ್ವಾದನೆಯಾಗುತ್ತದೆ. ಇತರರು ಪಾಪಚ್ಚಿಯನ್ನು ಪೆದ್ದಿ ಎಂದು ಹಂಗಿಸಿದಾಗಲೆಲ್ಲ ಆತ; ಆಕೆ ಪೆದ್ದಿಯಲ್ಲ, 'ಮುಗ್ಧೆ' ಎಂದು ಸಮಜಾಯಿಷಿ ಕೊಟ್ಟುಕೊಳ್ಳುತ್ತಿರುತ್ತಾನೆ. ಆಕೆಯೊಡನೆ ಏಕಾಂತದಲ್ಲಿ ಒಂದೂವರೆ ಘಂಟೆ ಕಾಲ ಹರಟಿದರೂ ಆತನ ಬಗ್ಗೆ ಅವಳಲ್ಲಿ ಯಾವ ಬಗೆಯ ಪ್ರತಿಸ್ಪಂದನವೂ ಕಂಡು ಬರಲಿಲ್ಲ. 'ಅವಳಿಗೆ ಆ ಕರುಗಳು ಹೇಗೋ, ನಾನೂ ಹಾಗೆ. ಒಂದು ರೀತಿಯಲ್ಲಿ ನೋಡಿದರೆ ಅವಳಿಗೆ ಆ ಕರುಗಳೇ ಹೆಚ್ಚು ಪ್ರಿಯ'

ಎಂದುಕೊಳ್ಳುತ್ತಾನೆ ಕಿಟ್ಟು. ಕೊನೆಗೆ ಅವಳನ್ನು ಮದುವೆಯಾಗುವಲ್ಲಿ ಕಿಟ್ಟು ಯಶಸ್ವಿಯಾಗ್ತಾನೆ. ಇದುವರೆಗಿನ ಅವಳ ಬಗೆಗೆ ತನ್ನಲ್ಲಿದ್ದ 'ಪ್ರೇಮ' ಭಾವದೊಂದಿಗೆ ಕಾಮವೂ ಸೇರಿ ಬದುಕು ಸಾರ್ಥಕವೆಂಬ ಅನಿಸಿಕೆ ಅವನದಾಗುತ್ತದೆ. ತನ್ನ ಕಲೆಯೂ ಪೂರ್ಣತ್ವವನ್ನು ಹೊಂದಿರುವುದಾಗಿ ಆತ ತೃಪ್ತಭಾವವುಳ್ಳವನಾಗುತ್ತಾನೆ. ಹೆಣ್ಣನ್ನು ನಿಸರ್ಗ ನಿಯಮಕ್ಕಧೀನವಾದ ಜ್ಞೇಯ ವಸ್ತುವಾಗಿ ಪರಿಭಾವಿಸುವ ಜ್ಞಾನಮೀಮಾಂಸೆಯನ್ನು **ಕಲಾದರ್ಶಿ** ಕಾದಂಬರಿಯ ಸ್ತ್ರೀವಾದಿ ಓದು ನಿರಚನಗೊಳಿಸಬಲ್ಲದು. ಪೂರ್ಣವಿಕಸನಗೊಳ್ಳದ ಅಂಗಾಂಗ ಅವಸ್ಥೆಯ ಆಧಾರದಿಂದ ಪರಿಪೂರ್ಣವಾಗಿ ವಿಕಾಸಗೊಂಡ ಅಂಗಾಂಗವುಳ್ಳ ತಾರುಣ್ಯ ಶೋಭೆಯನ್ನು ಕಲ್ಪನೆಯ ಮೂಲಕ ಕಲೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ಕೌಶಲ್ಯ ಕಲೆಯಲ್ಲಿ ಕಿಟ್ಟಿ ಸಫಲನೇನೋ ಆಗುತ್ತಾನೆ. ಆದರೆ, ಆ ತಾರುಣ್ಯಾವಸ್ಥೆಯಾಚೆನ ಮಹಿಳಾ ಬದುಕಿನ ದೈಹಿಕ ಹಾಗೂ ಮಾನಸಿಕ ವಿಕಸನದ ಸಾಧ್ಯತೆಗಳಿಗೆ ಇಂಥ ಗಂಡುಕಲಾಮೀಮಾಂಸೆ ಮುಚ್ಚಿದ ಬಾಗಿಲಾಗುತ್ತದೆ. ಸೂಕ್ತ ಸಂಗಾತಿ ದೊರಕಿಸಿಕೊಳ್ಳುವವರೆಗೆ ಮಾತ್ರ ಹೆಣ್ಣಿನ ವ್ಯಕ್ತಿತ್ವ ವರ್ಧನೆಗೆ 'ಎಲೆಕ್ಟ್ರಾಕಾಂಪ್ಲೆಕ್ಸ್' ಪ್ರೇರಕವೆಂಬ ಫ್ರಾಯ್ಡ್ ಪ್ರಣೀತ ವ್ಯಕ್ತಿವಿಕಸನ ಸಿದ್ಧಾಂತಗಳು ಇಂಥ ಕಲಾಮೀಮಾಂಸೆಗೆ ಪೂರಕವಾಗಿವೆ. ಇದ್, ಅಹಂ, ಅಧಿಅಹಂನ ಹಂತಗಳಲ್ಲಿ ವ್ಯಕ್ತಿತ್ವದ ಪರಿಪೂರ್ಣ ವಿಕಸನದ ಘಟ್ಟಕ್ಕೆ ಏರದೆ, ಸಂಗಾತಿ ಸಮುದ್ರದಲ್ಲಿ ಲೀನವಾಗುವ ನದಿಯಂತೆ ಮಹಿಳೆ ಕರಗಿ ಕಳೆದುಹೋಗುತ್ತಾಳೆ. ಗಂಡಿನ ಅಹಂ ವರ್ಧನೆಗೆ ಇಂಧನಳಾಗುತ್ತಾ ರಸಿಕತೆಗೆ ಪ್ರಚೋದಕಳಾಗುತ್ತಾ ಜ್ಞಾತೃಸ್ಥಾನೀಯ ಅಧಿಕಾರವನ್ನು ಆತನಿಗೆ ಕಲ್ಪಿಸುತ್ತಾ, ತಾನು ಮಾತ್ರ ಪಾಪಚ್ಚಿಯಂತೆ ಪೆದ್ದಿ, ಮುಗ್ಧೆ, ಸುಂದರಿಯಾಗಿ ಉಳಿದು ಬಿಡುತ್ತಾಳೆ. ವಿಚಾರ ಶಕ್ತಿಯ ಅಭಾವವುಳ್ಳ ನಿಸರ್ಗವಾಗಿ ಪರಿಭಾವನೆಗೊಳಗಾದ ಆಕೆ ಗಂಡಿನ ಒಡೆತನಕ್ಕೆ ಸಲ್ಲುವ ಆರಾಧನೀಯ ದೈವಿಕ ವಸ್ತುವೂ ಆಗುತ್ತಾಳೆ. ಆದರೆ ಇಂದಿರಾರವರ ಫಣಿಯಮ್ಮನಂತಹ ಗಟ್ಟಿ ಪಾತ್ರಗಳು ಇಂತಹ ಆರಾಧನೆಯ ಆವರಣದಾಚೆ ಸ್ವತಂತ್ರವಾಗಿ ಚಿಂತಿಸಿ ಆಯ್ಕೆಯ ಸ್ವಾತಂತ್ರವನ್ನು ಚಲಾಯಿಸಬಲ್ಲವಾಗುತ್ತವೆಂಬುದು ಗಮನಾರ್ಹ.

ಕಳೆದು ಹೋದ ಬದುಕನ್ನು ಕಥನದ ಮೂಲಕ ಮರುಸೃಷ್ಟಿಸಿಕೊಳ್ಳುವ ಪ್ರಕ್ರಿಯೆಯೇ ಒಂದು ಬಗೆಯಲ್ಲಿ ಅದರ ಜೀವಂತ ಕ್ಷಣಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವ ಕಲಾತುಡಿತವಾಗಿಬಿಡುತ್ತದೆ. ಇಂದಿರಾ ಅವರ ಕಾದಂಬರಿಗಳ ಮಲೆನಾಡ ಗ್ರಾಮ್ಯ ಬದುಕಿನ ಮಹಿಳೆಯರು ಹೊಂದಿರುವ ಸನಾತನ

ಮೌಲ್ಯಾದರ್ಶಗಳು ಒಂದು ರೀತಿಯಲ್ಲಿ ಕಲಾದರ್ಶಿಯಾಗಿ ಒದಗುವ ಪಾಪಚ್ಚಿಯ ಪೆದ್ದುತನ, ಮಂಕುತನವೇ ಸರಿ. ಕಿಟ್ಟಿಯಂತೆ, ಎಂ.ಕೆ. ಇಂದಿರಾ ಕೂಡ ಪಾತ್ರದ ಬಾಹ್ಯ ಅಂಗರೇಖೆಯೊಂದಿಗೆ ಆಂತರಿಕ ಚೈತನ್ಯವನ್ನು ಹಿಡಿದಿಡಲೆತ್ನಿಸಿದ್ದಾರೆನ್ನಬಹುದು. ಈ ಆಂತರಿಕ ಚೈತನ್ಯವನ್ನು ಕಥನದಲ್ಲಿ ಆವಿಷ್ಕರಿಸಿಕೊಳ್ಳುವ ಕ್ರಿಯೆ ಶುದ್ಧಾಂಗವಾಗಿ ರೊಮ್ಯಾಂಟಿಕ್ ಆಶಯಕ್ಕೆ ಅನುಗುಣವಾಗಿದೆ. ಸೂರ್ಯೋದಯದ ವಿದ್ಯಮಾನವನ್ನು ನೋಡನೋಡುತ್ತ ಅದೇ ಪ್ರಕ್ರಿಯೆ ತನ್ನ ಅಂತರಂಗದಲ್ಲೂ ಒಡಮೂಡತೊಡಗುವುದನ್ನು ಕುವೆಂಪು ಕವಿತೆ 'ಬಾ ಫಾಲ್ಗುಣ ರವಿದರ್ಶನಕೆ' ಸಾಕ್ಷಾತ್ಕರಿಸುತ್ತದೆ, ಸೂರ್ಯೋದಯದ ಪರಿಪ್ರೇಕ್ಷ್ಯವು ಸೃಜನಶೀಲ ಕ್ರಿಯೆಯೇ ಆಗಿಬಿಡುತ್ತದೆ. ಪ್ರಕೃತಿ ರಸಾಸ್ವಾದನೆ ಹೀಗಾಗಿ ಏಕಕಾಲಕ್ಕೆ ಅನುಭವದ ಅನುವಾದವಾದ ಕವಿತೆ ಹಾಗೂ ಅನುಭವದ ಸಂವಹನ ಎರಡೂ ಆಗಿಬಿಡುತ್ತದೆ. ಎರಡನೇ ಮಹಾಯುದ್ಧದ ವಸ್ತುವನ್ನಾಧರಿಸಿ ಕಾದಂಬರಿ ಬರೆಯಬೇಕೆಂಬ ಅಪೇಕ್ಷೆ ಕುವೆಂಪುರವರಿಗಿತ್ತಂತೆ. ಆದರೆ ಅವರು ಬರೆದ ಎರಡು ಕಾದಂಬರಿಗಳು ದಟ್ಟಗ್ರಾಮ್ಯ ಬದುಕಿನ ಸೃಜನಶೀಲ ಅನುವಾದ ಹಾಗೂ ಸಂವಹನಗಳಾಗಿ ನಗರ ಕೇಂದ್ರಿತ ಲೇಖಕರ ವಾಸ್ತವ್ಯದಲ್ಲಿ ಮೂಡಿಬಂದವು. ಮಹಾಯುದ್ಧದ ವಸ್ತುವುಳ್ಳ ಕಾದಂಬರಿ ಬರೆಯದೆ ಹಾಗೆಯೇ ಉಳಿಯಿತು. ಬಹಳಷ್ಟು ಕತೆ ಕಾದಂಬರಿಗಳ ವಸ್ತು, ಪಾತ್ರಗಳು ಸ್ವತಃ ತಾವು ನೋಡಿ, ಅನುಭವಿಸಿದ ಅಥವಾ ಕೇಳಿದ ಕತೆಯಿಂದಲೇ ಆಧರಿತವಾದವು ಎಂದು ಎಂ.ಕೆ. ಇಂದಿರಾ ಹೇಳಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ನವೋದಯ ಸಂದರ್ಭದ ವಾಸ್ತವತಾವಾದಿ ಕಲಾಪ್ರಕಾರಕ್ಕೆ ಕುವೆಂಪು ಹಾಗೂ ಎಂ.ಕೆ. ಇಂದಿರಾ ಇಬ್ಬರೂ ಬದ್ಧರಿದ್ದುದು ಸ್ಪಷ್ಟವಾಗುತ್ತದೆ.

ತಮ್ಮ ಜೀವನಾನುಭವವನ್ನು ಪಾತ್ರಗಳ ಆಂತರಿಕ 'ಚೈತನ್ಯಸತ್ವ' ಹೊಂದಿದ ರೂಪುರೇಖೆಯೊಂದಿಗೆ ಸೃಷ್ಟಿಸಿಕೊಳ್ಳುವ ಕ್ರಿಯೆಯು ಇಂದಿರಾ ಅವರಂಥ ಲೇಖಕಿಗೆ ಅನುಭವದ ಅನುವಾದ ಹಾಗೂ ಸಂವಹನ ಎರಡೂ ಆಗಿಬಿಡಬಲ್ಲದು. ಹಾಗಾಗಿ ಸನಾತನ, ಸ್ತ್ರೀಪರವಲ್ಲದ ಮೌಲ್ಯಗಳ ಪ್ರತಿಪಾದನೆಗಾಗಿ ಕಥನವನ್ನು ಅವರು ಪ್ರಜ್ಞಾಪೂರ್ವಕವಾಗಿ ಬಳಸಿದ್ದಾರೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ತಮ್ಮ ಜಗತ್ತಿನ ಸ್ತ್ರೀಯರ ನೋವು ನರಳಿಕೆಗಳಿಗೆ ಸ್ಪಂದಿಸಿದ ಕಥನ ಇಂದಿರಾ ಅವರದು. ಬಹಳಷ್ಟು ಸ್ತ್ರೀಪಾತ್ರಗಳ ಸಂಕಷ್ಟಗಳಿಗೆ ವಿವಾಹದಂಥ ಸರಳ ಪರಿಹಾರವನ್ನು ಅವರು ನೀಡುತ್ತಾರೆಂದು ಅನಿಸಬಹುದು. ಆದರೆ, ಗೋತ್ರ, ಸೂತ್ರ, ಜಾತಿ, ಜಾತಕ, ವಯಸ್ಸು, ವರದಕ್ಷಿಣೆ, ರೂಪ, ಮನೆತನ ಮುಂತಾದ

ನಿರ್ಬಂಧಕಗಳ ಇಕ್ಕಟ್ಟಿನ ಪರಿಧಿಯಲ್ಲಿ ಮಲೆನಾಡ ಬ್ರಾಹ್ಮಣ ಹೆಣ್ಣುಮಕ್ಕಳ ಬದುಕಿಗೆ ಭದ್ರತೆ, ಭರವಸೆ ಕೊಡುವ ಏಕಮಾತ್ರ ಸಂಸ್ಥೆಯಾಗಿ ವಿವಾಹವು ನಿರ್ಣಾಯಕ ಪಾತ್ರ ಬೀರುತ್ತದೆ. ಜಾತಿ ಸಮುದಾಯದ ಶ್ರೇಷ್ಠತೆ, ಶುದ್ಧತೆ, ಅನನ್ಯತೆ, ಅಸ್ಮಿತೆಗಳೆಲ್ಲಾ ಆ ಸಮುದಾಯದ ಹೆಣ್ಣುಗಳ ಮೇಲಿನ ನಿರ್ಬಂಧ ನಿಯಂತ್ರಣಗಳ ಮೂಲಕವೇ ಪರಿಗಣಿತವಾಗುತ್ತಿದ್ದಂಥ ಗ್ರಾಮ್ಯಬದುಕಿನಲ್ಲಿ ವಿದ್ಯೆ, ಉದ್ಯೋಗ, ಆಸ್ತಿಯಂಥ ಸಾಮಾಜಿಕ ಅವಕಾಶವಿಹೀನ ಸಂದರ್ಭದಲ್ಲಿ ಸೂಕ್ಷ್ಮಸಂವೇದಿಕತ್ವ, ಮಾನವೀಯ ಅನುಕಂಪೆ, ಕರುಣೆ, ಸಹಕಾರ, ಸಹಬಾಳ್ವೆಗಳೇ ಮಹಿಳೆಗೆ ಅವಲಂಬನಗಳಾಗಿಬಿಡುತ್ತವೆ. ಉದಾರವಾದಿ ಮಾನವತಾವಾದಿ ಸೂಕ್ಷ್ಮಸಂವೇದಿಕತ್ವದ ನೆಲೆಯಲ್ಲಿ ಫಣಿಯಮ್ಮನಂತಹ ಪಾತ್ರವು ವಿಧವೆ ದಾಕ್ಷಾಯಣಿಯ ಪ್ರತಿರೋಧವನ್ನು ಸನಾತನ ಮೌಲ್ಯಗಳ ಒರೆಗಲ್ಲಿಗೆ ಹಚ್ಚದೆ, ಅಂತಃಕರಣದ ಪ್ರತಿಸ್ಪಂದನೆಗೊಳಪಡಿಸಿ ಇತ್ಯಾತ್ಮಕವಾಗಿ ಸ್ವೀಕರಿಸುತ್ತದೆ. ಆ ಮೂಲಕ ಸನಾತನ ಪರಂಪರೆಯ ಸ್ತ್ರೀವಿರೋಧಿ ಮೌಲ್ಯಗಳನ್ನು ನೇರವಾಗಿಯೇ 'ಹೆಣ್ಣು ಜನ್ಮ ಸಾಕು' ಎಂದು ಹೇಳುತ್ತಲೇ ಫಣಿಯಮ್ಮ ಪ್ರತಿಭಟಿಸುತ್ತಾಳೆ. 'ಹ್ರಾಂ.ಹ್ರೀ.ಹ್ರೂಂ' ವಿನ ಸರಸಮ್ಮ ಮುಸ್ಲಿಂ ದಂಪತಿಗಳ ಅನಾಥ ಬಾಲಕ ರಾಮುವನ್ನು ಮನೆಮಗನಾಗಿ ಒಪ್ಪಿಕೊಳ್ಳುತ್ತಾಳೆ. ಹುಟ್ಟುಗುರುಡಿಯರಾದ ತನ್ನ ತಂಗಿಯರಾದ ತುಂಗ-ಭದ್ರರೊಂದಿಗೆ ತನ್ನನ್ನು ಧಾರೆ ಎರೆಸಿಕೊಳ್ಳುವಂತೆ ಮಂದಾಕಿನಿ ಮುದ್ದುಕೃಷ್ಣನಲ್ಲಿ ಬೇಡಿಕೆ ಸಲ್ಲಿಸುತ್ತಾಳೆ. ನೆಲೆಯಿಲ್ಲದ ಮಂದಾ ಹಾಗೂ ಅವಳ ತಂಗಿಯರ ಕೈಬಿಡದಂತೆ ಕೃಷ್ಣವೇಣಿ ಗಂಡನನ್ನು ಕೇಳಿಕೊಳ್ಳುತ್ತಾಳೆ. ಹಾಗೆಯೇ ಸದಾನಂದ ಕಾದಂಬರಿಯ ರಾಜು ಕುಂಟಿಗೌರಿಯನ್ನು ಮದುವೆಯಾಗುವ, ಸದಾನಂದ ವಿಧವೆ ಕಮಲಳನ್ನು ಮದುವೆಯಾಗುವ ನಿರ್ಧಾರ ಮಾಡುವುದೂ ಅಂತರಂಗದ ಔದಾರ್ಯ ಹಾಗೂ ಮಾನವೀ ಪ್ರೇಮಭಾವದಿಂದಲೇ. ಎಚ್ಚೆತ್ತ ಸಂವೇದನೆಯ ಯುಗವಾದ ರೊಮ್ಯಾಂಟಿಕ್ ಆಶಯಗಳಿಗೆ ಬದ್ಧವಾದ ಎಂ.ಕೆ.ಇಂದಿರಾ ಅವರನ್ನೂ ಒಳಗೊಂಡ ನವೋದಯ ಕಥಾ ಸಾಹಿತ್ಯವು ವಾಸ್ತವದ ಕಠೋರತೆಯನ್ನು ಶಿವರಾಮಕಾರಂತರಂತೆ 'ಈ ಲೇಖನಿಗೆ ದಯೆಯ ಅರಿವಿಲ್ಲ, ದಾಕ್ಷಿಣ್ಯದ ಗುರುತಿಲ್ಲ' ಎಂಬ ರೀತಿಯಲ್ಲಿ ಅಭಿವ್ಯಕ್ತಿಸಲಿಲ್ಲ. ತಿರುಮಲಾಂಬಾ, ಕಲ್ಯಾಣಮ್ಮನವರ ಬರಹಗಳಲ್ಲಿನ ವೈಚಾರಿಕತೆಗೆ ಸುಧಾರಣಾವಾದಿ ಆಧುನಿಕ ವಿಚಾರಗಳುಳ್ಳ ನಗರ ಕೇಂದ್ರಿತ ಸಾಮಾಜಿಕ ವಾತಾವರಣ ಕಾರಣವಾಯಿತು. ಇಂದಿರಾರವರ ಬಹಳಷ್ಟು ಕಾದಂಬರಿಗಳಾದರೋ ಸುಧಾರಣೆಯ ಗಾಳಿ ಇನ್ನೂ ಬೀಸದ, ಅದರ ಪ್ರಭಾವ ಅಷ್ಟಾಗಿ ನೆಲೆಗೊಳ್ಳದ ಗ್ರಾಮ್ಯ ಪರಿಸರದವು. ಸುಧಾರಣಾವಾದಿ ಚಿಂತನೆಗಳ ಫಲಿತವು ಗ್ರಾಮ್ಯ ಬದುಕಿನ ಸಂದರ್ಭಗಳಲ್ಲಿ ಅಷ್ಟಾಗಿ ಎಂ.ಕೆ. ಇಂದಿರಾ ಅವರ

ಕಾದಂಬರಿಗಳಲ್ಲಿ ಶೋಧಿತವಾಗದು. ಸುಮಿತ್ರಾಬಾಯಿ ಅವರು ಗುರುತಿಸುವಂತೆ, ಸದಾನಂದ, ಗುಂಡ, **ಆತ್ಮಸಖಿ**ಯ ಅನಂತ ಶರ್ಮ, **ಕಲ್ಪವೃಕ್ಷ**ದ ಮಹೇಂದ್ರ, **ವಿಚಿತ್ರಪ್ರೇಮ**ದ ಶಾಂತಾರಾಮ ಇವರುಗಳು ಲೇಖಕಿಯ ಮನದ ಪೂರ್ವಸ್ಥಾಪಿತ ಆದರ್ಶ ಮೂರ್ತಿಗಳೇ. ಆಧುನಿಕ ಸುಧಾರಣವಾದಿ ವ್ಯಕ್ತಿತ್ವಗಳನ್ನು ಇಂದಿರಾ ತಮ್ಮ ಮಹಿಳಾ ಪಾತ್ರಗಳು ಎದುರಿಸುವ ಸಮಸ್ಯೆಗಳ ಪರಿಹಾರರೂಪಿ ದೈವಗಳಾಗಿ ಕೆತ್ತಿದ್ದಾರೆ. ಇಂಥ ಆದರ್ಶದೈವಗಳು ಕಥನದಲ್ಲಿ ಆವಿರ್ಭವಿಸುವುದಕ್ಕೂ ಸಾಮಾಜಿಕ ಕಾರಣವಿದೆ. ಯೂರೋಪಿನ ಸಾಮಾಜಿಕ ಕ್ರಾಂತಿಯ ಸಂದರ್ಭದಲ್ಲಿ ಸೌಲಭ್ಯ ಸಂಪನ್ನ ಮಧ್ಯಮ, ಮೇಲುವರ್ಗದ ಜನತೆ ಸಕ್ರಿಯವಾಗಿ ಭಾಗಿಯಾಗಲು ಒದಗಿ ಬಂದ ಮನಸ್ಥಿತಿಯನ್ನು T.E. Hulme ತನ್ನ Classicism and Romaticism ಲೇಖನದಲ್ಲಿ ನಿರೂಪಿಸುತ್ತಾನೆ. ಕ್ರಾಂತಿಯಲ್ಲಿ ತೊಡಗುವುದರಿಂದ ತಾವು ಕಳೆದುಕೊಳ್ಳಬೇಕಾದ ವರ್ಗ ಸೌಲಭ್ಯಗಳಿಗೆ ಬದಲಾಗಿ ಮೌಲಿಕವಾದುದೇನನ್ನೋ ಪಡೆದುಕೊಳ್ಳಬಲ್ಲೆವೆಂಬ ಭಾವ, ನಂಬಿಕೆ ಆ ಹೊತ್ತು ಮೂಡಿಬಂತು. ವಸಾಹತು ಭಾರತದ ಸಂದರ್ಭದಲ್ಲಿಯೂ ಇಂಥದ್ದೇ ಭಾವ, ನಂಬಿಕೆ ಹೊತ್ತ ಸಮಾಜ ಸುಧಾರಕ ವ್ಯಕ್ತಿತ್ವ ಆವಿರ್ಭಾವವಾಯಿತು. ಇದು ಆ ಹೊತ್ತಿನ ಸಾಮಾಜಿಕ ಅವಶ್ಯಕತೆಯೂ ಆಗಿತ್ತು. ಸುಧಾರಣಾವಾದಿ ಯತ್ನಗಳು ಮಹಿಳಾ ಬಿಡುಗಡೆಯ ಆಶಯವನ್ನು ಮುಖ್ಯವಾಗಿಟ್ಟು ಕೊಂಡಿದ್ದವು. ಕಥನದಲ್ಲಿ ಇಂಥ ಪಾತ್ರಗಳು ಸಹಜವಾಗಿಯೇ ಕೇಂದ್ರ ಸ್ಥಾನವನ್ನು ಪಡೆದವು. ಸುಧಾರಣಾವಾದಿ ಪಾತ್ರಗಳು ಮಹಿಳಾ ಬದುಕಿನೊಂದಿಗೆ ಪಡೆದ ಸಂಬಂಧವು ಇಂದಿರಾ ಕಾದಂಬರಿಗಳಲ್ಲಿ ಶೋಧಕ್ಕೆ ಒಳಗಾಗುವುದಿಲ್ಲ ನಿಜ! ಆದರೆ ಕಥನದ ಬಿರುಕುಗಳಲ್ಲಿನ ಮೌನವು ಶೋಧನಾತ್ಮಕ ಓದಿಗೆ ಎಡೆಮಾಡಿಕೊಡುತ್ತದೆ. **ಸದಾನಂದ**ದ 'ಸದಾನಂದ' ಆಗಲಿ, **ಕಲಾದರ್ಶಿ**ಯ ಕೃಷ್ಣಮೂರ್ತಿಯಾಗಲಿ ಕಮಲ, ಚಿನ್ನುವನ್ನು ತಮ್ಮ ವ್ಯಕ್ತಿತ್ವ ಸಂವರ್ಧನೆಯ ಪ್ರಯೋಗವಾಗಿ ಬಳಸಿಕೊಂಡದ್ದು ನಿಚ್ಚಳವಾಗಿ ಕಂಡುಬರುತ್ತದೆ. ಅನಾಥೆ ಚಿನ್ನು, ವಿಧವೆ ಕಮಲೆಯನ್ನು ಮದುವೆಯಾಗಲು ಕೃಷ್ಣಮೂರ್ತಿ ಹಾಗೂ ಸದಾನಂದರಿಗೆ ಒದಗುವ ಪ್ರೇರಣೆಯು ಅಂತಸ್ಫೂರ್ತಿಯ ಆವರಣ ಪ್ರಭೆಯುಳ್ಳ 'ಸುಧಾರಣೆ, ಪರಿಷ್ಕರಣದ idea' ಆಗಿರುತ್ತದೆ. ತನ್ನ ಗತಿಸಿದ ರೂಪವತಿ, ಕಲಾವತಿ ಪತ್ನಿಯ ಪ್ರತಿರೂಪವೆಂಬಂತೆ ಕಮಲೆಯನ್ನು ತಯಾರು ಮಾಡುವ ಕುಶಲಕರ್ಮಿಯಂತೆ ಸದಾನಂದ ಕಂಡುಬರುತ್ತಾನೆ. ವೀಣೆ ಕೊಳಲು ನುಡಿಸುವುದನ್ನು, ಹಿಂದಿಯೂ ಸೇರಿದಂತೆ ನಾಲ್ಕೈದು ಭಾಷೆ ಮಾತನಾಡುವುದನ್ನು, ಸಾಹಿತ್ಯ ಕೃತಿಗಳನ್ನು ಓದುವುದನ್ನು, ಪ್ರವಾಸದ ಮೂಲಕ ಅನುಭವ

ವಿಸ್ತಾರವಾಗುವುದನ್ನು ಸದಾನಂದ ಕಮಲಳಿಗೆ ಕಲ್ಪಿಸುತ್ತಾನೆ. ತನ್ನ ಕಲ್ಪನೆಯ ಮೂರ್ತಿ ಪರಿಪೂರ್ಣವಾಗಿ ಸಿದ್ಧವಾದ ಮೇಲೆಯೇ ವೈವಾಹಿಕ ಬದುಕಿನ ಸಾರ್ಥಕ್ಯವನ್ನು ಆತ ಅನುಭವಿಸುತ್ತಾನೆ. ಈ ಬಗೆಯ ಕೃತಕೃತ್ಯಭಾವಕ್ಕೆ ಒದಗಿಬರುವ ನಿಮಿತ್ತಗಳಾಗಿ ಚಿನ್ನ, ಕಮಲೆಯರು ಚಿತ್ರಿತಗೊಳ್ಳುತ್ತಾರೆಯೇ ಹೊರತು ಅದರಿಂದಾಚೆಗಿನ ಅವರ ವ್ಯಕ್ತಿತ್ವ ಸಂವರ್ಧನೆಯ ಸಾಧ್ಯತೆಗಳ ಬಗ್ಗೆ ಮೌನವಿದೆ. ಈ ಮೌನ ನಿರ್ಮಿಸುವ ಖಾಲಿ ಅವಕಾಶವನ್ನು ತುಂಬಲೋ ಎಂಬಂತೆ ಬಡತನ, ವೈಧವ್ಯ, ಅವಿವಾಹಿತಸ್ಥಿತಿ, ಬಾಲ್ಯವಿವಾಹ, ಮಲತಾಯಿ ಕ್ರೌರ್ಯ, ಅತ್ತೆಯ ದಬ್ಬಾಳಿಕೆಯಿಂದ ಒದಗುವ ನೋವು ಸಂಕಟಗಳ ಹೃದಯಸ್ಪರ್ಶಿ ಚಿತ್ರಣವಿದೆ. ಇಂಥ ಚಿತ್ರಣದ ಪ್ರಾತಿನಿಧಿಕ ಕಾದಂಬರಿ **'ತಾಳಿದವರು'**. ಈ ತಾಳುವಿಕೆಯ ಚಿತ್ರಣವೂ ಮಹಿಳೆಯ ಸಂದರ್ಭದಲ್ಲಿ ಸನಾತನ ಮೌಲ್ಯಗಳಿಗೆ ಬದ್ಧ ಎಂದೆನಿಸಿದರೂ ಅಸ್ತಿತ್ವದ ಹೋರಾಟದಲ್ಲಿ ಪ್ರಕಟಗೊಳ್ಳುವ ಬದುಕುವ ಸಂಕಲ್ಪ ಶಕ್ತಿಯೇ ಇಂದಿರಾರವರ ಪಾತ್ರಗಳಿಗೆ ಇನ್ನಿಲ್ಲದ ಘನತೆಯನ್ನು ಒದಗಿಸುತ್ತದೆ. ಇಂಥ ಘನತೆ ಇಂದಿರಾರವರಿಗೆ ಪವಿತ್ರತೆಯೂ ಆಗುತ್ತದೆ. ಇಂಥ ಚೈತನ್ಯಸತ್ವದ ಕಥನವು ಇಂದಿರಾರವರಿಗೆ ವೈಯಕ್ತಿಕವಾಗಿ ಬದುಕಿನ ಭರವಸೆಯಾಗಿಯೂ ಮೌಲಿಕತೆಯ ಸಂವಹನಕ್ಕೆ ಒದಗಿಬರುವ ಪಾತ್ರತೆಯಾಗಿಯೂ ಪರಿಣಮಿಸಿದೆ.

ಎಲ್ಲವನ್ನು ಸಿದ್ಧಾಂತೀಕರಿಸುವ ಪುರುಷಕೇಂದ್ರಿತ ಜ್ಞಾನಮೀಮಾಂಸೆಯನ್ನು ಸ್ತ್ರೀವಾದಿಗಳು ನಿರಾಕರಿಸುತ್ತಾರೆ. ಎಂ.ಕೆ. ಇಂದಿರಾ ಕಥನದಲ್ಲಿ ಈ ನಿರಾಕರಣವು ರೊಮ್ಯಾಂಟಿಕ್ ಆಶಯಕ್ಕನುಗುಣವಾಗಿ ಪ್ರಕಟವಾಗುತ್ತದೆ. ವರ್ಗ–ವರ್ಣ–ಲಿಂಗಭೇದ ನೀತಿಗೆ ಹೊರತಾದ ನಿಸರ್ಗದ ಪ್ರೇರಣೆ ಇಂದಿರಾರವರ ಪಾತ್ರಗಳಿಗೆ ದಕ್ಕಿರುವುದು ಮುಖ್ಯ ಸಂಗತಿಯಾಗಿದೆ. ಹೆಚ್ಚಿನ ವಿದ್ಯಾಭ್ಯಾಸವಿಲ್ಲದ **ಗುಂಡ** ಕಾದಂಬರಿಯ ಗುಂಡನಂಥವರಲ್ಲಿ ಉದಾರಮಾನವತಾವಾದಿ ಸುಧಾರಣಾವಾದಿ ಆಶಯಗಳು ನಿಸರ್ಗ ಶಿಕ್ಷಣದ ಮೂಲಕ ಮೂಡಿ ಬಂದವುಗಳೇ ಹೊರತು ಆದರ್ಶವಾದಿ ಸಿದ್ಧಾಂತಗಳ ಪ್ರಭಾವದಿಂದಲ್ಲ. ಆದರ್ಶವಾದಿ ಸಿದ್ಧಾಂತಗಳ ತಾರ್ಕಿಕ ಅಂತ್ಯವು ಮಹಿಳೆಯ ವಿಷಯದಲ್ಲಿ ಬೇಜವಾಬ್ದಾರಿಯುತ ಕ್ರೌರ್ಯವೂ ಆಗಬಲ್ಲುದೆಂಬುದಕ್ಕೆ **ಆತ್ಮಸಖಿ**ಯ ಅನಂತಶರ್ಮ ಉದಾಹರಣೆಯಾಗುತ್ತಾನೆ. ಹಾಗಾಗಿ ಇಂದಿರಾ ಕಥನಪ್ರಕಾರವನ್ನು ಸಾಮಾಜಿಕ ವಿಸಂಗತಿಗಳಿಗೆತ್ತಿದ ಬಡಿಗೆ ಎಂಬಂತೆ ಬಳಸಿಕೊಳ್ಳದಿದ್ದರೂ ಎಸ್.ಎಲ್. ಭೈರಪ್ಪನವರಂತೆ ವಾಸ್ತವತಾ ವಾದದ ಆಶ್ರಯದಲ್ಲಿ ಮಹಿಳಾ ವಿರೋಧಿ ಮೌಲ್ಯಗಳ ಸಮರ್ಥನೆಗಂತೂ

ಹೊರಡುವುದಿಲ್ಲ. ಅ.ನ.ಕೃ. ಅವರಂತೆ ಪ್ರಗತಿಶೀಲತೆಯ ಮುಸುಗಿನಲ್ಲಿ ಸನಾತನ ಮೌಲ್ಯಗಳನ್ನೇ ಬಿತ್ತಿ ಬೆಳೆಸುವ ಕಾರ್ಯವನ್ನು ಮಾಡುವುದಿಲ್ಲ. ತಮ್ಮ ೪೫ನೇ ವಯಸ್ಸಿನಲ್ಲಿ ಬರೆಯಲಾರಂಭಿಸಿದ ಇಂದಿರಾ ಬರೆದ ಎಲ್ಲಾ ಕೃತಿಗಳೂ ಸರ್ವಶ್ರೇಷ್ಠಕೃತಿಗಳಾಗಿರದೆ ಇರಬಹುದು, **ಸದಾನಂದ, ಫಣಿಯಮ್ಮ, ತಗ್ಗಿನಮನೆ ಸೀತೆ, ತುಂಗಭದ್ರ** ಕಾದಂಬರಿಗಳನ್ನು ಏಕತ್ರಗೊಳಿಸಿ ಮರುವಿನ್ಯಾಸಗೊಳಿಸಿದರೆ, ಬಿರುಕುಗಳಲ್ಲಿನ ಮೌನವನ್ನು ಧ್ವನಿಪೂರ್ಣಗೊಳಿಸುವ ಬೃಹತ್ ಮಲೆನಾಡು ಕಥನ ಸಿದ್ಧಗೊಳ್ಳಬಹುದೆಂಬ ಅನಿಸಿಕೆ ನನ್ನದು.

□□□

೬. ಮೃತ್ಯುಂಜಯ : ಒಂದು ಚಾರಿತ್ರಿಕ ಅನುಸಂಧಾನ

– ಮಹದೇವಸ್ವಾಮಿ ಹೆಗ್ಗೊಠಾರ

ಪ್ರಗತಿಶೀಲ ಪಂಥದಲ್ಲಿ ತಮ್ಮದೇ ಛಾಪು ಮೂಡಿಸಿದ್ದ ನಿರಂಜನರ ಸೃಜನಶೀಲತೆಗೆ ಬಹುತ್ವದ ಆಯಾಮವಿದೆ. ಚರಿತ್ರೆ, ಸಮಾಜ, ಧರ್ಮ, ರಾಜಕಾರಣ, ಸಿದ್ಧಾಂತ – ಹೀಗೆ ಪ್ರಾಚೀನದಿಂದ ಅರ್ವಾಚೀನದವರೆಗಿನ ಎಲ್ಲಾ ನೆಲೆಗಳನ್ನು ತಮ್ಮ ಪ್ರತಿಭೆ – ಪ್ರೌಢಿಮೆಯ ಕ್ಷ-ಕಿರಣಗಳಿಂದ ಕಾಣಿಸಿದವರು. ಅವರು ಸಮಕಾಲೀನ ಬದುಕಿನ ವೈರುಧ್ಯಗಳಿಗೆ ಮಹತ್ವ ನೀಡಿದಷ್ಟೇ ಚಾರಿತ್ರಿಕ ಬದುಕಿಗೂ ಲಕ್ಷ್ಯಕೊಟ್ಟವರು. ಅದರಲ್ಲೂ ಚರಿತ್ರೆಯ ಎಳೆಗಳನ್ನಾಧರಿಸಿ, ಮರುರೂಪಿಸಿ ಕಲಾಕೃತಿಯಾಗಿಸುವ ಅವರ ಸ್ವೋಪಜ್ಞತೆಯನ್ನು ಮೆಚ್ಚಬೇಕಾಗುತ್ತದೆ. ಅವರ ಕಲ್ಯಾಣಸ್ವಾಮಿ, ಸ್ವಾಮಿಅಪರಂಪಾರ, ಚಿರಸ್ಮರಣೆ ಹಾಗೂ ಮೃತ್ಯುಂಜಯ – ಈ ಐತಿಹಾಸಿಕ ಕಾದಂಬರಿಗಳು ಲೇಖಕರ ಚಾರಿತ್ರಿಕ ದೃಷ್ಟಿಯ ಕಲಾಸೃಷ್ಟಿ ಎನ್ನಲಡ್ಡಿಯಿಲ್ಲ

ನಿರಂಜನರ ಸ್ಪಷ್ಟ ಇತಿಹಾಸಪ್ರಜ್ಞೆ, ವಸ್ತುನಿಷ್ಠ ಕಲ್ಪಕತೆ ಹಾಗೂ ಸಾಹಿತ್ಯದಲ್ಲಿ ಲೀನವಾಗಿರುವ ಅವರ ಸಾಮಾಜಿಕ-ಸೈದ್ಧಾಂತಿಕ ತತ್ವಗಳಿಂದ ಮೈದಳೆದ ಕೃತಿ – 'ಮೃತ್ಯುಂಜಯ', ಇದು ಅವರ ಅಗ್ರಕೃತಿ ಮಾತ್ರವಲ್ಲ, ಅತ್ಯುತ್ತಮ ಕಾದಂಬರಿಗಳ ಪಂಕ್ತಿಯಲ್ಲಿ ನಿಲ್ಲಲರ್ಹವಾದ ಕನ್ನಡದ ಮೇರುಕೃತಿ. ಒಂದರ್ಥದಲ್ಲಿ ಇದು ಕನ್ನಡ ಕಾದಂಬರಿ ಲೋಕಕ್ಕೆ ಹಲವು ದೃಷ್ಟಿಯಿಂದ ಹೊಸತೆನಿಸುವ ಕೃತಿ. ದೇಶ-ಕೋಶ-ಭಾಷೆ-ವೇಷ-ಇತಿಹಾಸ-ಸಂಸ್ಕೃತಿ ಈ ಎಲ್ಲಾ ಸಂಗತಿಗಳಲ್ಲೂ ಮೇಲ್ನೋಟಕ್ಕೆ ನಮ್ಮದಲ್ಲದ ಆದರೆ, ವಾಸ್ತವವಾಗಿ ನಮ್ಮದೇ ಎನಿಸುವ ಕಥಾನಕವನ್ನು ಹೊಂದಿದ ಕಲಾಕೃತಿ. ನಾಲ್ಕು ಸಾವಿರ ವರ್ಷಗಳ ಹಿಂದಿನ ಅನ್ಯ ಸಂಸ್ಕೃತಿಯೊಂದಕ್ಕೆ ಚರಿತ್ರೆಯ ಬೆಳಕಿನಿಂದ ಕನ್ನಡಿ ಹಿಡಿದು 'ಕನ್ನಡ' ವಾಗಿಸಿರುವ ಲೇಖಕರ ಅಹರ್ನಿಶಿ ಶೋಧ ಹಾಗೂ ಸೃಷ್ಟಿಯ ಫಲವೇ 'ಮೃತ್ಯುಂಜಯ' ಎಂದೆನ್ನಬಹುದು.

ಸಂಸ್ಕೃತಿಯ ತೊಟ್ಟಿಲು, ನಾಗರಿಕತೆಯ ಮೆಟ್ಟಿಲು ಎನಿಸುವ 'ಗ್ರೀಕ್' ಪರಂಪರೆಗೆ ಮಾನವ ಚರಿತ್ರೆಯಲ್ಲಿ ಪರಮೋಚ್ಛ ಸ್ಥಾನವಿದೆ. ಅದನ್ನು

ಅಗೆದಷ್ಟೂ ಬಗೆದಷ್ಟೂ ಮೊಗೆದಷ್ಟೂ ಸಂಸ್ಕೃತಿಯ ಬೇರುಗಳು ಉತ್ಖನನವಾಗುತ್ತವೆ. ಆ ಬೇರುಗಳನ್ನಿಡಿದೇ ಇತಿಹಾಸಕಾರರು ತಮ್ಮ ಶೋಧಕಾರ್ಯವನ್ನು ಮುಂದುವರೆಸಿದ್ದಾರೆ. ಅವರಲ್ಲಿ ಒಬ್ಬನಾದ Will Durant ಎಂಬ ಪ್ರಸಿದ್ಧ ಲೇಖಕ ಒಂದೆಡೆ 'A Greek tradition reports a great revolt in Egypt in which the slaves captured a province...'[೧] ಎಂದಿದ್ದಾನೆ. ಈ ನುಡಿಮುತ್ತು ನಿರಂಜನರ ಸ್ಮೃತಿಪಟ್ಟಲಕ್ಕೆ ಅಚ್ಚೊತ್ತಿ ಕಥಾಬೀಜವಾಗಿ 'ಮೃತ್ಯುಂಜಯ'ನ ರೂಪ ಪಡೆಯಿತ್ತೆಂಬುದನ್ನು ಅವರ ಮುನ್ನುಡಿಯೇ ನುಡಿಯುತ್ತದೆ. ಗ್ರೀಕ್ ಅರಮನೆ-ಗುರುಮನೆಗಳ ಸಂಘರ್ಷ ತಾರಕಕ್ಕೇರಿ ಬಲಿಷ್ಠರು, ಬಡವರ ಮೇಲೆ ನಿರಂತರ ಸವಾರಿ ಮಾಡುವುದನ್ನು ಶೋಷಣೆಯ ಸಾರ್ವತ್ರೀಕರಣವನ್ನು ಚಿತ್ರಿಸುವುದು ಈ ಕೃತಿಯ ಹೆಚ್ಚುಗಾರಿಕೆಯಾಗಿದೆ. ಶೋಷಿತರು ವ್ಯವಸ್ಥೆಯ ಅಡಿಯಲ್ಲಿ ಸೋತು ಸತ್ತರೂ ಅವರು ಸ್ವಾತಂತ್ರ ಸಮಾನತೆಗಾಗಿ ನಡೆಸುವ ಹೋರಾಟ, ಪ್ರತಿಭಟನೆ ಸಂಘರ್ಷಕ್ಕೆ ಸಾವಿಲ್ಲವೆಂದೂ ಸಾರುವ ರೂಪಕಶಕ್ತಿಯೇ 'ಮೃತ್ಯುಂಜಯ'. ಹಾಗಾಗಿ ಚರಿತ್ರೆಯಲ್ಲಿ ಹುದುಗಿಹೋದ ಸಂಸ್ಕೃತಿಯೊಂದರ ವಿವಿಧ ಮುಖಗಳ ಅನಾವರಣವೇ ಇಲ್ಲಿದ್ದರೂ ಹೋರಾಟದ ಆಯಾಮವೇ ಪ್ರಧಾನವಾಗುತ್ತದೆ.

ಜಗತ್ತಿನ ಅತೀ ಉದ್ದವಾದ ನೀಲನದಿ (ನೈಲ್) ನಾಗರಿಕತೆಯ ತವನಿಧಿ. ಜಿಂಕೆಪ್ರಾಂತ, ಟಗರುಪ್ರಾಂತ, ಮೊಸಳೆ ಪ್ರಾಂತ, ನೀರಾನೆ ಪ್ರಾಂತ – ಹೀಗೆ ಹಲವು ಪ್ರಾಂತಗಳ ಒಕ್ಕೂಟವೇ ಐಗುಪ್ತ (ಈಜಿಪ್ಟ್) ರಾಷ್ಟ್ರ. ಸರ್ವಶಕ್ತ ಫೆರೂ ಐಗುಪ್ತದ ಅರಸ. ಹೇಪಾಟ್ ಮಹಾ ಅರ್ಚಕ, ಬೆರಳೆಣಿಕೆಯಷ್ಟು ಜಮೀನ್ದಾರರು, ಉಳಿದವರೆಲ್ಲರೂ ಗುಲಾಮ ಜೀವನ ನಡೆಸುತ್ತಿದ್ದ ಅಶಕ್ತ ಜನ. ಅವರಲ್ಲಿ ನೀರಾನೆ ಪ್ರಾಂತದ ದಲಿತರೆ ಪ್ರಮುಖರು. ಅರಸ, ಪುರೋಹಿತವರ್ಗ ಮತ್ತು ಭೂಮಾಲೀಕ ವರ್ಗ – ಈ ಪ್ರತಿಗಾಮಿ ಶಕ್ತಿಗಳ ವಿರುದ್ಧ ಆ ಪ್ರಗತಿಪರರು ಹೋರಾಡಿದ ಕಥೆಯೇ ಕಾದಂಬರಿಯ ಪ್ರಧಾನ ವಸ್ತು. ಲೇಖಕರು "ಆಗ ನಡೆದ ಬಂಡಾಯ ಮಾನವ ನಾಗರಿಕತೆಯ ಇತಿಹಾಸದಲ್ಲೇ ಪ್ರಪ್ರಥಮ (ಮುನ್ನುಡಿ)"[೨] ಎಂದಿರುವುದನ್ನು ನಿರ್ವಿವಾದವಾಗಿ ಒಪ್ಪಲೇಬೇಕಾಗುತ್ತದೆ.

ಕಾದಂಬರಿಯ ಅಂತರಂಗ ಮುಖ್ಯವಾಗಿ ಮೂರು ಭಾಗಗಳಲ್ಲಿ ಅನಾವರಣಗೊಂಡಿದೆ. ಮೊದಲನೆಯದು, ನೀರಾನೆ ಪ್ರಾಂತದಿಂದ ಮೆನೆಟ್ ಪಾ ಪ್ರಸಿದ್ಧ ಅಬ್ದುವಿನ ಯಾತ್ರೆ ಕೈಗೊಳ್ಳುವುದು.

ಎರಡನೆಯದು, ಕರ ವಿರೋಧಿ ಹೋರಾಟದಲ್ಲಿ ಜನನಾಯಕನಾದ ಮೆನೆಟ್ ಪಾ ರಾಜಧಾನಿ ಮೆಂಫಿಸ್‌ನ ಸೆಡ್ ಉತ್ಸವದಲ್ಲಿ ಬಲಿಯಾಗುವುದು.

ಮೂರನೆಯದು, ಸಂಘರ್ಷದಲ್ಲಿ ಸೋತು-ಸತ್ತರೂ ಅಳಿದುಳಿದ ಮೆನೆಟ್‌ಪಾನ ಬೆಂಬಲಿಗರು ನೀರಾನೆ ಪ್ರಾಂತದಿಂದ ದೂರದಲ್ಲಿ ನೆಲೆಗೊಂಡು ಹೊಸ ಬದುಕುಕಟ್ಟಿಕೊಳ್ಳುವ ಮೃತ್ಯುಂಜಯರಾಗುವುದು.

ಈ ಕಾದಂಬರಿಯ ಆರಂಭ ಪ್ರಸಿದ್ಧ ಅಬ್ಬುವಿನ ಯಾತ್ರೆಯೊಂದಿಗೆ ಪ್ರಾರಂಭಗೊಳ್ಳುತ್ತದೆ. ಆ ಜಾತ್ರೆಗೊಂದು ಸಕಾರಣವಿದೆ. ರಾ ನ ಸುಪುತ್ರನಾದ ಒಸ್ಯೆರಿಸ್‌ನನ್ನು ಸಹೋದರ ಸೆತ್ ಮೋಸದಿಂದ ಕೊಂದು ಶರೀರವನ್ನು ಹದಿನಾಲ್ಕು ಹೋಳು ಮಾಡಿ ಬಚ್ಚಿಡುತ್ತಾನೆ. ಒಸ್ಯೆರಿಸ್‌ನ ರಾಣಿ ಐಸಿಸ್‌ಗೆ ದೊರೆತ ಶರೀರದ ಹದಿಮೂರು ಹೋಳುಗಳಲ್ಲಿ ಕಿರೀಟ ಹೊತ್ತ ತಲೆ ಸಿಕ್ಕಿದ್ದು 'ಅಬ್ಬು'ವಾದ್ದರಿಂದ ಆ ಜನಕೋಟಿಗೆ ಅದು ಪವಿತ್ರ ನೆಲೆಯಾಯಿತು. ಹಾಗಾಗಿ ಅಂದಿನ ಒಸ್ಯೆರಿಸ್-ಸೆತ್-ಐಸಿಸ್-ಹೊರೆಸ್ ಇವರ ಅಣಕವೇ ಅಬ್ಬುವಿನ ಜಾತ್ರೆ-ಯಾತ್ರೆಗೆ ಮೂಲ ಸೆಲೆಯಾಯಿತು. ಇಂತಹ ಧಾರ್ಮಿಕ ಶ್ರದ್ಧೆಯನ್ನು ಕಣ್ತುಂಬಿಕೊಳ್ಳಲು ಹೊರಟವರು-ನೀರಾನೆ ಪ್ರಾಂತದ ಜನ. ಅವರಲ್ಲಿ ಮೆನೆಟ್‌ಪಾ ಪತ್ನಿ ನೆಫಿಸ್, ಪುತ್ರ ರಾಮೆರಿಪ್ ಟಾ, ಅಂಬಿಗ-ಬಟಾ ಮೊದಲಾದವರು ಪ್ರಮುಖರು.

ಉಳ್ಳವರು ಮತ್ತು ಇಲ್ಲದವರಿಗಾಗಿ ಮೀಸಲುಗೊಳಿಸಿದ್ದ ಅಬ್ಬುವಿನ ದೋಣಿಕಟ್ಟೆಯಿಂದಲೇ ವರ್ಗ ಸಂಘರ್ಷದ ಮೊಳಕೆಯೊಂದನ್ನು ಗುರುತಿಸಲು ಶಕ್ಯವಿದೆ. ಸರ್ವಶಕ್ತ ಪೆರೊ, ಪ್ರಧಾನ ಅರ್ಚಕ ಹೇಪಾಟ್ ಮತ್ತು ಅವರವರ ಪರಿವಾರದವರು, ಅಟ್ಟಹಾಸಗೈಯುವವರು, ಹೊಟ್ಟೆಹೊರೆಯಲು ಒಂದೊಂದು ವೃತ್ತಿಮಾರ್ಗವಿಡಿದವರು, ಚಿಲ್ಲರೆ ವ್ಯಾಪಾರಿಗಳು, ಚಿಲ್ಲರೆ ದೇವಸೇವಕರು, ಜಾದುಗಾರರು, ದೊಂಬರಾಟದವರು, ಲಿಪಿಕಾರರು – ಈ ಹೊಸ ಜನರನ್ನು ಎವೆಯಿಕ್ಕದೆ ಆಸೆಗಣ್ಣಿನಿಂದ ನೋಡುವ ದರಿದ್ರರು – ಇವು ಜಾತ್ರೆಯಲ್ಲಿ ಕಂಡ ಮುಖಗಳು. ಆ ಸಂದರ್ಭದಲ್ಲಿ ನೆಫಿಸ್ ತನ್ನ ಮಗನಿಗಾಗಿ ಚೌಕಾಸಿ ಮಾಡಿ ವಿನಿಮಯದ ಮೂಲಕ ಕೊಂಡುಕೊಂಡ ಲಿಪಿಸುರುಳಿ ಅತ್ಯಂತ ಮಹತ್ವದೆನಿಸುತ್ತದೆ. 'ಲಿಪಿ'ಯಿಂದ ವಂಚಿತರಾಗಿದ್ದ ಬಹುಸಂಖ್ಯಾತ ಸಮುದಾಯವೊಂದು ಅಕ್ಷರದ ಬೆಳಕಿಗಾಗಿ ಹಾತೊರೆಯುವುದನ್ನು ಲೇಖಕರು ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ದೇವನೂರು ಮಹಾದೇವ ಹೇಳುವ "ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದು"[೩] ಎಂಬುದನ್ನು ಕಾದಂಬರಿಯ ದಲಿತ ನಾಯಕ ಮೆನೆಟ್ ಪಾ, ಹೆಂಡತಿ ನೆಫಿಸ್‌ರ 'ಅಕ್ಷರ ಪ್ರೀತಿ' ಸಾದರಪಡಿಸುತ್ತದೆ. ಅಷ್ಟೇ ಅಲ್ಲ ಆ ಅಕ್ಷರವೇ ಶೋಷಿತರ ಅಸ್ತ್ರವಾಗಬೇಕೆಂಬ ಕೃತಿಕಾರರ ಅಭೀಪ್ಸೆಯನ್ನು ಅರ್ಥಪೂರ್ಣವಾಗಿ ಧ್ವನಿಸುತ್ತದೆ.

ಆ ಜಾತ್ರೆಯು ಪ್ರಭುತ್ವ ಹಾಗೂ ಧಾರ್ಮಿಕ ಶಕ್ತಿಗಳ ಅಬ್ಬರಕ್ಕೆ ಸೀಮಿತವೆಂಬುದನ್ನು ಅರಿಯಲು ದಮನಿತ ಸಮುದಾಯಕ್ಕೆ ಅಸಾಧ್ಯವಾಗುತ್ತದೆ. ಅಕ್ಷರಗಳು ನಿರಕ್ಷರಿಗಳನ್ನು ಅವ್ಯಾಹತವಾಗಿ ಶೋಷಿಸುವ ಹುನ್ನಾರ ಅವೈಚಾರಿಕರ ಪ್ರಜ್ಞಾಪಾತಳಿಗೆ ನಿಲುಕದೆಂಬುದನ್ನು ಲೇಖಕರು ಸ್ಪಷ್ಟವಾಗಿಯೇ ಗ್ರಹಿಸಿದ್ದಾರೆ. ಒಟ್ಟಿನಲ್ಲಿ ಉಳ್ಳವರ ಆಚರಣೆಗಳು, ಅಂಧ ಧಾರ್ಮಿಕ ಶ್ರದ್ಧೆಗಳು ನೊಂದು-ಬೆಂದವರನ್ನು ಸಂತುಷ್ಟಗೊಳಿಸುವ ಆ ಶೋಷಣೆಗಳು ಕಾಲಾತೀತ, ದೇಶಾತೀತ, ಧರ್ಮಾತೀತವೆಂಬುದನ್ನು ಕಾದಂಬರಿಯ ಮೊದಲ ಘಟ್ಟವೇ ಪರಿಚಯಿಸುತ್ತದೆ.

ಕಾದಂಬರಿಯ ಮುಂದಿನ ಹೆಜ್ಜೆಗುರುತುಗಳು ಅತ್ಯಂತ ಮಹತ್ವದವು. ಅವು ಕೃತಿಯ ಚಲನಶೀಲತೆ ಮತ್ತು ಸೃಜನಶೀಲತೆಯನ್ನು ಒರೆಹಚ್ಚುವಂತಹವು. ಆ ಪ್ರಮುಖ ಸನ್ನಿವೇಶಗಳೆಂದರೆ, "ನೀರಾನೆ ಪ್ರಾಂತದ ನಾಯಕನಾಗಿ ಮೆನೆಟ್‌ಪಾ ಆಯ್ಕೆಗೊಂಡು ಜನನಾಯಕನಾಗುವುದು, ಮೊತ್ತಮೊದಲ ಬಾರಿಗೆ ದಲಿತನೊಬ್ಬನಿಗೆ (ಗೆಳೆಯ-ಅನ್ಸುವಿಗೆ) ಗೋರಿ ನಿರ್ಮಿಸುವುದು, ಮಾದರಿ ಆಡಳಿತ ನಡೆಸುವುದು, ಪೆರೂ ಪೇಪಿಯ ಆಹ್ವಾನದಂತೆ ರಾಜಧಾನಿ-ಮೆಂಫಿಸ್‌ಗೆ ಪ್ರಯಾಣ ಬೆಳೆಸುವುದು, ಪುರುವಿನಂತೆ ಪುನರ್ಯೌವ್ವನಕ್ಕಾಗಿ ಪೆರು ಹಾತೊರೆಯುವುದು, ಆತನ ದೌರ್ಬಲ್ಯವನ್ನರಿತ ನೆಫರ್‌ಟೀಮ್‌ಳು ಪುತ್ರವ್ಯಾಮೋಹದಿಂದ ಅರ್ಚಕ ಹೇಪಾಟ್‌ನನ್ನು ಓಲೈಸಿ ಪ್ರಭುತ್ವ ಮತ್ತು ಧರ್ಮಗಳ ನಡುವೆ ಸಮನ್ವಯತೆ ಸಾಧಿಸುವುದು, ಹೇಪಾಟ್ ಹಾಗೂ ಭೂಮಾಲೀಕರ ಮಹತ್ವಾಕಾಂಕ್ಷೆಯಂತೆ ಮೆನೆಟ್‌ಪಾನನ್ನು ಧರ್ಮ ವಿರೋಧಿಯಾಗಿಸಿ ಸೆಡ್ ಉತ್ಸವದ ಹರಕೆಯ ಕುರಿಯಾಗಿಸಿ ಬಲಿಪಡೆಯುವುದು, ಆತನ ಶವವನ್ನು ಹೊತ್ತು ತಂದು ಗೋರಿಯಲ್ಲಿ ಹೂಳುವುದು, ಉಳ್ಳವರ ಅಟ್ಟಹಾಸಕ್ಕೆ ನೀರಾನೆ ಪ್ರಾಂತ ಉರಿದು ಬೂದಿಯಾಗುವುದು, ಅಂತಿಮವಾಗಿ ಆತನ ಮಡದಿ ಪುತ್ರರು ಮೆನ್ನ-ಬಟಾ ಸೇರಿದಂತೆ ಅಳಿದುಳಿದವರು ಮತ್ತೊಂದೆಡೆ ತಳವೂರುವುದು, ತಮ್ಮ ಧ್ಯೇಯಗಳಿಗೆ ಕಿಡಿ ಹೊತ್ತಿಸಿಕೊಂಡು ಮರುಹುಟ್ಟು ಪಡೆದು ಮೃತ್ಯುಂಜಯರಾಗುವುದು ಇವು ಕಾದಂಬರಿಯ ಸ್ಥೂಲ ಚಿತ್ರಗಳು.

"ವರ್ಗೀಕೃತ ಸಮಾಜದ ಒಂದು ಚಾರಿತ್ರಿಕ ಅನಿವಾರ್ಯತೆ ಎಂದರೆ ವರ್ಗ ಪ್ರತಿಭಟನೆ ಹಾಗೂ ಸಂಘರ್ಷ. ಅಂತಹ ಸಮಾಜದಲ್ಲಿ ದುಡಿಯುವವರ ಪ್ರತಿಭಟನೆ ಎಲ್ಲಿ ಯಾವಾಗ ಬೇಕಾದರೂ ಪೂರ್ವಯೋಜನೆ ಇಲ್ಲದೆ ಹಾಗೂ ತನ್ನಿಂದ ತಾನೇ ಉದ್ಭವಿಸಬಹುದು. ಇದನ್ನೇ ಇತಿಹಾಸಕಾರರು 'Primary Resistance' ಎಂದು ಕರೆಯುವುದು"[೪] ನೀರಾನೆ ಪ್ರಾಂತ್ಯದಲ್ಲಿ ಸಂಭವಿಸುವುದು

ಇಂಥದ್ದೆ. ಕರ ವಸೂಲಿಯ ಸುಲಿಗೆಯ ಸನ್ನಿವೇಶದಲ್ಲಿ ಯಾತ್ರೆಯಿಂದ ಬಂದ ನೀರಾನೆ ಪ್ರಾಂತದವರಿಗೆ ಸತ್ತೆ ಮತ್ತು ಧರ್ಮದ ಹೆಸರಿನಲ್ಲಿ ಶೋಷಿಸುತ್ತಿದ್ದ ಗೇಬು-ಟೆಹುಟಿಯರ ಕಂದಾಯ ಸುಲಿಗೆ ಬರಸಿಡಿಲೆರಗಿದಂತಾಗುತ್ತದೆ. ಮಾತು ಬಾರದ ಜನ ಮೆನೆಟ್ ಪಾನನ್ನು ಮುಂದಿಟ್ಟುಕೊಂಡು ಪ್ರತಿರೋಧ ತೋರುತ್ತಾರೆ. ಅಧಿಕಾರಸ್ಥನಾದ ಟೆಹುಟಿ ಪಿತೂರಿ, ಕುತಂತ್ರಿ, ಮಾತಿನಲ್ಲಿ ಮರುಳು ಮಾಡುವ ವಾಗ್ಶಕ್ತಿಯುಳ್ಳವ "ಮನುಷ್ಯನಿಗೆ ಅವನ ನಾಲಗೆಯೇ ವೈರಿ! ಆ ನಾಲಗೆಯಿಂದಲೇ ಅವನು ನಾಶವಾಗ್ತಾನೆ. ಗೋಧಿಯ ಕಣಜಕ್ಕಿಂತಲೂ ದೊಡ್ಡದು ಮನುಷ್ಯನ ಹೊಟ್ಟೆ, ಅದರ ತುಂಬಾ ನಾನಾ ಬಗೆಯ ಉತ್ತರಗಳಿರುತ್ತವೆ" (ಪು. ೪೩) ಎಂದು ದಮನಿತರ ಬಾಯಿಗೆ ಬೀಗ ಹಾಕಿ, ಹೊಟ್ಟೆಯನ್ನು ಹುಣ್ಣಾಗಿಸುತ್ತಾನೆ. ಆದರೆ ಆ ದಮನಿತ ಸಮುದಾಯ ಲೆಕ್ಕಿಸದೆ ಪ್ರತಿರೋಧ ಒಡ್ಡಿ, ಇಡೀ ಮಾನವ ಇತಿಹಾಸದಲ್ಲೇ ಮೊದಲ ಬಾರಿಗೆ ಮೂಕಶಕ್ತಿಗಳು ತಮ್ಮ ಮೌಖಿಕ ಶಕ್ತಿ ಹಾಗೂ ಮನೋಬಲದಿಂದ ವಿಜಯದ ಕಹಳೆಯೂದುವುದು ಚಾರಿತ್ರಿಕ ಸಂಗತಿ.

ಆ ಸಂಘರ್ಷದಲ್ಲಿ ಅಲ್ಪ-ಸ್ವಲ್ಪ ಸಾವು ನೋವುಗಳಾದರೂ ತಮ್ಮ ಪಾಡಿಗೆ ಹಾಡುವ ಹಕ್ಕಿಗಳಾಗಿ ಐಗುಪ್ತದೊಳಗೆ ನೀರಾನೆ ಪ್ರಾಂತದ ಜನ ಮೊದಲಿಗೆ ಸ್ವತಂತ್ರರಾಗುತ್ತಾರೆ. "ನಿಜ ಸ್ವಾತಂತ್ರ್ಯವೆಂದರೆ ಅಂಚಿನ ಮನುಷ್ಯರ ಬಿಡುಗಡೆ"[೫] ಬಂಧನಮುಕ್ತರಾದ ಆ ಜನ ಸ್ವಾತಂತ್ರ್ಯವನ್ನು ಸಮಾನವಾಗಿ ಅನುಭವಿಸುವುದು ಹೀಗೆ "ನಮಗ್ಯಾಕಪ್ಪ ಪೀತಗೀತ? ಅವೆಲ್ಲ ಪೆರೋನ ರಾಣಿವಾಸದವರಿಗೆ, ಚಾಪೆ ಸಾಕು ಬೇರೆ ಹೆಂಗಸರ ಹಾಗೆ ನಾವೂನು" (ಪು. ೭೮) ಎಂದು ಸರ್ವರು ಸಮತೆಯ ಮಂತ್ರವನ್ನು ಜಪಿಸುವುದು ಲೇಖಕರ ತಾತ್ವಿಕ ಆಶಯದ ಪ್ರತೀಕವೇ ಆಗಿದೆ. ತದನಂತರದಲ್ಲಿ ನೀರಾನೆ ಪ್ರಾಂತ ಹೊಸ ಜೀವನ ಕ್ರಮಕ್ಕೆ ಹೆಜ್ಜೆ ಇಡುತ್ತದೆ. ನ್ಯಾಯಸಮ್ಮತ ಕಂದಾಯ ವಸೂಲಿ, ಕೆರೆ-ಕಾಲುವೆ, ರಸ್ತೆಗಳ ದುರಸ್ತಿ, ದೋಣಿ ನಿರ್ಮಾಣ, ಮಕ್ಕಳಿಗೆ ಶಾಲೆ-ಶಿಕ್ಷಣ, ಕಲೆ-ಶಿಲ್ಪಕಲೆಗಳಲ್ಲಿ ಪ್ರಾವೀಣ್ಯತೆ, ಆಡಳಿತ-ವ್ಯವಹಾರ-ವ್ಯಾಪಾರದಲ್ಲಿ ಚತುರತೆ- ಇವೆಲ್ಲವು ಆದರ್ಶಗಳಾಗದೆ ಆಚರಣೆಗೆ ಬರುತ್ತವೆ. ಪಕ್ಕಾ ವ್ಯಾಪಾರಿತನವನ್ನು ಮೈಗೂಡಿಸಿಕೊಂಡಿದ್ದ 'ಕೆಪ್ಟು' ವಿನೊಂದಿಗಿನ ವ್ಯವಹಾರ-ವ್ಯಾಪಾರ ನೀರಾನೆ ಪ್ರಾಂತದ ಶ್ರೀಮಂತಿಕೆಯನ್ನು ಬೇರೆ ಪ್ರಾಂತಗಳಿಗೆ ಸಾರಿ ಹೇಳುತ್ತವೆ. ಕಡೆಗೆ ಆತನ ನಡಿಗೆ ಪೆರುವಿನ ರಾಜಧಾನಿ ತಲುಪಿ ಜಗಜ್ಜಾಹೀರುಗೊಳಿಸಿ ಮುಂದಿನ ಬೆಳವಣಿಗೆಗೆ ಕಾರಣವಾಗಿ ಕಾದಂಬರಿಯನ್ನು ಮುನ್ನಡೆಸುತ್ತದೆ.

ಮೆಂಫಿಸ್ ತಲುಪಿದ ನೀರಾನೆ ಪ್ರಾಂತದ ನಾಯಕ ಮೆನೆಟ್ ಪಾನನ್ನು ಆರಂಭದಲ್ಲಿ ಅಧಿಕಾರವರ್ಗ ಸನ್ನಡತೆ-ಸತ್ಕಾರಗಳಿಂದಲೆ ಆದರಿಸುತ್ತದೆ. ಆದರೆ ಸೆಡ್ ಉತ್ಸವದ ನೆವಹೇಳಿ ಕರೆಸಿಕೊಂಡ ರಾಜಕೀಯದ ಹುನ್ನಾರಗಳನ್ನು ತಿಳಿದುಕೊಳ್ಳಲು ಆತನಿಗೆ ಹೆಚ್ಚುಕಾಲ ಹಿಡಿಯುವುದಿಲ್ಲ. ಅನ್ಯಮಾರ್ಗವಿಲ್ಲದೆ ಗೃಹಬಂಧನದಲ್ಲಿದ್ದವನಿಗೆ ಆತನ ಬೆಂಬಲಿಗರು ಹಾಗೂ ರೋಗಗ್ರಸ್ಥ ವ್ಯವಸ್ಥೆಯಲ್ಲಿ ಹೊರಗೆ ಅಸ್ವಸ್ಥನಂತಿದ್ದರೂ ಒಳಗೆ ಸ್ವಸ್ಥನಾಗಿರುವ ಮೆನ್ನಾ ಸಹಾಯಹಸ್ತ ಚಾಚುತ್ತಾರೆ. ದಿನದಿಂದ ದಿನಕ್ಕೆ ಉತ್ಸವದ ಹೆಸರಿನಲ್ಲಿ ಹೆಣೆದ ಜೇಡರ ಬಲೆಗೆ ಮೆನೆಟ್ ಪಾ ಬಂಧಿಯಾಗುತ್ತಾನೆ. ಸತ್ತೆಯ ನಿಷ್ಕ್ರೀಯ ಪೆರೋ ಪೇಪಿ ಸ್ವಾರ್ಥಸಾಧಕ, ನೆಫರ್‌ಟೀಮ್ ಸಮಯಸಾಧಕಿ, ಹೇಪಾಟ್ ಧರ್ಮಾಂಧ, ನಿರ್ವೀಯರಾದ ಜಮೀನ್ದಾರರು, ಅಶಕ್ತ ಅಧಿಕಾರವರ್ಗ ಇವರೆಲ್ಲರೂ ರೂಪಿಸಿದ ವ್ಯೂಹ ಆತನಿಗೆ ಇರುಳುಕಂಡ ಬಾವಿಗೆ ಹಗಲು ಬಿದ್ದಂತಾಗುತ್ತದೆ. ನ್ಯಾಯಸ್ಥಾನದಲ್ಲಿ ಅಪರಾಧಿಯಂತೆ ನಿಲ್ಲಿಸಿದ ಸಂದರ್ಭದಲ್ಲಿ "ಇದು ಸ್ವರ್ಣ ಪಿಶಾಚಿಗಳ ಸಮಾಜ, ಮನುಷ್ಯ ಜೀವಕ್ಕೆ ಇಲ್ಲಿ ಬೆಲೆ ಇಲ್ಲ. ಹೋರಾಟದಲ್ಲಿ ಸೆರೆ ಸಿಕ್ಕಿದವರು ನಮ್ಮ ವ್ಯವಸ್ಥೆಯ ಗುಲಾಮರಾಗ್ತಾರೆ........ ಇಷ್ಟು ದಿನ ನಿಮ್ಮ ಚೌಕಮಣೆ ಆಟದಲ್ಲಿ ಕಾಯಿಯಾಗಿದ್ದೆ. ಈಗ ನೀವೆಲ್ಲ ಒಂದಾಗಿದ್ದೀರಿ ಸದ್ಯಕ್ಕೆ ಆಟ ಮುಗಿದಿದೆ" (ಪು.೩೩೫) ಎಂದು ಗಾಯಗೊಂಡ ಸಿಂಹದಂತೆ ಗರ್ಜಿಸುತ್ತಾನೆ; ನೊಂದು ನುಡಿಯುತ್ತಾನೆ. ಮುಂದುವರೆದು, "ಪ್ರಭುಗಳೇ, ಮಹಾ ಅರ್ಚಕರೇ, ಪ್ರತಿಷ್ಠಿತರೇ ಕಿವಿಗೊಟ್ಟು ಕೇಳಿ ನಮಗೆ-ಜನರಿಗೆ ಸಿಟ್ಟು ಬಂದಾಗ ಅದು ಮಹಾಪೂರವಾಗ್ತದೆ. ಅದರಲ್ಲಿ ನೀವೆಲ್ಲ ಕೊಚ್ಚಿ ಹೋಗ್ತೀರಿ! ಮಹಾಪೂರ ಇಳಿದಾಗ ಕಂಡು ಬರೋ ಜಗತ್ತು ಹೊಸದು-ಹೊಚ್ಚ ಹೊಸದು!" (ಪು.೩೬೫) ಇದು ಮೆನೆಟ್‌ಪಾನ ನುಡಿಮಾತ್ರವಲ್ಲ, ಶೋಷಿತನೊಬ್ಬನ ಅಂತರಂಗದ ವಿವೇಕವಾಣಿಯು ಹೌದು; ಭವಿಷ್ಯವಾಣಿಯು ಹೌದು; ನಿರಂಜನರ ತತ್ವಾದರ್ಶಗಳ ಆಶಯವಾಣಿಯು ಹೌದು.

ಕೃತಿಯ ಒಡಲಾಳದಲ್ಲಿ ಹುದುಗಿರುವ ಸತ್ಯ ಹಾಗೂ ಸತ್ವಾಂಶವೆಂದರೆ ದಲಿತ ಹಾಗೂ ಬಲಿತ ವರ್ಗಗಳೆರಡರ ಸಂಘರ್ಷ. ಸಿ.ಎನ್. ರಾಮಚಂದ್ರನ್ ಅವರು ನುಡಿಯುವಂತೆ "ಲೇಖಕರು ತೋರಿಸುವ ವಿಚಾರಗಳು ಎರಡು (೧) ಸತ್ತೆಯ ಮೂಲಕ ನಡೆಯುವ ಶೋಷಣೆಗಿಂತ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ಹೆಚ್ಚು ಕರಾಳವಾದದ್ದು ಮತ್ತು ತೊಡೆದು ಹಾಕಲು ಕಠಿಣವಾದುದೆಂದು. (೨) ಪರಸ್ಪರ ಭಿನ್ನಾಭಿಪ್ರಾಯಗಳೇನೆ ಇರಲಿ ತಂತಮ್ಮ ಸತ್ತೆಗೆ ಅಪಾಯ ಬಂದರೆ ಎಲ್ಲರೂ ಒಂದಾಗಿರುತ್ತಾರೆ. ತೋರಿಕೆಗೆ ನೂರಾರು ವರ್ಗಗಳಿದ್ದರೂ ಇಂತಹ ನಿರ್ಣಾಯಕ ಸಂದರ್ಭಗಳಲ್ಲಿ ಉಳಿಯುವವು ಎರಡೇ

ವರ್ಗಗಳು, ಉಳ್ಳವರು ಮತ್ತು ಇಲ್ಲದವರು"[೬] ಈ ವರ್ಗ ಸಂಘರ್ಷವು ಅಂತಿಮವಾಗಿ ನಡೆಸಿದ ಪ್ರಜ್ಞಾಪೂರ್ವಕ ಕಗ್ಗೊಲೆಯಲ್ಲಿ ಮೆನೆಟ್‌ಪಾ ಅವಸಾನವಾಗುತ್ತಾನೆ. ಅವನ ಶವಕ್ಕಾಗಿ ಬೆಂಬಲಿಗರು ನಡೆಸುವ ಸಿನಿಮೀಯ ಘಟನೆಗಳು ಕಾದಂಬರಿಯ ಬಂಧಕ್ಕೆ ಶೈಥಿಲ್ಯ ತಂದರೂ ಕಟ್ಟಕಡೆಯ ಹೋರಾಟದ ಆಯಾಮಗಳು ಹೃದ್ಯಗೊಳಿಸುತ್ತವೆ. ನೀರಾನೆ ಪ್ರಾಂತ ಪ್ರಭುತ್ವದ ಪೂರ್ವಯೋಜಿತ ಕುಕೃತ್ಯಗಳನ್ನರಿತರೂ ಆಡಳಿತದ ವರ್ಷಕ್ಕೆ ಸಿಲುಕಿ ನಲುಗಿ ನಾಶವಾಗುತ್ತದೆ. ಆದರೆ ಅಲ್ಲಿಯ ಆತ್ಮಗಳು ಮಾತ್ರ ಉಸಿರಾಡುವುದು ಲೇಖಕರ ಆಶಯವನ್ನು ಪೃಥಕ್ಕರಿಸುತ್ತದೆ. ಸಾಮಾನ್ಯ ಅಂಬಿಗನಾದ ಬಟಾ ಶೋಷಿತ ಪ್ರತಿನಿಧಿಗಳನ್ನು ಒಗ್ಗೂಡಿಸಿದ ನಾವಿಕ. ಆತ ತನ್ನ ಕೊಳಲಿನ ಇಂಚರದಲ್ಲಿ

"ನನ್ನ ನಲ್ಲೆಯ ಒಲವು ನಲಿದಿದೆ
ನದಿಯ ತಟದಲ್ಲಿ
ಕ್ರೂರ ಮೊಸಳೆಯು ಅವಿತು ಕುಳಿತಿದೆ
ನೆರಳ ಮರೆಯಲ್ಲಿ..." (ಪು. ೪೩೦)

ಎಂದು ನಾಯಕ ಮನೆಟ್‌ಪಾಗೆ ನುಡಿತರ್ಪಣ ಬಿಡುವ ಸನ್ನಿವೇಶವಂತೂ ಹೃದಯವನ್ನು ತೇವಗೊಳಿಸುತ್ತದೆ. ಕಡೆಗೆ ಮೆನ್ನನ ಕ್ರಾಂತಿಕಥೆ, ಬಟಾನ ಹೊಸ ಹಾಡು, ಶಿಲ್ಪಿ ನೆಖೆನ್‌ನ ಚಿತ್ರಕಲೆ, ಮೆನೆಟ್ ಪಾನ ಮಕ್ಕಳ ಶಸ್ತ್ರಾಭ್ಯಾಸ ಇವೆಲ್ಲವು ಕೃತಿಯ ಬಂಧವನ್ನು ಧ್ವನಿರಮ್ಯವಾಗಿಸಿವೆ.

ಕಾದಂಬರಿಯ ಅಂತರಂಗದ ಆಶಯವಾದ "ಕತ್ತಲಾದ ಮೇಲೆ ಬೆಳಕು ಹರಿತದೆ ಇದು ಸಾಮಾನ್ಯ ಅಂತ ತೋರುವ ಅಸಮಾನ್ಯ ವಿಷಯ" (ಪು. ೪೭೩) ಎಂಬ ಮೆನ್ನನ ಧ್ವನಿಪೂರ್ಣ ಮಾತು ಕಾದಂಬರಿಯ ಸೌಧಕ್ಕೆ ಕಳಸವಿಟ್ಟಂತಿದೆ. ಈ ಕತ್ತಲೆ–ಬೆಳಕು ಸಂಯೋಜನೆಯ ಸಾಂಕೇತಿಕ ಪರಿಕಲ್ಪನೆಗಳು ವರ್ಗ ಸಂಘರ್ಷದ ಸಂಭಾವ್ಯತೆ ಸಂಭವನೀಯತೆಗಳನ್ನು ಎತ್ತಿ ಹಿಡಿದಿದೆ. ಸಮಕಾಲೀನ ಚರಿತ್ರೆಯನ್ನಾಧರಿಸಿದ 'ಚಿರಸ್ಮರಣೆ' ಗಿಂತ ಭಿನ್ನವಾದ 'ಮೃತ್ಯುಂಜಯ' ಮಾನವ ಚರಿತ್ರೆಯೇ ಕಣ್ಣುಬಿಡುತ್ತಿದ್ದ ಕಾಲದ ಕಥಾನಕವಾಗಿ ಚರಿತ್ರೆ ಮತ್ತು ಸಾಹಿತ್ಯದ ಸಂಬಂಧವನ್ನು ಹದವಾಗಿ ಬೆಸೆದಿದೆ. ಕೆ.ವಿ. ತಿರುಮಲ್ಲೇಶ್ ಅವರ ಮಾತಿನಲ್ಲಿ ಹೇಳುವುದಾದರೆ "ಮೃತ್ಯುಂಜಯ ಒಂದು ಮಹಾಕಾವ್ಯವಾಗದೆ ಇರಬಹುದು, ಆದರೆ ಶ್ರೇಷ್ಠ ಕೃತಿಯೆಂಬುದರಲ್ಲಿ ಸಂದೇಹವಿಲ್ಲ."[೭] ಸಾವಯವ ಬಂಧ – ಸಂಬಂಧ ಸ್ಪಷ್ಟ ಇತಿಹಾಸಪ್ರಜ್ಞೆ, ಕಮನೀಯವಾದ ನಿರೂಪಣಾ ಶೈಲಿ, ನಾಲಿಗೆಗೆ ಸವಾಲಾಗುವ ಪಾತ್ರಗಳ ಹೆಸರಿದ್ದರೂ ಭಾಷೆಯ ಬಂಧುರತೆಯಿಂದ

'ಮೃತ್ಯುಂಜಯ' ಸಹಜವಾಗಿ ಒಡಮೂಡಿದೆ. ಡಿ. ಆರ್. ನಾಗರಾಜ್ ಅವರು ಈ ಕಾದಂಬರಿಯ ಬಗ್ಗೆ ನುಡಿಯುವಂತೆ "ಶೋಷಣೆಯನ್ನು ಒಂದು ಮಹಾನ್ ರೂಪಕವಾಗಿ, Social myth ಆಗಿ ಕಂಡರಿಸಿದ ಮೃತ್ಯುಂಜಯ ನಿರಂಜನರ ಈವರೆಗಿನ ಎಲ್ಲ ಸೃಜನಶೀಲ ಸಾಮಾಜಿಕ ಕಳಕಳಿಗಳನ್ನು ಮೂರ್ತೀಭವಿಸಿದಂತೆ ಕಾಣುವ ಕೃತಿ .... ಸಮಾಜವಾದೀ ಪುರಾಣದ ಆಕೃತಿ"[೮] ಎಂದೂ ವಿಶ್ಲೇಷಿಸಿರುವುದು ಸಮಂಜಸವಾಗಿದೆ. ನಿರಂಜನರ ಚಾರಿತ್ರಿಕ ಅನುಸಂಧಾನವಾಗಿರುವ 'ಮೃತ್ಯುಂಜಯ' ಮಾನವೇತಿಹಾಸದಲ್ಲೇ ಪ್ರಪ್ರಥಮವಾಗಿ ದಮನಿತರಿಗೆ ದೊರೆತ ಸ್ವಾತಂತ್ರ್ಯದ ದಿಗ್ವಿಜಯವೆಂದೂ ಅದರ ಅನ್ಯಾಸದೃಶ ಸಾಂಸ್ಕೃತಿಕ ದಾಖಲೆಯೆಂದು ನಿರ್ಣಯಿಸಬಹುದು.

ಕೊನೆಟಿಪ್ಪಣಿಗಳು

೧. ನಿರಂಜನ : ಮೃತ್ಯುಂಜಯ
ಪ್ರ : ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೯
ಮುನ್ನುಡಿಯಲ್ಲಿನ ಉದ್ಧೃತ ಭಾಗ

೨. ನಿರಂಜನ : ಮೃತ್ಯುಂಜಯ
ಪ್ರ : ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೯, ಮುನ್ನುಡಿ

೩. ದೇವನೂರು ಮಹಾದೇವ : ಎದೆಗೆ ಬಿದ್ದ ಅಕ್ಷರ,
ಪ್ರ : ಅಭಿನವ, ಬೆಂಗಳೂರು ೪೦, ೨೦೧೨

೪. ಸಿ.ಎನ್. ರಾಮಚಂದ್ರನ್ : ನಿರಂಜನರ ಐತಿಹಾಸಿಕ ಕಾದಂಬರಿಗಳು : ಒಂದು ವಿಮರ್ಶೆ
ಸಂ : ಬೋಳಂತಕೋಡಿ ಈಶ್ವರಭಟ್ಟ, ನಿರಂಜನ ಅಭಿನಂದನ ಗ್ರಂಥ
ಪ್ರ : ಕರ್ನಾಟಕ ಸಂಘ, ಪುತ್ತೂರು, ೧೯೮೬, ಪು. ೨೮೦

೫. ಆರ್.ವಿ. ಭಂಡಾರಿ : ನಿರಂಜನ
ಪ್ರ : ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೦೫, ಪು. ೭೦

೬. ಸಿ.ಎನ್. ರಾಮಚಂದ್ರನ್ : ಪೂರ್ವೋಕ್ತ –

೭. ಕೆ.ವಿ. ತಿರುಮಲ್ಲೇಶ್ : ನೆಫರ್‌ಟೀಮ್‌ಳಿಗೊಂದು ಪತ್ರ
ಸಂ : ಬೋಳಂತಕೋಡಿ ಈಶ್ವರಭಟ್ಟ, ನಿರಂಜನ ಅಭಿನಂದನ ಗ್ರಂಥ
ಪ್ರ : ಕರ್ನಾಟಕ ಸಂಘ, ಪುತ್ತೂರು, ೧೯೮೬, ಪು. ೨೪೮

೮. ಡಿ.ಆರ್. ನಾಗರಾಜ್ : ನಿರಂಜನರ ಕಾದಂಬರಿಗಳು ಕೆಲವು ಟಿಪ್ಪಣಿಗಳು
– ಪೂರ್ವೋಕ್ತ – ಪು. ೩೩೮–೩೩೯

□□□

೭. ಎಂ.ಎಲ್. ಶ್ರೀಕಂಠೇಶಗೌಡರು : (೧೮೫೨-೧೯೨೬)

- ಡಾ. ಕೆ.ಎನ್. ಗಂಗಾನಾಯಕ್

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ದೇಶಹಳ್ಳಿಯಲ್ಲಿ ಸುಭೇದಾರ್ ಭೈರೇಗೌಡ ರವರ ಎರಡನೆಯ ಮಗನಾಗಿ ಶ್ರೀಕಂಠೇಶಗೌಡರು ೧೮೫೨ ರಲ್ಲಿ ಜನಿಸಿದರು. ಇಂಗ್ಲಿಷ್ ಶಿಕ್ಷಣ ಪಡೆದು, ಆ ಭಾಷೆಯಲ್ಲಿ ಪರಿಣತಿ ಹೊಂದಿ, ಇಂಗ್ಲಿಷ್ ಸಾಹಿತ್ಯಕ್ಕೆ ಮನಸೋತು ಅಲ್ಲಿಂದ ಸಾಹಿತ್ಯ ಸಂಪತ್ತನ್ನು ಕನ್ನಡಕ್ಕೆ ತರಬೇಕೆಂಬ ಪಣತೊಟ್ಟರು. ಮೊದಲಿಗೆ ವಕೀಲರಾಗಿ ಆಮೇಲೆ ನ್ಯಾಯಾಧೀಶರಾಗಿ ಬಡ್ತಿ ಪಡೆದು ಖ್ಯಾತ ನ್ಯಾಯವಾದಿಗಳಾಗಿ ಹೆಸರುಗಳಿಸುತ್ತಾರೆ. ಶಿವಮೊಗ್ಗ, ಹಾಸನ, ಕೋಲಾರ, ನಂಜನಗೂಡು ಹಾಗೂ ಮಧುಗಿರಿ ಮುಂತಾದ ಸ್ಥಳಗಳಲ್ಲಿ ಸೇವೆಸಲ್ಲಿಸಿ ದಕ್ಷತೆಗೆ, ಪ್ರಾಮಾಣಿಕತೆಗೆ ಹೆಸರಾಗಿದ್ದವರು. ಕಾನೂನು ಪದವಿಧರರಾದರೂ, ಕನ್ನಡದ ಮೇಲೆ ಅಪಾರವಾದ ಅಭಿಮಾನವನ್ನು ಇಟ್ಟಿದ್ದರಿಂದಾಗಿ ಗೌಡರನ್ನು ಸ್ಮರಿಸಬೇಕಾಗಿದೆ. ಹೀಗೆ ಕನ್ನಡದ ಮೇಲೆ ಅಭಿಮಾನವಿಟ್ಟು ವಿಶ್ವಸಾಹಿತ್ಯವನ್ನು ತಮ್ಮ ಜನರಿಗೆ ಪರಿಚಯಿಸಬೇಕೆಂಬ ಹೆಬ್ಬಯಕೆ ಅವರಲ್ಲಿತ್ತು. ಆದ್ದರಿಂದಲೇ ಶ್ರೀಯುತರು ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ಮತ್ತು 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕಗಳನ್ನು ಕ್ರಮವಾಗಿ ಪ್ರತಾಪರುದ್ರದೇವ (೧೮೯೫) ಹಾಗೂ ಪ್ರಮಿಳಾರ್ಜುನೀಯಂ (೧೮೯೬) ಎಂದು ರೂಪಾಂತರಿಸಿದ್ದಾರೆ. ಹೀಗೆ ಷೇಕ್ಸ್‌ಪಿಯರನ ನಾಟಕ ಸಾಹಿತ್ಯಕ್ಕೆ ಮನಸೋತು ಅಲ್ಲಿನ ಸೌಂದರ್ಯಕ್ಕೆ ಮಾರುಹೋಗಿ ಕನ್ನಡ ಸಾಹಿತ್ಯದಲ್ಲಿ ಹೊಸ ಪ್ರವೃತ್ತಿ ತಂದ ಆದ್ಯರಾಗಿದ್ದಾರೆ. ಸಾಹಿತ್ಯಾಸಕ್ತಿಯ ಜೊತೆಜೊತೆಗೆ ಒಬ್ಬ ಪತ್ರಿಕೋದ್ಯಮಿಯಾಗಿಯೂ ಹೊರಹೊಮ್ಮಿದುದು ಗೌಡರ ವಿಶೇಷವಾಗಿದೆ. ತಮ್ಮ ಜೀವಿತ ಕಾಲದಲ್ಲಿ 'ಸುರಭಿ' ಎಂಬ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದುದು ಗೌಡರ ಮತ್ತೊಂದು ಹಿರಿಮೆಯಾಗಿದೆ. ಇದರ ಜೊತೆಗೆ ಸಂಸ್ಕೃತ ಭಾಷೆಯ ಪರಿಚಯುವಿದ್ದುದರಿಂದಲೇ ರಾಮಾಯಣದ ಕಥೆಯನ್ನು ಆಧರಿಸಿ 'ಸೀತಾಸ್ವಯಂವರಂ' ಎಂಬ ನಾಟಕವನ್ನು ರೂಪಾಂತರಿಸಿದ್ದಾರೆ.

ಶ್ರೀಕಂಠೇಶಗೌಡರು ತಮ್ಮ ಸೇವಾ ಅವಧಿಯಲ್ಲಿ ಹಾಗೂ ನಿವೃತ್ತರಾದ ಮೇಲೆ ಬೆಂಗಳೂರಿನಲ್ಲಿ ನೆಲೆಸಿ ನಾಟಕ, ಕಾದಂಬರಿ, ಕಾವ್ಯ, ಜೀವನ ಚರಿತ್ರೆ, ಜಾನಪದ ಕಥೆಗಳು, ಬಿಡಿ ಬರಹ ಮತ್ತು ಹರುಕು ಮುರುಕು ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ದಾಖಲೆ ಪ್ರಮಾಣದ ಕೆಲಸ ಮಾಡಿದ್ದಾರೆ. ಹೀಗೆ ಸಾಹಿತ್ಯ ಕೃಷಿಯಲ್ಲಿ ತೊಡಗಿ ಕನ್ನಡದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ.

ಶ್ರೀಕಂಠೇಶಗೌಡರು ತಮ್ಮ ಸಮಕಾಲೀನ ವಿದ್ವಾಂಸರಂತೆ ಕನ್ನಡ ಸಾಹಿತ್ಯದ ಹಿರಿಮೆಗಳನ್ನು ಹೆಚ್ಚಿಸಬೇಕೆಂದು ಪಣತೊಟ್ಟಿದ್ದರು. ಇಂಗ್ಲಿಷ್ ಭಾಷೆ, ಸಾಹಿತ್ಯದಂತೆ ಕನ್ನಡವೂ ಸಹ ಬಹುಜನರಿಗೆ ತಲುಪಬೇಕು, ಕನ್ನಡದ ಕೀರ್ತಿ ಹೆಚ್ಚಾಗಬೇಕು, ಆ ಮೂಲಕ ಜನಪ್ರಿಯವಾಗಬೇಕು ಎಂಬ ಕನಸು ಕಂಡಿದ್ದರು. ಹಾಗಾಗಿ ಇವರು ಇಂಗ್ಲಿಷಿನಿಂದ ಕನ್ನಡಕ್ಕೆ ಷೇಕ್ಸ್‌ಪಿಯರನ ನಾಟಕಗಳನ್ನು ಅನುವಾದಿಸಲಾರಂಭಿಸಿದರು. ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ಮತ್ತು 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕಗಳನ್ನು ಕ್ರಮವಾಗಿ ಪ್ರತಾಪರುದ್ರದೇವ (೧೮೯೫) ಹಾಗೂ ಪ್ರಮಿಳಾರ್ಜುನೀಯಂ (೧೮೯೭) ಎಂದು ರೂಪಾಂತರಿಸಿದ್ದಾರೆ. ಇವುಗಳ ಜೊತೆಗೆ ಶ್ರೀಕಂಠೇಶಗೌಡರು ಷೇಕ್ಸ್‌ಪಿಯರನ ರೋಮಿಯೋ ಜೂಲಿಯಟ್ ನಾಟಕವನ್ನು 'ರಾಮವರ್ಮ ಲೀಲಾವತಿ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆಂದೂ, ಅದನ್ನು ತಾವು ತಮ್ಮ ಬಾಲ್ಯದ ದಿನಗಳಲ್ಲಿ ನೋಡಿರುವುದಾಗಿಯೂ ಡಾ. ಡಿ.ವಿ. ಗುಂಡಪ್ಪ ಅವರು ಹೇಳುತ್ತಾರೆ. (ಪುಟ–೯–೧೦ 'ಶ್ರೀಕಂಠೇಶಗೌಡರ ಕೃತಿಗಳು' ಇಲ್ಲಿ ಉದ್ಧರಿಸಿರುವಂತೆ) ಶ್ರೀಕಂಠೇಶಗೌಡರು ತಮ್ಮ ಮಗಳಿಗೆ ಕನ್ನಡ ಮಾಧ್ಯಮದಲ್ಲಿ ಪಾಠಹೇಳುವ ನೆವದಿಂದ ಭೂಗೋಳ ಗ್ರಂಥವೊಂದನ್ನು 'ಶಾರದಾ ಭೂಗೋಳ' ಎಂಬ ಹೆಸರಿನಲ್ಲಿ ಅನುವಾದಿಸಿದ್ದರೆಂದೂ ಶ್ರೀ ಎಚ್.ಕೆ. ವೀರಣ್ಣಗೌಡರು ತಿಳಿಸಿರುವುದನ್ನು ಇಲ್ಲಿ ದಾಖಲಿಸಲಾಗಿದೆ.

ಶ್ರೀಕಂಠೇಶಗೌಡರು ಅನುವಾದಿಸಿರುವ ನಾಟಕಗಳು

೧. ಪ್ರತಾಪರುದ್ರದೇವ – ೧೮೯೫ – ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ನಾಟಕದ ರೂಪಾಂತರ.

೨. ಪ್ರಮಿಳಾರ್ಜುನೀಯಂ – ೧೮೯೭ – ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ನಾಟಕದ ರೂಪಾಂತರ.

೩. ಸೀತಾಸ್ವಯಂವರಂ – ೧೯೦೧ – ರಾಮಾಯಣದ ಕಥೆಯನ್ನು ಆಧರಿಸಿ ರೂಪಾಂತರಿಸಿರುವುದು.

ಈ ನಾಟಕಗಳ ಪ್ರಾರಂಭದಲ್ಲಿ ವಿಸ್ತಾರವಾದ ಮುನ್ನುಡಿ ಬರೆದು ಭಾಷಾಂತರಕಾರರಿಗೆ, ಸಹೃದಯರಿಗೆ ಒಂದು ರೀತಿಯ ಮಾರ್ಗದರ್ಶನವಿತ್ತು, ಜನರಲ್ಲಿ ಕನ್ನಡದ ಅಭಿಮಾನವನ್ನು ಕೆರಳಿಸಿರುವುದರ ಜೊತೆಗೆ ಅಧ್ಯಯನದಲ್ಲಿ ಆಸಕ್ತಿ ಹುಟ್ಟಿಸಿದ್ದಾರೆ.

ಪ್ರತಾಪರುದ್ರದೇವ : ಇದು ಶ್ರೀಕಂಠೇಶಗೌಡರ ಪ್ರಥಮ ನಾಟಕ. ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ನಾಟಕವನ್ನು ಆಧರಿಸಿದ ರೂಪಾಂತರವಾಗಿದೆ. ಮನುಷ್ಯ ಸಂದರ್ಭದ ಒತ್ತಡದಲ್ಲಿ ಸಿಲುಕಿ ಹೇಗೆ ಪಾಪಾಭೀಮುಖನಾಗುತ್ತಾನೆ ಎಂಬುದಕ್ಕೆ ಈ ಕೃತಿಯಲ್ಲಿ ಬರುವ ನಾಯಕನ ಪಾತ್ರ ಜೀವಂತ ಸಾಕ್ಷಿಯಾಗಿದೆ. ದುರಾಸೆಯಿಂದ ಕೂಡಿದ ವ್ಯಕ್ತಿ ಮಾನವ ಸಂಬಂಧದ ನೆಲೆಗಳನ್ನೆಲ್ಲ ಬದಿಗೊತ್ತಿ ತನ್ನ ಸ್ವಾರ್ಥಸಾಧನೆಗಾಗಿ ಪಾಪಕೂಪದಲ್ಲಿ ಬೀಳುವ ದುರಂತ ಚಿತ್ರ 'ಮ್ಯಾಕ್‌ಬೆತ್' ನಾಟಕದಲ್ಲಿ ಚಿತ್ರಣಗೊಂಡಿದೆ. ತಾನು ಮಾಡಿದ ಈ ಪಾಪ ಕೂಪದ ಅರಿವಾದ ನಂತರ ಆ ಪಾತ್ರ ಮಾಡಿಕೊಳ್ಳುವ ಸ್ವಯಂ ಅವಲೋಕನವು ಅದಕ್ಕೆ ದುರಂತತೆಯ ಗಾಢ ಪರಿಣಾಮವನ್ನುಂಟುಮಾಡುತ್ತದೆ. ಈ ಗಾಢ ಪರಿಣಾಮದ ಉದ್ಬೋಧನೆಯಿಂದ ಜಾಗೃತಗೊಳ್ಳುವ ಹಿರಿಯ ಚೇತನ ತನ್ನಷ್ಟಕ್ಕೆ ತಾನೇ ಒಳಗೊಳಗೆ ಕುದಿದು ಸಾಯುವ 'Tragic Irani' ಈ ನಾಟಕದುದ್ದಕ್ಕೂ ಕಂಡು ಬರುವ ಪ್ರಮುಖ ಅಂಶವಾಗಿದೆ.

ಮ್ಯಾಕ್‌ಬೆತ್ ನಾಟಕದಲ್ಲಿ ಕೇವಲ ಮ್ಯಾಕ್‌ಬೆತ್ ಮಾತ್ರವಲ್ಲ ಸತಿ ಮ್ಯಾಕ್‌ಬೆತ್ ಕೂಡ ಇಂತಹ ಪಾಪ ಕೃತ್ಯದಲ್ಲಿ ಮಿಂದು ಪಶ್ಚಾತ್ತಾಪಕ್ಕೊಳಗಾಗಿ ಸಂಪೂರ್ಣ ದಗ್ಧಳಾಗಿ ಹೋಗುವ ಸುಂದರ ಚಿತ್ರವನ್ನು ಷೇಕ್ಸ್‌ಪಿಯರ್ ತುಂಬಾ ಪರಿಣಾಮಕಾರಿಯಾಗಿ ನೀಡಿದ್ದಾನೆ. ತಾನು ಜಾಗೃತವಾಗಿದ್ದಾಗ ತನ್ನ ಈ ಪಾಪ ಕೃತ್ಯವನ್ನು ಬೇರೆಯವರೊಂದಿಗೆ ಹೇಳಿಕೊಂಡರೆ ಎಲ್ಲಿ ತನ್ನ ಗುಟ್ಟು ರಟ್ಟಾಗಿ ಹೋಗುತ್ತದೋ ಎಂದು ತುಂಬಾ ಜತನದಿಂದ ಪಾಪ ಕೃತ್ಯವನ್ನು ಕಾಪಾಡಿಕೊಳ್ಳುವ ಸತಿ ಮ್ಯಾಕ್‌ಬೆತ್ ರಾತ್ರಿ ವೇಳೆಯಲ್ಲಿ ತಾನು ನಿದ್ರಿಸುತ್ತಿದ್ದಾಗ ಮಾತ್ರ ತನ್ನ ಮಾನಸಿಕ ತುಮುಲವನ್ನು ತಾಳಿಕೊಳ್ಳಲು ವಿಫಲಳಾಗುತ್ತಾಳೆ.

ಹೀಗೆ ಮ್ಯಾಕ್‌ಬೆತ್ ನಾಟಕದಲ್ಲಿ ಷೇಕ್ಸ್‌ಪಿಯರ್ ಅವಳ ಪಾಪ ಮೇರೆಮೀರಿರುವುದನ್ನು ಚಿತ್ರಿಸಿದ್ದಾನೆ. ಇಂತಹ ಮಾನಸಿಕ ಅಸಮತೋಲನದ ಸ್ಥಿತಿಯಲ್ಲಿ ಆಕೆಯ ಜಾಗೃತಾವಸ್ಥೆಯನ್ನು ಮೀರಿಯು ಭಾವನೆಗಳ ಸಂಘರ್ಷವನ್ನು ಹೊರಗೆಡಹಲು ಆಕೆಯ ಮನಸ್ಸು ತುಡಿಯುತ್ತದೆ.

ಷೇಕ್ಸ್‌ಪಿಯರ್ ಎಂತಹ ಜಗತ್ ಪ್ರಸಿದ್ಧ ಮನೋವಿಜ್ಞಾನವನ್ನರಿತ ನಾಟಕಕಾರನಾಗಿದ್ದನೆಂಬುದಕ್ಕೆ ಲೇಡಿ ಮ್ಯಾಕ್‌ಬೆತ್‌ಳ ಪಾಪ ಭೂಯಿಷ್ಠವಾದ ಮಾನಸಿಕ ಪದರ ಪದರವನ್ನು ನಾಟಕಕಾರ ಇಲ್ಲಿ ಅನಾವರಣಗೊಳಿಸಿದ್ದಾನೆ. ಜೊತೆಗೆ ಮನ ಸಂಘರ್ಷದಿಂದ ಕೂಡಿದ ಯಾವುದೇ ವ್ಯಕ್ತಿ ಹೇಗೆ ಅನ್ಯಮನಸ್ಕನಾಗಿರಬಲ್ಲ. ಆತನ ಅರಿವು ಎಲ್ಲವನ್ನೂ ತೊರೆದು ಆ ಪಾಪಪ್ರಜ್ಞೆಯ ಕಡೆಗೆ ಹೇಗೆ ಏಕಮುಖವಾಗಿರುತ್ತದೆ ಎಂಬ ಚಿತ್ರಣವನ್ನು ಇಲ್ಲಿ ಕಾಣಬಹುದು.

'ಮ್ಯಾಕ್‌ಬೆತ್' ನಾಟಕದಲ್ಲಿನ ಪಾತ್ರಗಳು ಶ್ರೀಕಂಠೇಶಗೌಡರ 'ಪ್ರತಾಪರುದ್ರದೇವ' ದಲ್ಲಿ ಈ ಕೆಳಗಿನಂತೆ ಕನ್ನಡದಲ್ಲಿ ಮರುಸೃಷ್ಟಿಯಾಗಿವೆ.

Duncan – ವಿಜಯಧ್ವಜ – ಓಡ್ರ ದೇಶದ ಮಹಾರಾಜ

Malcom – ವಿಜಯಧ್ವಜನ ಮಕ್ಕಳು

Donalbain

Macbeth – ವಿಜಯಧ್ವಜನ ಸೇನಾನಿಗಳು

Banquo

Fleance – ಸೂರಸೇನನ ಮಗ

Macduff – ಓಡ್ರದಲ್ಲಿ ಉಪರಾಜರು

Lennox

Ross

Menteith

Angus

Caitaness

Lady Macbeth – ಚಂದ್ರವಲ್ಲಿ, ವೀರಸೇನನ ಅರಸಿ

Siward – ಮಗಧ ಸೇನಾಪತಿ, ಶೇಖರ

Young Siward – ಶೇಖರನ ಮಗ

Home Guard – ಪಾರ್ಶ್ವಕ, ಗೃಹಪಾಲಕ

English Doctor, A Scotch Doctor, A Soldier, A Porter, An old man

ಜಯಸಿಂಹನ ಪತ್ನಿಪುತ್ರರು, ಒಬ್ಬ ವೈದ್ಯ, ಒಬ್ಬ ವೃದ್ಧ, ಒಬ್ಬ ಚೇಟಿ, ಪದಾತಿಗಳು, ಪರಿವಾರ, ಸೇವಾಜನಗಳು, ಘಾತಕರು, ಸೈನ್ಯಗಳು, ಶಕ್ತಿಗಳು, ಯಕ್ಷಿಣಿ, ಭೂತಗಳು....ಮುಂತಾದವರು ಬರುತ್ತಾರೆ.

5

Act I. Seen-I- An open place. Thunder and Lightning Enter three witches

i. Witch - when shall we three meet again in thunder, lightning, or in rain?

ii. Witch - when the hurly burly's done, when the battle's lost and won.

iii. Witch - that will be ere the set of sun

೧ ನೆಯ ಅಂಕ

೧ ನೆಯ ಸ್ಥಾನ :- ಮರುಭೂಮಿಯಲ್ಲಿ ಗುಡುಗು ಮಿಂಚಾಗುತ್ತಿರುವುದು

ಪ್ರವೇಶ :- ಮೂರು ಶಕ್ತಿಗಳು

೨ ನೆಯ ಶಕ್ತಿ – ತಿರಗ ನಾವು ಸೇರತಕ್ಕದ್ದು ಯಾವಾಗ?

೩ ನೆಯ ಶಕ್ತಿ – ಗಡಿಬಿಡಿಯಾದಾಗ! ಯುದ್ಧವನ್ನು ಗೆದ್ದಾಗ! ಸೋತಾಗ!

೪ ನೆಯ ಶಕ್ತಿ – ವೀರಸೇನನ ಕಾಣುವುದಕ್ಕೋ

ಈ ಮೇಲಿನ ಸಾಲುಗಳನ್ನು ನೋಡದರೆ ಮೂಲದಲ್ಲಿರುವಂತೆ ಗೋಚರಿಸುತ್ತಿದ್ದು ಯಾವ ಬದಲಾವಣೆಗಳು ಕಾಣುವುದಿಲ್ಲ. ಕಥೆ ಷೇಕ್ಸ್‌ಪಿಯರನದಾದರೂ ಹೆಸರುಗಳೂ, ಇಲ್ಲಿ ಬರುವ ಸಂಭಾಷಣೆಗಳನ್ನು ನೋಡಿದರೆ ಕೆಲವು ಕಡೆ ಮೂಲದ ಭಾವಗಳನ್ನು ಭಾಷಾಂತರಿಸಿದ್ದರೆ, ಮತ್ತೆ ಕೆಲವು ಭಾವಾನುವಾದ ಮಾಡಿರುವುದನ್ನು ಕಾಣುತ್ತೇವೆ.

ಲೇಡಿ ಮ್ಯಾಕ್‌ಬೆತ್‌ಳ ಮಾನಸಿಕ ತೊಳಲಾಟವಿರುವ ಕೆಲವು ಸನ್ನಿವೇಶಗಳನ್ನು ಶ್ರೀಕಂಠೇಶಗೌಡರು ತಮ್ಮದೆಯಾದ ಧಾಟಿಯಲ್ಲಿ ಭಾಷಾಂತರಿಸಿರುವುದನ್ನು ಕಾಣಬಹುದು, ಉದಾ......

Lady Macbeth - You lack the season of all natures, sleep.

Macbeth - Come, we'll to sleep. My strange and It the initiate fear, that wants hard use :

ಇಂತಹ ಮಾನಸಿಕ ತೊಳಲಾಟದ ಹಿನ್ನೆಲೆಯನ್ನು ಶ್ರೀಕಂಠೇಶಗೌಡರು

ಚಂದ್ರವಲ್ಲಿ – ನಿದ್ರೆಯಿಲ್ಲದೆ ಆಯಾಸಪಡುತ್ತಿರುವೆ

ವೀರ – ಬಾ, ಮಲಗುವುದಕ್ಕೆ ಹೋಗೋಣ

ಎಂದು ಸಂಕ್ಷಿಪ್ತವಾಗಿ ರೂಪಾಂತರಿಸಿದ್ದಾರೆ.

Doct Even so

Lady Macbeth - To bed, to bed; there's knocking at the gate;
Come, come, come, come,give me your hand;
What's done cannot be undone : to bed, to
bed,
To bed.

Doct - Will she go now to bed?

Gent - Directly.

Doct - Foul whisperings are abroad : unnatural deeds.
Do breed unnatural troubles : infected

Minds To their deaf pillows will discharge their secrets, more needs she She the divine than the physician....

ಲೇಡಿ ಮ್ಯಾಕ್‌ಬೆತ್ ತಪ್ಪಿತಸ್ಥಳಾಗಿದ್ದು ಅವಳ ಮಾನಸಿಕ ನೆಮ್ಮದಿ ಸಂಪೂರ್ಣವಾಗಿ ಹಾಳಾಗಿದೆ. ಆದ್ದರಿಂದ ಅವಳಿಗೆ ನಿದ್ದೆ ಬರುತ್ತಿಲ್ಲ. ಈ ಸನ್ನಿವೇಶವನ್ನು ಗೌಡರು ತಮ್ಮದೇಯಾದ ಧಾಟಿಯಲ್ಲಿ

ವೈದ್ಯ – ಹಾಗೇ ಸರಿ

ಚಂದ್ರವಲ್ಲಿ – ಶಯನಕ್ಕೆ ನಡೆ. ಮಲಗು ನಡೆ ನಡೆ. ಬಾಗಿಲ ಬಳಿ
ಶಬ್ದವಾಗುವುದು ಬಾ, ಬಾ, ಹೋಗೋಣ ಬಾ, ಬಾ
ಕೈ ಕೊಡು. ಆದದ್ದಾಯಿತು. ಇನ್ನದನ್ನು ತಪ್ಪಿಸ
ಲ್ಯಾರಿಂದಾಗುವುದು. ಮಲಗಲಿಕ್ಕೆ ಹೋಗೋಣ,
ನಡೆ! ನಡೆ! ನಡೆ–

ವೈದ್ಯ – ಈಗವಳು ಶಯನವನ್ನೈದುವಳೊ?

ಚೇಟಿ ಸ್ವಲ್ಪವೂ ಸಾವಕಾಶವಿಲ್ಲದೆ ಮಲಗುವಳು.

ವೈದ್ಯ–ಜನರು ಭಯಂಕರವಾದ ವರ್ತಮಾನಗಳನ್ನು ಗುಸುಗುಟ್ಟಿಕೊಳ್ಳುತ್ತಿರುವರು. ಮಾಡಬಾರದ ಕೃತ್ಯಗಳನ್ನು ಮಾಡಿದರೆ, ಅನುಭವಿಸಲಾಗದ ಸಂಕಟಗಳುಂಟಾಗುವವು. ಮನದ ಯಾತನೆ ಮಲಗಿರುವ ಶಯನಕ್ಕಾದರೂ ಗೊತ್ತಾಗುವುದಿಲ್ಲ. ಇನ್ನಿವಳಿಗೆ

ದೈವ ಸಹಾಯ ಬೇಕೆ ಹೊರ್ತು ವೈದ್ಯರಿಂದೇನು ಅನುಕೂಲವಾಗುವುದಿಲ್ಲ. ಲೋಕನಾಥನು ಈಕೆಯನ್ನು ಸಂರಕ್ಷಿಸಲಿ. ನೀನು ಜಾಗರೂಕಳಾಗಿ ನೋಡಿಕೊಳ್ಳುತ್ತಿರು. ತಾನಾಗಿ ಕೆಡುಕು ಮಾಡಿಕೊಳ್ಳಲು ಅವಕಾಶ ಕೊಡದೆ ಸಮೀಪದಲ್ಲೇ ಇರು. ಇನ್ನು ನಾನು ಹೋಗಿಬರುವೆನು.

ದೈವ ಭಕ್ತಿಯನ್ನು ಮುಂದೆ ಮಾಡಿ, ಮಾನವತ್ವವನ್ನು ಇಲ್ಲಿ ಹಿಂದೆಸರಿಸಲಾಗಿದೆ. ಗಂಡನ ಪಾಪ ಪ್ರೇರಣೆಗೆ ಪ್ರೋತ್ಸಾಹಿಸಿದ ಲೇಡಿ ಮ್ಯಾಕ್‌ಬೆತ್ ದುಷ್ಟಮಾರ್ಗವನ್ನು ಅನುಸರಿಸಿದ್ದರಿಂದ ಅಧೋಗತಿಗೆ ಇಳಿಯಬೇಕಾಯಿತು. ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡ ಇವಳು ನಿದ್ರೆಬಾರದೆ ಹಗಲು-ಇರುಳು ಯಾತನಾಮಯ ಬದುಕನ್ನು ಸಾಗಿಸುತ್ತಿರುತ್ತಾಳೆ. ಯಾವ ವೈದ್ಯನಿಂದಲೂ ಗುಣವಾಗದ ಇವಳ ಕಾಯಿಲೆ, ಕೊನೆಗೆ ದೈವದ ಪ್ರೇರಣೆಯಿಂದ ವಾಸಿಯಾಗಬಹುದೆಂಬ ಆಶಯ ಇಲ್ಲಿ ವ್ಯಕ್ತವಾಗಿದೆ.

ಹೀಗೆ ಶ್ರೀಕಂಠೇಶಗೌಡರು ಮ್ಯಾಕ್‌ಬೆತ್ ನಾಟಕವನ್ನು ಭಾರತೀಯ ದೃಷ್ಟಿಕೋನದ ಹಿನ್ನೆಲೆಯಲ್ಲಿ ಭಾಷಾಂತರಿಸಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿ, ಸಂಪ್ರದಾಯಗಳು ಭಾರತೀಯ ಹಿನ್ನೆಲೆಯಲ್ಲಿ ನೋಡಿದಾಗ ಅವು ಸಮಂಜಸವೆನಿಸುವುದಿಲ್ಲ. ಆದರೂ ಗೌಡರು ಭಾರತೀಯ ಸಂಸ್ಕೃತಿಗೆ ವಿರೋಧವಾಗಿ ಕಾಣುವ ಕೆಲವು ಅನುಚಿತ ಪ್ರಸಂಗಗಳನ್ನು ಬದಲಾವಣೆಮಾಡದೆ ಹಾಗೆ ಉಳ್ಳಿಸಿಕೊಂಡಿರುವುದನ್ನು ಇಲ್ಲಿ ನೋಡುತ್ತೇವೆ. ಮೂಲ ಕಥೆಯನ್ನು ಬದಲಾಯಿಸದೆ ಹಾಗೆ ಉಳಿಸಿಕೊಳ್ಳುವುದು ಭಾಷಾಂತರಕಾರನ ಕರ್ತವ್ಯವೆಂದು ಗೌಡರು ಇಂತಹ ತಪ್ಪುಗಳಿಗೆ ಪೀಠಿಕೆಯಲ್ಲಿ ಸಮರ್ಥನೆಯನ್ನು ನೀಡಿದ್ದಾರೆ. ಹೀಗೆ ಗೌಡರ ಭಾಷಾಂತರದ ಇತಿಮಿತಿ ನಡುವೆಯೂ ಮ್ಯಾಕ್‌ಬೆತ್ ನಾಟಕ ನೂತನ ವಿಧಾನದ ನಾಟಕಗಳನ್ನಾಡುವ ನಟರಿಗೆ ಹಾಗೂ ಓದುಗರಿಗೆ ತನ್ನದೆಯಾದ ಸಲಹೆಗಳನ್ನು ನೀಡಿದೆ. ಜೊತೆಗೆ ಕನ್ನಡ ನಾಟಕ ಸಾಹಿತ್ಯದಲ್ಲಿ ಒಂದು ಹೊಸ ಸಂಪ್ರದಾಯವೊಂದನ್ನು ಹಾಕಿಕೊಟ್ಟಿರುವುದಲ್ಲದೆ ಇಂಗ್ಲಿಷ್ ಸಾಹಿತ್ಯದ ಸಂಪತ್ತನ್ನು ಕನ್ನಡಕ್ಕೆ ತಂದುಕೊಟ್ಟಿರುವುದು ಶ್ಲಾಘನೀಯ.

ಪ್ರಮಿಳಾರ್ಜುನೀಯಂ –'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನ ರೂಪಾಂತರವೇ 'ಪ್ರಮಿಳಾರ್ಜುನೀಯಂ' ನಾಟಕ. ಇದು ಗೌಡರ ಎರಡನೆಯ ನಾಟಕವಾಗಿದ್ದು, ಇದೊಂದು ರೂಪಾಂತರವಾದರೂ ಭಾರತೀಯ ಪೌರಾಣಿಕ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮೈದಾಳಿದೆ. ಅನುವಾದಕರು ಇಲ್ಲಿ ಮೂಲದ ಕಥೆಯಲ್ಲಿ ಯಾವ ಬದಲಾವಣೆಯನ್ನು ಮಾಡಿಕೊಳ್ಳದೆ ಯಥಾವತ್ತಾಗಿ ಮುಂದುವರೆದಿದ್ದಾರೆ. ಆದರೆ

ಈ ನಾಟಕದಲ್ಲಿ ಬರುವ ಭೀಷ್ಮ, ದ್ರೋಣ, ಕರ್ಣ, ಶಲ್ಯಾ, ತ್ರಿಪುರಾಂತಕ, ನಟಿ, ಸೂತ್ರಧಾರ, ಊರ್ವಶಿ, ಮಾಚಯ್ಯ, ಪೂಜ್ಯಪಾದ, ಅಗ್ನಿಮಿತ್ರ ಮುಂತಾದ ಪಾತ್ರಗಳು ಗೌಡರ ಸ್ವಂತ ಸೃಷ್ಟಿಯಾಗಿವೆ. ಕಥೆಯಲ್ಲೂ ಕೂಡ ಗೌಡರು ಮೂಲ ನಾಟಕದ ಆಧಾರದ ಮೇಲೆ ಮಾರ್ಪಾಡುಗೊಳಿಸಿದ್ದಾರೆ. ಮೂಲ ನಾಟಕದಲ್ಲಿ ಬರುವ ಅಥೆನ್ಸಿನ ದೊರೆ ಥಿಸಿಯಸ್ಸನಿಗೂ, ಸ್ತ್ರೀ ರಾಜ್ಯದ ಸಾಮ್ರಾಜ್ಞಿ ಹಿಪೊಲಾಯಿಟಳಿಗೂ ವಿವಾಹ ಸನ್ನಿವೇಶ ಉದ್ಭವಿಸುತ್ತದೆ. ಅಂತೆಯೆ ಗೌಡರ ನಾಟಕದಲ್ಲೂ ಅರ್ಜುನನಿಗೂ, ಪ್ರಮಿಳೆಗೂ ವಿವಾಹ ನಡೆಯುವುದರ ಚಿತ್ರಣವಿದೆ.

ಗೌಡರ ರೂಪಾಂತರದಲ್ಲಿ ಬರುವ ವಿವಾಹದ ಸನ್ನಿವೇಶದಲ್ಲಿ ಮೇನವನೆಂಬ ಮಲೆಯಾಳಿ ತನ್ನ ಮಗಳು ಕೈರವೆಯನ್ನು ಜಯಂತನಿಗೆ ಮದುವೆಮಾಡಿಕೊಡಲು ನಿರಾಕರಿಸುತ್ತಾನೆ. ಕೈರವೆಯ ತಂದೆಯ ವಿಶ್ವಾಸ ವಸಂತನ ಮೇಲಿದೆ. ಇದರಿಂದ ತಪ್ಪಿಸಿಕೊಳ್ಳಲು ಕೈರವೆ ಜಯಂತನೊಂದಿಗೆ ಓಡಿಹೋಗಲು ಪ್ರಯತ್ನಿಸಿರುವುದು ಮೂಲ ಮತ್ತು ರೂಪಾಂತರದಲ್ಲಿ ಈ ಕೆಳಗಿನಂತೆ ಚಿತ್ರಣಗೊಂಡಿದೆ.

ಮೂಲ :

Take comfort; he no more shall see my
Lysander and myself will fly this place.
Before the time I did Lysander see,
Seem'd Athens like a paradise to me
O'then what graces in my Love do dwell,
That he hanth turn'd a heaven unto hell.

ರೂಪಾಂತರ :

ಕೈರವೆ –ಸಖಿ! ಸಮಾಧಾನ ಮಾಡಿಕೊ. ಇನ್ನು ಮೇಲೆ ಅವನು ನನ್ನ
ಮುಖವನ್ನೇ ನೋಡಲಾರ. ಜಯಂತನೂ ನಾನೂ ಈ ಸ್ಥಳ
ವನ್ನು ಬಿಟ್ಟು ಹೊರಟುಹೋಗುವೆವು. ಈ ಜಯಂತನನ್ನು
ನಾನು ನೋಡುವುದಕ್ಕೆ ಮುಂಚೆ ಈ ಪ್ರಮಿಳಾ ಪಟ್ಟಣವು
ನನಗೆ ಸ್ವರ್ಗದಂತೆ ಕಾಣಿಸುತ್ತಿತ್ತು. ಈಗ ಅವನ ದೆಸೆ
ಯಿಂದ ಅದು ನರಕದಂತೆ ಕಾಣುವುದು.

ಹೀಗೆ ಭಾರತೀಯ ಪೌರಾಣಿಕ ಪರಿಸರಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಈ ನಾಟಕ ರೂಪಾಂತರಗೊಂಡಿರುವುದನ್ನು ಕಾಣಬಹುದು.

ಮೂಲದಲ್ಲಿ ಬರುವ ಪಾತ್ರಗಳನ್ನು ಕನ್ನಡಕ್ಕೆ ತರುವ ಬದಲು ಗೌಡರು ಕೆಲವೊಂದನ್ನು ಮಾತ್ರ ಈ ಕೆಳಕಂಡಂತೆ ಬದಲಾವಣೆ ಮಾಡಿದ್ದಾರೆ.

Theseus	– ಅರ್ಜುನ
Hyppolyto	– ಪ್ರಮೀಳೆ
Hermia	– ಕೈರವೆ
Lysander	– ಜಯಂತ
Demetrius	– ವಸಂತ
Oberon	– ಮನ್ಮಥ
Titmia	– ರತಿ
Quince	– ವಾಜರಮಾಯಾಚಾರಿ
Snug	– ಮಡಿವಾಳ ಮಾಚಯ್ಯ
Bottm	– ನೆನೆಬಾರದನಾಗಪ್ಪ
Flute	– ಕುಲಾಲಕುಂಟಶೆಟ್ಟಿ
Starveling	– ದರ್ಜಿ ಸುತಾರಾಂ ವಿಠೋಬ
Puck	– ಅಶುಗ (ಮನ್ಮಥನ ಸಾರಥಿ)
Pesblossm	– ಮಾಲತಿ
Cobweb	– ಮಾಧವಿ
Moth	– ಮಲ್ಲಿಕಾ
Musterseed	– ಮಂಜರಿ – ರತಿದೇವಿಯ ಸಖಿಯರು

ಈ ರೀತಿ ಪಾತ್ರಗಳು ಗೌಡರ ಕೈಯಲ್ಲಿ ರೂಪಾಂತರಗೊಂಡಿವೆ.

‘ಪ್ರಮಿಳಾರ್ಜುನೀಯಂ’ ಷೇಕ್ಸ್‌ಪಿಯರನ ನಾಟಕದ ರೂಪಾಂತರವಾದರೂ ಇಲ್ಲಿ ಸ್ವತಂತ್ರ ನಾಟಕದೋಪಾದಿಯಲ್ಲಿ ಮರುಸೃಷ್ಟಿಗೊಂಡಿದೆ. ಕನ್ನಡ ನಾಟಕ ರಂಗಭೂಮಿಯು ಹಿತದೃಷ್ಟಿಯಿಂದ ಗೌಡರು ಈ ನಾಟಕವನ್ನು ಮರುಸೃಷ್ಟಿಗೊಳಿಸಿದ್ದಾರೆ. ಕನ್ನಡದ ಯಾವುದೇ ನಾಟಕವು ರಂಗಭೂಮಿಯ ಮೇಲೆ ಪ್ರದರ್ಶನಗೊಳ್ಳಬೇಕಾದರೆ ಕತೆಯ ಹಿನ್ನೆಲೆಯನ್ನು ನಟಿ, ಸೂತ್ರಧಾರರ ಮೂಲಕ ಪರಿಚಯಿಸುವುದು ವಾಡಿಕೆ. ಅದರಂತೆ ಈ ನಾಟಕದಲ್ಲೂ ಕೂಡ ಗೌಡರು ನಟಿ, ಸೂತ್ರಧಾರನ ಮೂಲಕ ರಂಗಭೂಮಿ ಪರಂಪರೆಯನ್ನು ಅನಾವರಣಗೊಳಿಸಿದ್ದಾರೆ.

'ಸೀತಾಸ್ವಯಂವರಂ' : ರಾಮಾಯಣದ ಕಥೆಯನ್ನು ಆಧರಿಸಿ ಸಿದ್ಧಗೊಂಡಿರುವ ಈ ನಾಟಕವು ಐದು ಅಂಕಗಳಿಂದ ಕೂಡಿದುದಾಗಿದೆ, ನಾಂದಿ ಭಾಗದೊಂದಿಗೆ ನಾಟಕ ಪ್ರಾರಂಭವಾಗುತ್ತದೆ. ನಾಟಕೀಯ ಅಂಶಗಳು ಇಲ್ಲಿ ಹೆಚ್ಚಾಗಿದ್ದು, ನೋಡುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಮನರಂಜನೆಯನ್ನು ನೀಡುವ ದೃಶ್ಯಗಳ ಕಡೆಗೆ ಹೆಚ್ಚು ಒತ್ತುಕೊಡಲಾಗಿದೆ. ಷೇಕ್ಸ್‌ಪಿಯರನ ನಾಟಕಗಳಿಂದ ಪ್ರಭಾವಿತರಾಗಿರುವ ಗೌಡರು ಇಂಗ್ಲಿಷ್ ನಾಟಕಗಳ ಸಂವಿಧಾನ ರೀತಿಗಳನ್ನು ವಿಶೇಷವಾಗಿ ಅನುಸರಿಸಿರುವಂತೆ ತೋರುತ್ತದೆ. ಮೂಲ ರಾಮಾಯಣದಲ್ಲಿ ಬರುವ ಸ್ವಯಂವರದ ರೀತಿಗೂ ಇಲ್ಲಿಗೂ ಅಜಗಜಾಂತರ ವ್ಯತ್ಯಾಸವಿದೆ. ರಾವಣನು ಇಲ್ಲಿ ರಾಕ್ಷಸ ವಿವಾಹದ ಬದಲು ವಿನಯ ಮಾರ್ಗದಿಂದ ಸೀತೆಯನ್ನು ವರಿಸುವುದೆಂದು ಯೋಚಿಸುತ್ತಾನೆ. ಇಂತಹ ಆಲೋಚನೆ ಕೈಗೂಡದಿದ್ದರೆ ವೇಷಧಾರಿಯಾಗಿ ಬಂದು ಸೀತೆಯನ್ನು ಅಪಹರಿಸುವುದೆಂದೂ ತೀರ್ಮಾನಿಸುತ್ತಾನೆ.

ಮೂಲ ಕಥೆಯಲ್ಲಿ ರಾವಣ ಸನ್ಯಾಸಿ ವೇಷಧರಿಸಿ ಸೀತೆಯನ್ನು ಅಪಹರಿಸಿದರೆ; ಗೌಡರ ನಾಟಕದಲ್ಲಿ ಬರುವ ದಶಾನನನಲ್ಲಿ ರಾಮನ ವೇಷದಲ್ಲಿ ಬಂದರೆ ಕಾರ್ಯ ಕೈಗೂಡುವುದೆಂಬ ಚಿಂತನೆ ಸುಳಿದಾಡಿದೆ. ತ್ರಿಲೋಕಾಧಿಪತಿಯಾದ ನಾನು ನರಪಶುವಿನ ವೇಷದಲ್ಲಿ ಹೋಗಿ ಕನ್ಯಾಧಾನಕ್ಕೆ ಕೈಯೊಡ್ಡುವುದು ಸಾಧುವಲ್ಲವೆಂದು ಚಿಂತಿಸುತ್ತಾನೆ. ಆದರೆ ಸೀತೆಗೆ ರಾಮನಲ್ಲಿ ಹೆಚ್ಚಿನ ಅನುರಾಗವಿರುವುದನ್ನು ತಿಳಿದು, ಅವಳ ಅನುರಾಗವನ್ನು ತಾನೂ ಸಹ ಗಳಿಸಲು ಯಾವ ಆಕೃತಿಯನ್ನಾದರೂ ಧರಿಸುವೆನೆಂಬ ತೀರ್ಮಾನಕ್ಕೆ ಬರುತ್ತಾನೆ. ಹೀಗೆ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಮನುಷ್ಯವೇಷಧಾರಿಯಾಗಲು ನಾಚುತ್ತಿದ್ದವನು ಇದ್ದಕ್ಕಿದ್ದಂತೆ ಬದಲಾದುದನ್ನು ಕಾಣುತ್ತೇವೆ. ಇದು ಗೌಡರ ತೀರ್ಮಾನವಾಗಿದೆ.

ಜಾನಪದ ರಾಮಾಯಣದಲ್ಲಿ ಸೀತೆ ರಾವಣನ ಚಿತ್ರಪಟವನ್ನು ಬಿಡಿಸಿ ನೆಲದಡಿಯಲ್ಲಿ ಬಚ್ಚಿಟ್ಟಿದ್ದಳು ಎಂಬ ಕಥೆಯಿದೆ. ಅದರ ಪ್ರೇರಣೆ ಎಂಬಂತೆ ಇಲ್ಲಿಯೂ ಸೀತೆ ಚಿತ್ರಬಿಡಿಸುವ ಪ್ರಸಂಗ ಬರುತ್ತದೆ. ಈ ದೃಶ್ಯದ ಹಿನ್ನೆಲೆ ಇದೇ ತೆರನಾದುದೆನಿಸುತ್ತದೆ.

ಹನುಮಂತ ರಾಮನ ಕಡೆಯವನೆಂದು ಸಾಬೀತುಪಡಿಸಲು ಬೆರಳಿನ ಉಂಗುರವನ್ನು ಸೀತೆಗೆ ನೀಡಿದರೆ, ಗೌಡರ ನಾಟಕದಲ್ಲಿ ಸೀತೆ ರಾಮನ ಬಗ್ಗೆ ಮಾಹಿತಿ ನೀಡುವ ಬ್ರಾಹ್ಮಣನಿಗೆ ಕಡಗವನ್ನು ಉಡುಗೊರೆಯಾಗಿ ನೀಡುವೆನೆಂದು ಪುಸಲಾಯಿಸುತ್ತಾಳೆ. ಮೂಲಕ್ಕೆ ತದ್ವಿರುದ್ಧವಾಗಿ ಈ ಪ್ರಸಂಗ ಮೂಡಿಬಂದಿದೆ.

ಚಿನ್ನದ ಜಿಂಕೆಯ ವೇಷಧಾರಿ ಮಾರೀಚ ರಾಮನನ್ನು ದೂರ ಕರೆದುಕೊಂಡು ಹೋಗುವುದನ್ನು ಮೂಲದಲ್ಲಿ ಕಾಣುತ್ತೇವೆ. ಈ ನಾಟಕದಲ್ಲಿ ಬೇಟೆಯ ವಿನೋದಕ್ಕಾಗಿ ರಾಮನು ಕಾಡಿಗೆ ಬಂದಿದ್ದಾಗ ರಾಮನ ಆಪ್ತ, ಪಿಂಗಳನ ವೇಷಧರಿಸಿ ರಾಮನ ಸಮೀಪ ಮಾರೀಚ ಹೋಗಿ ಆನೆಯ ಸೊಂಡಿಲಿಗೆ ಸಿಕ್ಕಿದವನಂತೆ ನಟಿಸುತ್ತಾ ರಾಮನನ್ನು ದೂರ ಕರೆದುಕೊಂಡು ಹೋಗುವ ಚಿತ್ರಣ ಇಲಿ ಮೂಡಿಬಂದಿದೆ. ರಾಮ ಇಲ್ಲಿಗೆ ಬಂದ ಮೇಲೆ ಮಾರೀಚ ರಾಮನಿಗೆ ಮಾಯಾಸೀತೆ ತೋರಿಸಿ ಮರುಳು ಮಾಡುವ ಪ್ರಸಂಗವಿದೆ.

ಮೂಲ ರಾಮಾಯಣದಲ್ಲಿ ಸೀತೆ ಪಟ್ಟೆಪೀತಾಂಬರಗಳನ್ನು ಕಳಚಿ ನಾರುಡೆಯನ್ನು ಧರಿಸುತ್ತಾಳೆ. ಆದರೆ ಇಲ್ಲಿ ಸೀತೆ ಹಂಸತೂಲಿಕ ತಲ್ಪವನ್ನು ಬಿಟ್ಟು ಚಿಗುರಿನ ಹಾಸಿಗೆಯಲ್ಲಿ ಪವಡಿಸುವಳು. ಅದೇ ರೀತಿ ಚಿನ್ನದ ಕಡಗಗಳನ್ನು ಬಿಟ್ಟು ತಾವರೆ ದಂಟಿನ ಕಡಗಗಳನ್ನು ತೊಡುವಳು. ಮೂಲದಲ್ಲಿ ರಾಮನಿಂದ ಹತನಾದರೆ, ಈ ನಾಟಕದಲ್ಲಿ ಸೀತೆಗೆ ಮೋಹತನಾದ ರಾವಣ ಅವಳು ಸಿಗಲಿಲ್ಲವೆಂದು ಕೊರಗುತ್ತಿರುತ್ತಾನೆ. ಸೀತೆಯನ್ನು ಅಪಹರಿಸಿಕೊಂಡಾದರೂ ತಂದುಕೊಡುತ್ತೇನೆಂದು ಅವನ ತಂಗಿ ಶೂರ್ಪನಖಿ ಸಮಾಧಾನ ಹೇಳುತ್ತಾಳೆ. ಸೀತೆಯನ್ನು ನನ್ನ ತಂಗಿ ತಂದುಕೊಡುವಳೆಂದು ಕುಟುಕು ಜೀವದಲ್ಲಿದ್ದ ರಾವಣನಿಗೆ ಅದಕ್ಕೆ ಬದಲು ಶೂರ್ಪನಖಿಯು ಕೊಯಿದ ಕಿವಿ, ಮೂಗಿಗೆ ಮುಸುಕು ಮರೆಮಾಡಿಕೊಂಡು ಬಂದದ್ದನ್ನು ಕಂಡು ರಾವಣನ ಕುಟುಕು ಜೀವವು ಹಾರಿಹೋಯಿತೆಂಬ ಚಿತ್ರಣ ಇಲ್ಲಿ ಬರುತ್ತದೆ. ಹೀಗೆ ಶ್ರೀಕಂಠೇಶಗೌಡರು ಕನ್ನಡದ ಮೇಲಿನ ಅಭಿಮಾನಕ್ಕಾಗಿ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಿಂದ ಅನುವಾದ, ರೂಪಾಂತರದ ಮೂಲಕ ಮೂರು ಯಶಸ್ವಿ ನಾಟಕಗಳನ್ನು ಹೊರತಂದಿದ್ದಾರೆ.

□□□

೮. ಬಸವಣ್ಣ ಮತ್ತು ವಚನಕಾರ್ತಿಯರ ಅನುಸಂಧಾನ

– ಡಾ. ಎಸ್.ಡಿ. ಶಶಿಕಲಾ

"ವಿವಿಧ ಭಕ್ತರು ವೆರಸಿ ಪರಮೋ
ತ್ಸವದಿ ಕೂಡಲ ಸಂಗಮೇಶನ
ಭವನ ಮಂಟಪದೊಳು ಮಹಾ ಒಡ್ಡೋಲಗವನಿತ್ತು
ನವರಸಾಂಚಿತ ರಾಗದಿಂ ಮೂ
ರವಸರದೊಳರ್ಚಿಸುತ ಸಗುರು
ಸ್ತವನ ಪೂಜೆಯೊಳಿಂತು ಬಸವಂ ಸುಖದೊಳಿರುತಿರಲು"

(ಬಸವಪುರಾಣ : ಸಂಧಿ ೫ ಪದ್ಯ ೭೪)

"ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದುದಯ್ಯ ಶಿವಪ್ರಕಾಶ ! ಆ ಬೆಳಗಿ
ನೊಳಗೆ ಒಪ್ಪುತ್ತಿರ್ದರಯ್ಯ ಅಸಂಖ್ಯಾತ ಭಕ್ತಮಹಾಗಣ
ಗಳು......................"

(ಶೂನ್ಯ ಸಂಪಾದನೆ)

ಕಾವ್ಯಗಳಲ್ಲಿನ ಈ ಪದ್ಯಗಳು ಬಸವಣ್ಣನವರು ಅನುಭವಮಂಟಪದಲ್ಲಿ ಅಸಂಖ್ಯ ಭಕ್ತ ಸಮೂಹದೊಂದಿಗೆ ನಡೆಸುತ್ತಿದ್ದ ಸಂವಾದದ ನೆಲೆಯೊಂದನ್ನು ತೆರೆದು ತೋರಿಸುತ್ತದೆ. ಇಂಥದೊಂದು ಭಕ್ತಸಮೂಹದಲ್ಲಿ ಜಾತಿ ವರ್ಗ ಭೇದವಿಲ್ಲದೆ ಬೆರೆಯುತ್ತಿದ್ದ ಮಹಿಳಾ ಸಮುದಾಯ ತನ್ನೊಳಗನ್ನು ತೆರೆದಿಡುತ್ತ ತನಗೆ ಬೇಕಾದ್ದನ್ನು ಪಡೆದುಕೊಳ್ಳುತ್ತ ಆಧ್ಯಾತ್ಮದ ಹಾದಿಯಲ್ಲಿ ತೊಡಗಿದ್ದು ವಿಶೇಷ. ಈ ಅನುಭವಗೋಷ್ಠಿಯಲ್ಲಿ ತಮ್ಮ ತಿಳಿವನ್ನು ಹಂಚುತ್ತ ಹೊಸ ಅರಿವನ್ನು ಹೊಂದುತ್ತ ಸಮಾಜದ ಬದಲಾವಣೆಯ ಪ್ರಕ್ರಿಯೆಯಲ್ಲಿ ತಮ್ಮನ್ನು ಒಡ್ಡಿಕೊಂಡವರು ಬಸವಣ್ಣನವರು.

ಬಸವಣ್ಣನವರ ಮತ್ತು ವಚನಕಾರ್ತಿಯರ ವಚನಗಳಲ್ಲಿ ಕಂಡುಬರುವ ಸಂವಾದದ ಸಾಧ್ಯತೆಗಳನ್ನು ಕಂಡುಕೊಳ್ಳುವಾಗ ಕೆಲವು ತೊಡಕುಗಳು ಎದುರಾಗುತ್ತವೆ. ಹಲವು ವಚನಗಳು ಪ್ರಕ್ಷಿಪ್ತ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. 'ಅಲೇಖನಾದ ಶೂನ್ಯ ಕಲ್ಲಿನೊಳಗಾದ' ಎಂಬ ವಚನಾಂಕಿತದ ಶಾಂತರಸರು ಅನುಭವ ಮಂಟಪದಲ್ಲಿ ಚರ್ಚೆಯಾದ ವಚನಗಳನ್ನು ಬರೆದಿಡುವ ಕೆಲಸದಲ್ಲಿ ನಿಯೋಜಿತರಾಗಿದ್ದು ವಚನಗಳು ಹೊಸದಾಗಿ ಸೇರಿದ್ದಿರಬಹುದಾದ ಸಾಧ್ಯತೆಯನ್ನೂ ಗಮನದಲ್ಲಿಡಬೇಕಿದೆ. ಇಂಥ ವಚನಕಾರರ ವಚನಗಳು ಇವು ಎಂದು ನಿರ್ವಚಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಇವು ಪ್ರಕ್ಷಿಪ್ತ ವಚನ ಎಂದು ಹೇಳುವ-ಹೇಳಿರಬಹುದಾದ ಸಾಧ್ಯತೆಯಿದೆ.

ಬಸವಣ್ಣನವರ ಬಿಡಿ ಬಿಡಿ ವಚನಗಳನ್ನು ನೋಡಿದಾಗ ಅಲ್ಲಿ ಕೆಲ ವಚನಕಾರ್ತಿಯರ ಹೆಸರಿನ ಬಳಕೆಯಾಗಿದೆ. ವಚನಕಾರ್ತಿಯರ ವಚನಗಳಲ್ಲಿಯೂ ಬಸವಣ್ಣನವರ ಹೆಸರು ಪ್ರಸ್ತಾಪವಾಗಿದೆ. ಇದನ್ನು ಬಿಟ್ಟರೆ ಬಸವಣ್ಣ ಮತ್ತು ವಚನಕಾರ್ತಿಯರ ನಡುವೆ ನೇರ ಸಂವಾದ ನಡೆದಿರಬಹುದಾದ ನಿದರ್ಶನಗಳು ವಚನಗಳಲ್ಲಿ ಅಷ್ಟಾಗಿ ಕಾಣಬರುವುದಿಲ್ಲ. ಬಸವಣ್ಣನವರ ವಚನಗಳಲ್ಲಿ ಮಹಿಳೆಯರ ಪ್ರಸ್ತಾಪ ಬರುತ್ತದಾದರೂ ಯಾರನ್ನು ಉದ್ದೇಶಿಸಿ ಅವರ ಅಭಿಪ್ರಾಯಗಳು ಮೂಡಿವೆ ಎಂಬುದನ್ನು ಕಂಡುಕೊಳ್ಳುವುದು ಕಷ್ಟಸಾಧ್ಯ. ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ, ನಾಗಲಾಂಬಿಕೆಯರ ಸಂದರ್ಭದಲ್ಲಿ ಮಾತ್ರ ಢಾಳಾಗಿ ಕಾಣಬರುತ್ತದೆ. ಈ ವಚನಗಳಿಗೆ ಸಂವಾದದ ಸ್ವರೂಪ ದೊರೆಯುವುದು 'ಶೂನ್ಯ ಸಂಪಾದನೆ'ಯಲ್ಲಿ. ಬಸವಣ್ಣನವರ ವಚನಗಳಲ್ಲಿ ಉಲ್ಲೇಖವಾಗಿರುವ ಚೆಂಗಳೆ, ನಿಂಬಿಯವ್ವೆ, ಮಾಚಲದೇವಿ ಹೆಸರಿನ ವಚನಗಳು ಅಲಭ್ಯವಾಗಿವೆ.

ಶಿವಭಕ್ತ ದಂಪತಿಗಳ ಸಂದರ್ಭದಲ್ಲಿ ಬಸವಣ್ಣನವರು ಮಾತನಾಡಿರುವ ಸಂದರ್ಭಗಳಿವೆ. ಅಂದಿನ ಶರಣ ದಂಪತಿಗಳಲ್ಲಿ ಸತಿಯಾದವಳು ವಚನಗಳನ್ನು ರಚಿಸಿರುವ ಸಂದರ್ಭದಲ್ಲಿ ಬಸವಣ್ಣನವರು ನಡೆಸಿದ ಸಂವಾದವನ್ನು ಗುರುತಿಸಬಹುದಾಗಿದೆ. ಇದಮಿತ್ಥಂ ಎಂದು ಹೇಳಲಾಗದಿದ್ದರೂ ಈಗಾಗಲೇ ಪ್ರಕಟವಾಗಿರುವ ವಚನಗಳನ್ನು 'ಶೂನ್ಯಸಂಪಾದನೆ'ಗಳನ್ನು ಆಧರಿಸಿ ಅನುಸಂಧಾನದ ನೆಲೆಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಶೀಲ-ಚಾರಿತ್ರ್ಯದ ಜಿಜ್ಞಾಸೆಯ ನೆಲೆ

ಹೆಣ್ಣಿನ ಶೀಲ-ಚಾರಿತ್ರ್ಯದ ಜಿಜ್ಞಾಸೆ ಒಟ್ಟು ಪುರುಷ ಪ್ರಧಾನ ವ್ಯವಸ್ಥೆಯ ಬಹುಮುಖ್ಯ ಅಂಶವಾಗಿದೆ. ಪ್ರಾಪ್ತ ವಯಸ್ಕಳಾದ ಹೆಣ್ಣಿನ ನಡತೆಯಲ್ಲಿ

ಕಾಣಬಹುದಾದ ವ್ಯತ್ಯಾಸಗಳು, ವಿವಾಹ ನಂತರದ ಅವಳ ದಾಂಪತ್ಯನಿಷ್ಠೆಯನ್ನು ಕುರಿತ ಅನುಮಾನಗಳು ಆಕೆಯನ್ನು ಮತ್ತೆ ಮತ್ತೆ ಪರೀಕ್ಷಿಸುವಂತೆ ಸಮಾಜವನ್ನು ಪ್ರೇರೇಪಿಸುತ್ತದೆ. ಇದರಲ್ಲಿ ಉತ್ತೀರ್ಣಳಾದ ಹೆಣ್ಣು ಸಮಾಜದ ಭಾಗವಾಗಿ ಬದುಕುವ ಅವಕಾಶವನ್ನು ಕಲ್ಪಿಸುತ್ತದೆ. ಆಕೆ ಸಮಾಜದ ಇತರ ಸ್ತ್ರೀಯರಿಗೂ ಮಾದರಿಯಾಗುತ್ತಾಳೆ. ಇಂಥ ಎಲ್ಲವೂ ಸ್ತ್ರೀಕೇಂದ್ರಿತ ನಡಾವಳಿಯನ್ನು ರೂಪಿಸಿದ ಸಾಮಾಜಿಕ ವ್ಯವಸ್ಥೆಯ ಚಿತ್ರಣವನ್ನು ಒದಗಿಸುತ್ತದೆ. ಈ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ಶೀಲ-ಚಾರಿತ್ರ್ಯಗಳ ಜಿಜ್ಞಾಸೆ ಬಸವಣ್ಣನವರನ್ನೊಳಗೊಂಡಂತೆ ಹಲವರು ಶರಣರ ಇಂಗಿತವಾಗಿದದ್ದು ಕಾಣುತ್ತದೆ. ಕೌಶಿಕನ ಸಂಬಂಧವನ್ನು ಕಳಚಿಕೊಂಡು ಕಲ್ಯಾಣದ ಕಡೆ ಹೊರಟ ಅಕ್ಕಮಹಾದೇವಿ 'ಕಾಮಾರಿ'ಯೇ ಅಲ್ಲವೇ ಎಂಬುದು ಬಹುತೇಕ ಶರಣರ ಪ್ರಶ್ನೆಯಾಗಿದೆ. ಅವಳ ಉದಮದದ ಯೌವ್ವನವು ಶರಣರ ಪ್ರಶ್ನೆಯಾಗಿ ಕಾಡುತ್ತದೆ. 'ಪತಿಯ ಕುಱುಹು ಹೇಳಿದರೆ ಬಂದು ಕುಳ್ಳಿರು' ಇಂಥ ಪ್ರಶ್ನೆ ಮತ್ತು ನಿಬಂಧನೆಗಳನ್ನು ಅಕ್ಕಮಹಾದೇವಿ ಎದುರಿಸಬೇಕಾಗುತ್ತದೆ. ಇದು ಪುರುಷ ಶರಣವರ್ಗ ತನ್ನ ಮೇಲೆ ನಂಬಿಕೆ ಕಳೆದುಕೊಂಡ ಪ್ರತೀಕವೂ ಹೌದು. ಬಸವಣ್ಣನವರು ಅಕ್ಕಮಹಾದೇವಿಯನ್ನುದ್ದೇಶಿಸಿ ಅಲ್ಲಮಪ್ರಭುವಿಗೆ ಹೇಳುವ ಮಾತು. **"ಎನ್ನ ಹೆತ್ತ ತಾಯಿ ಅಕ್ಕಮಹಾದೇವಿಯನ್ನು ವಿರಕ್ತಿಯಿಂದ ದಿಗಂಬರೆಯಾಗಿ ಕಾಮಾರಿಯಾಗಿ ಬರುತ್ತಿರ್ದಪಳೆಂದು"** ಬಿನ್ನೈಸುತ್ತಾರೆ. ಪರಿಣಾಮವಾಗಿ ಪ್ರಭು ದೇವರ ಆಣತಿಯಂತೆ ಆಕೆ ಕಾಮಸಂಹಾರಿ ಎಂಬುದನ್ನು ಸಾಬೀತು ಪಡಿಸಬೇಕಾಗುತ್ತದೆ. ಅದಕ್ಕೆ ಅಲ್ಲಮನಿಂದ ನಿಯೋಜಿತಗೊಂಡವನು ಕಿನ್ನರಿಬೊಮ್ಮಯ್ಯ. ಆತ 'ಯೋನಿಯೊಳಗಂಗುಲಿ ಪ್ರವೇಶಮಂ ಮಾಡಿ' ಅಲ್ಲಿ ಭಸ್ಮವಿದ್ದದ್ದನ್ನು ತಿಳಿಸುತ್ತಾನೆ. ಅನಂತರದಲ್ಲಿ ಅಕ್ಕ ಬಸವಣ್ಣನವರಿಗೆ ಹೇಳುವ ಮಾತು :

"...ನಿಮ್ಮ ಸಜ್ಜನ ಸದ್ಭಾವರ ಶ್ರೀಚರಣಕ್ಕೆಱಗಿದೆನಾಗಿ, ಎನ್ನ ಹಣೆಯ ಲಿಖಿತ ತೊಡೆಯಿತ್ತೆಂದು, ಚೆನ್ನ ಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಸಂಗನ ಬಸವಣ್ಣನ ಪಾದವ ಕಂಡು ಮಿಗೆ ನಮೋ ನಮೋ ಎನುತಿರ್ದೆನು !"

ಬಸವಣ್ಣ ಅಕ್ಕಮಹಾದೇವಿ ಕುರಿತು ಅಲ್ಲಮನಿಗೆ ಹೇಳುವ ಮಾತು :

"ಕಾಯದ ಲಜ್ಜೆಯ ಕಲ್ಪಿತವ ಕಳೆದು, ಜೀವದ ಲಜ್ಜೆಯ ಮೋಹವನಳಿದು
ಮನದ ಲಜ್ಜೆಯ ನೆನಹ ಸುಟ್ಟು, ಭಾವದ ಕೂಟ ಬತ್ತಲೆಯೆಂದಱಿದು
ತವಕದ ಸ್ನೇಹ ವ್ಯವಹಾರಕ್ಕೆ ಹುಗದು. ಕೂಡಲಸಂಗಮದೇವಯ್ಯಾ
ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ನಿಲವ ನೋಡಯ್ಯಾ ಪ್ರಭುವೆ"

ಅಕ್ಕನ ಮಾತಿನಲ್ಲಿ ವ್ಯಕ್ತವಾಗುವ 'ಹಣೆಯ ಲಿಖಿತ ತೊಡೆಯಿತು' ಎಂಬುದು ಅವಳ ಮೇಲಿನ ಶರಣರ ಅನುಮಾನಗಳು ಬಿಡುಗಡೆಯಾದವು. ಹೊರಟು ಹೋಯಿತು ಎಂಬುದನ್ನು ಧ್ವನಿಸುತ್ತವೆ. ಹಣೆಯ ಲಿಖಿತ ತೊಡೆದದ್ದರಿಂದ ಕಲ್ಯಾಣದ ಪ್ರವೇಶ ಸಾಧ್ಯವಾಗುತ್ತದೆ. ಬಸವಣ್ಣನವರ ಕೃಪೆಗೆ ಪಾತ್ರವಾಗುವಂತಾಗುತ್ತದೆ. ದೇಹದ ಮೇಲಿನ ನಾಚಿಕೆಯನ್ನು ಜೀವದ ಮೇಲಿನ ಮೋಹವನ್ನು ಕಳೆದುಕೊಂಡು, ಮನದ ಲಜ್ಜೆಯ ನೆನಪನ್ನು ಸುಟ್ಟು ಶೂನ್ಯ ಭಾವವನ್ನು ತಳೆದಿರುವ ಮಹಾದೇವಿಯಕ್ಕನ ನಿಲವು ಬಸವಣ್ಣನವರು ಮಹಾದೇವಿಯಕ್ಕಳನ್ನು ಸ್ತುತಿಸುವಂತೆ ಪ್ರೇರೇಪಿಸುತ್ತದೆ.

ಇಂಥ ಹೊತ್ತಿನಲ್ಲಿಯೇ ಅಲ್ಲಮ ಪ್ರಭುವಿನ ಹಲವು ಪ್ರಶ್ನೆಗಳಿಗೆ ಅಕ್ಕ ಗುರಿಯಾಗಬೇಕಾಗುತ್ತದೆ. **"ಉದಮದದ ಯೌವನವನೊಳಗೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವಾ? ಸತಿಯೆಂದರೆ ಮುನಿವರು ನಮ್ಮ ಶರಣರು. ನಿನ್ನ ಪತಿಯ ಕುಱುಹ ಹೇಳಿದರೆ ಬಂದು ಕುಳ್ಳಿರು. ಅಲ್ಲದಿರೆ ತೊಲಗು ಆಚೆ"** ಎಂಬ ನಿಷ್ಠುರತೆಗೆ ಒಳಗಾಗುತ್ತಾಳೆ. 'ಸತಿಯರ ಗೋಷ್ಠಿ ವಿಷ ಕಾಣವ್ವಾ' ಎಂಬ ಟೀಕೆಗೆ ಒಳಗಾಗಬೇಕಾಗುತ್ತದೆ. ಇಲ್ಲೆಲ್ಲಾ ಅಲ್ಲಮನಂಥವರಿಗೆ ಅಕ್ಕನ ಯೌವನ ಪ್ರಶ್ನೆಯಾಗಿ ಕಾಡುವ ಬಗೆ, ಗಂಡನನ್ನು ಬಿಟ್ಟು ಬಂದ ಸತಿಯ ನಡೆಯನ್ನು ಗುಮಾನಿಯಿಂದ ನೋಡುವ ದೃಷ್ಟಿ, ಇಂಥವಳ ಸಂಗ ವಿಷಸದೃಶ ಎಂಬ ಮಾತುಗಳು ಶರಣ ಸಮುದಾಯದ ಪುರುಷವರ್ಗ ತನ್ನ ಮೇಲಿನ ನಂಬಿಕೆ ಕಳೆದುಕೊಂಡ ಪರಿಣಾಮವೆಂದೆನಿಸದೇ ಇರದು. ಅನುಭಾವದ ಗೋಷ್ಠಿಗೆ ಸ್ತ್ರೀಯರ ಪ್ರವೇಶ ಅಷ್ಟು ಸುಲಭವಾಗಿರಲಿಲ್ಲ, ಮುಕ್ತವಾಗಿರಲಿಲ್ಲವೆಂಬುದನ್ನು ಇದು ಸೂಚಿಸುತ್ತದೆ. ಇಂಥ ಸಂದಿಗ್ಧದಲ್ಲಿ ಅಕ್ಕ ಎಷ್ಟು ರೋಸಿ ಹೋಗಿದ್ದಳೆಂದರೆ 'ಹಾವಿನ ಹಲ್ಲ ಕಳೆದು ಹಾವ ನಾಡಿಸಬಲ್ಲಡೆ, ಹಾವಿನ ಸಂಗವೆ ಲೇಸು' ಎನ್ನುವಷ್ಟು.

ಅಕ್ಕ 'ಕಾಮಾರಿ' ಎಂದು ಗ್ರಹಿಸುವ ಬಸವಣ್ಣ ಮತ್ತೆ ಮತ್ತೆ ಅವಳನ್ನು ಪರೀಕ್ಷೆಗೆ ಒಡ್ಡುತ್ತಾ ಮನದಟ್ಟು ಮಾಡಿಕೊಳ್ಳುವಲ್ಲಿ ಹೆಣಗುತ್ತಾರೆ: **"ಅಂಗದಲ್ಲಿ ಲಿಂಗಸಂಗ, ಲಿಂಗದಲ್ಲಿ ಅಂಗಸಂಗವ ಮಾಡಿದೆನೆಂದರೆ ಸಂದುಭೇದವಳಿವ ಪರಿ ಎಂತು ಹೇಳಾ ? ಅಂಗದಲ್ಲಿ ಲಿಂಗಸಂಗವ ಮಾಡಿಹೆನೆಂದರೆ ಮುಂದುಗೆಡಿಸಿ ಕಾಡುವನು ಶಿವನು. ಕಾಮವೆಂಬ ಬಯಕೆಯಲ್ಲಿ ಅಳಲಿಸುವ ಬಳಲಿಸುವ ಶಿವನು. ಲಿಂಗದಲ್ಲಿ ಅಂಗವ ತಂದು ನಿಕ್ಷೇಪಿಸಿಹೆನೆಂದರೆ, ಅಂಗದಿಂದಲತ್ತತ್ತಲೋಸರಿಸಿ ಓಡುವನಯ್ಯಾ ಶಿವನು ಹೆಣ್ಣು ಗಂಡಾದರೆ ಸಂಗಕ್ಕೆ ಒಲಿವನು ಕೇಳಾ ಶಿವನು. ಕೂಡಲಸಂಗಮದೇವರ ಬೆರಸುವರೆ ಭಿನ್ನವಿಲ್ಲದೆ ಕಲಿಯಾಗಬೇಕು ಕೇಳಾ ಅವ್ವಾ".**

ಬಸವಣ್ಣನವರು ಹೇಳುವ ಹೆಣ್ಣು ಗಂಡಾದರೆ ಶಿವ ಸಂಗಕ್ಕೆ ಒಲಿವನು ಎಂಬ ಮಾತು ಒಟ್ಟು ಸ್ತ್ರೀ–ಪುರುಷ ಲೈಂಗಿಕ ಸಂಬಂಧಗಳನ್ನು ನಿರ್ದೇಶಿಸುತ್ತದೆ. ಒಬ್ಬ ಹೆಣ್ಣು ಮಾತ್ರ ಪುರುಷನೊಂದಿಗೆ ಬೆಳೆಸುವ ದೇಹದ ಸಂಬಂಧ ಸಮಾಜ ಒಪ್ಪಿತವಾದದ್ದು. ಇಂಥ ಸಂಬಂಧ ಲೌಕಿಕದ್ದು. ಅಕ್ಕ ಹೆಣ್ತನವನ್ನು ಕಳೆದುಕೊಂಡಾಗ ಮಾತ್ರ ಶಿವ ಒಲಿಯುತ್ತಾನೆ ಎಂಬುದು ಆಕೆ ತನ್ನ ಕಾಮನೆಗಳನ್ನು ಇಲ್ಲವಾಗಿಸಿಕೊಂಡಾಗ ಮಾತ್ರ ಸಾಧ್ಯ ಎಂಬುದನ್ನು ಸೂಚಿಸುತ್ತದೆ. ಗಂಡು–ಗಂಡಿನ ನಡುವೆ ಕಾಮವಿರಲಾರದು, ಹಾಗಾಗಿ ನೀನು ಗಂಡಾಗಿ ಕಾಮವನ್ನಳಿದರೆ ಶಿವನೊಲಿಯುತ್ತಾನೆಂಬ ತಿಳಿವನ್ನು ಬಸವಣ್ಣ ಮೂಡಿಸುತ್ತಾರೆ. ತಾನು ಸ್ತ್ರೀಯಾಗಿ ಕಾಮಿಸುವ ಗುಣ ಕಳೆದುಕೊಂಡು ಭಿನ್ನವಿಲ್ಲದೆ ಕಲಿಯಾಗಬೇಕು ಎಂಬ ಅರಿವನ್ನು ಬಸವಣ್ಣ ಅಕ್ಕನಿಗೆ ಮೂಡಿಸುವುದು ಇಲ್ಲಿದೆ. ಬಸವಣ್ಣನವರ ಈ ಮಾತುಗಳು ಲೌಕಿಕ ಸಂಬಂಧವನ್ನು ಕಳಚಿ ಅಲೌಕಿಕ ಸಂಬಂಧಗಳನ್ನು ಸಾಧಿಸುವ ಬಗೆಯನ್ನು ಅಕ್ಕನಿಗೆ ತಿಳಿಸುವಲ್ಲಿ ದುಡಿಯುತ್ತವೆ.

ಇದಕ್ಕೆ ಅಕ್ಕ ಬಸವಣ್ಣನವರಲ್ಲಿ ಬಿನ್ನೈಸಿಕೊಳ್ಳುತ್ತಾಳೆ :

"ಕಾಮನ ಗೆಲಿದೆನಯ್ಯಾ ಬಸವಣ್ಣಾ, ನಿನ್ನ ದಯದಿಂದ, ಸೋಮಧರನ
ಹಿಡಿತಪ್ಪೆನಯ್ಯಾ ಬಸವಣ್ಣಾ, ನಿನ್ನದಯದಿಂದ, ನಾಮದಲ್ಲಿ ಹೆಣ್ಣು
ರೂಪಲ್ಲದೆ, ಭಾವಿಸಲು ಗಂಡುರೂಪು ನೋಡಾ ಬಸವಣ್ಣಾ, ನಿನ್ನ
ದಯದಿಂದ, ಅತಿ ಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ ಕೂಡಿ,
ಎರಡಱಿಯದೆ ಮಱಿೆದೆನಯ್ಯಾ ಬಸವಣ್ಣ ನಿನ್ನ ದಯದಿಂದ"

ಹೀಗೆ ತಾನು ಕಾಮಾರಿ ಎಂಬುದನ್ನು ಬಗೆಬಗೆಯಲ್ಲಿ ಬಸವಣ್ಣನವರಿಗೆ ಮನದಟ್ಟು ಮಾಡಿಸುವ ಕೆಲಸವನ್ನು ಅಕ್ಕ ಮಾಡುತ್ತಾಳೆ.

ಬಸವಣ್ಣನವರಿಗೆ ಅಕ್ಕನ ಕನ್ನೆತನ ಪ್ರಶ್ನೆಯಾಗಿ ಕಾಡುತ್ತದೆ. ಕನ್ನೆತನವನ್ನು ಕಳೆದುಕೊಳ್ಳದೇ ಇದ್ದ ಅಕ್ಕ ಶಿವನಿಗೆ ಒಲಿಯಲು ಸಾಧ್ಯ ಎಂಬ ನಿಲವು ಕಾಡಿದಂತಿದೆ :

"ಹೆಂಗೂಸಿನಂಗವ ನೋಡಿದರೆ, ಪುರಾತನರು ।
ಬಾಲತನದಂಗವ ನೋಡಿರೆ, ಪುರಾತನರು ।
ಬ್ರಹ್ಮವನಾಚರಿಸಿ ತನ್ನ ಮಱಿೆದಿಪ್ಪುದ ನೋಡಿರೆ, ಲಿಂಗವಂತರು ।
ತನ್ನಲ್ಲಿ ತಾನು ನಿಶ್ಚಯವಾಗಿ, ಭಾಷೆ ಬೀಸರವೋಗದೆ ಇಪ್ಪ ಇರವು, ಕೂಡಲ ಸಂಗಮದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು".

ಬೀಸರವೋಗದ ಎಂಬುದಕ್ಕೆ ಮೀಸಲಳಿಯದ ಎಂಬರ್ಥವಿದೆ. ಕನ್ನೆತನವನ್ನುಳಿಸಿಕೊಂಡ, ದೇಹದ ಮೇಲಿನ ಅಭಿಮಾನವನ್ನು ಕಳೆದುಕೊಂಡು ಮಗುವಿನಂತಿರುವ ಅಕ್ಕ ಶಿವನಲ್ಲಿ ತನ್ನ ಇರವನ್ನು ಹೊಂದುತ್ತಾಳೆ ಎಂಬುದು

ಬಸವಣ್ಣನವರ ನಿಲವು. ಬಸವಣ್ಣನವರ ಅನುಮಾನಗಳಿಗೆ ಅಕ್ಕ ತನ್ನನ್ನು ಸಮರ್ಥಿಸಿಕೊಳ್ಳುವಂಥ ಹಲವು ವಚನಗಳು ಕಾಣಬರುತ್ತದೆ. ಎಷ್ಟರ ಮಟ್ಟಿಗೆ ಎಂದರೆ **"ಬಸವಣ್ಣ ಮೆಚ್ಚಲೊಗತನವ ಮಾಡುವೆ. ಚೆನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನವಧರಿಸಿ"** ಎಂದು ಪ್ರಮಾಣ ಮಾಡುವವರೆಗೆ.

ಬಸವಣ್ಣ ಮತ್ತು ಅಕ್ಕನ ನಡುವಿನ ಈ ಸಂವಾದವನ್ನು ಗಮನಿಸಿದಾಗ ಹನ್ನೆರಡನೇ ಶತಮಾನದಲ್ಲಿ ಕೂಡ ಆಧ್ಯಾತ್ಮದ ಸ್ವಾತಂತ್ರ್ಯ ಸ್ತ್ರೀಯರಿಗೆ ಅಷ್ಟು ಸುಲಭವಿರಲಿಲ್ಲ. ಏಕೆಂದರೆ ಅವಳು ಇದ್ದಂತೆ ಇದ್ದ ಹಾಗೆ ಸಮಾಜದಲ್ಲಿ ಒಂದಾಗಲು ಸಾಧ್ಯವಿರಲಿಲ್ಲ. ತನ್ನನ್ನು ತಾನು ಸಾಬೀತು ಪಡಿಸಲು ಸಮಾಜ ಒಡ್ಡಿದ ಪರೀಕ್ಷೆಗಳಲ್ಲಿ ಗೆದ್ದು 'ಆಗುವಿಕೆ'ಗೆ ಒಳಪಡಬೇಕಿತ್ತು. ಒಂದು ರೀತಿಯಲ್ಲಿದು ಸಾಮಾಜಿಕ ಒಳಗೊಳ್ಳುವಿಕೆಯ ನೀತಿ (Social inclusive policy) ಈ ಹಿನ್ನಲೆಯಲ್ಲಿ ಅಕ್ಕ **"ಬಸವಣ್ಣನ ಮನೆಯ ಮಗಳಾಗಿ, ಚೆನ್ನ ಬಸವಣ್ಣನ ತೊತ್ತಿನ ಮಗಳಾಗಿ..."** ಹೀಗೆ 'ಆಗುವ' ಪ್ರಕ್ರಿಯೆಯಲ್ಲಿ ಭಾಗಿಯಾಗಬೇಕಾದ ಅನಿವಾರ್ಯತೆಯನ್ನು ಎದುರಿಸಿದಂತಿದೆ.

ಅಕ್ಕನಿಗೆ ಎದುರಾದ ಕನ್ನೆತನದ ಪ್ರಶ್ನೆ, ಕಾಮಾರಿಯೇ ಅಲ್ಲವೇ ಎಂಬ ಪ್ರಶ್ನೆಗಳು ಕೇವಲ ಆಕೆ ಅಧ್ಯಾತ್ಮದ ಹಾದಿ. ಬಯಸಿದ ಹೆಣ್ಣಿನ ಕಾರಣಕ್ಕೆ ಎದುರಾದಂಥವು ಎಂದೆನಿಸುವುದಿಲ್ಲ. ಜೈನ ಕೌಶಿಕನನ್ನು ಅಕ್ಕ ವಿವಾಹವಾಗಿ ಉಂಟಾದ ಧರ್ಮದ ಮೀರುವಿಕೆ ಇದರಲ್ಲಿ ಅಂತರ್ಗತವಾಗಿದೆ. ಇದು ಆ ಕಾಲದ ಅನೇಕರನ್ನು ಕಾಡಿದೆ. ಅಕ್ಕಮಹಾದೇವಿಯ ಜೀವನ ವಿವರಗಳು ನಮಗೆ ಮೊದಲು ಕಾಣುವುದು ಹರಿಹರಕವಿಯ 'ಅಕ್ಕಮಹಾದೇವಿರಗಳೆ'ಯಲ್ಲಿ ಹರಿಹರ, ಅಕ್ಕಮಹಾದೇವಿ ಮತ್ತು ಕೌಶಿಕನ ನಡುವೆ ನಡೆದ ಸಂಭೋಗದ ವಿವರಗಳನ್ನು ಕೊಡುತ್ತಾನೆ. ಈ ಘಟನೆಯ ನಂತರ ಕಲ್ಯಾಣದತ್ತ ಅಕ್ಕ ಹೊರಡುತ್ತಾಳೆ. ಶಿವನನ್ನು ನಂಬದ ಒಪ್ಪದ ಈ 'ಭವಿ'ಯ ಜೊತೆಗಿನ ಅಕ್ಕಳ ಸಂಬಂಧವನ್ನು ಮುಂದಿನವರಿಗೆ ಜೀರ್ಣಿಸಿಕೊಳ್ಳಲಾಗಿಲ್ಲ. ಹೀಗಾಗಿ ಅಕ್ಕನನ್ನು ಪವಿತ್ರವಾಗಿರಿಸುವ ಕಾಯಕಕ್ಕೆ ಕೈಹಾಕಿದಂತೆ ತೋರುತ್ತದೆ. ಪರಿಣಾಮವಾಗಿ ಅಂಥ ಪ್ರಶ್ನೆಗಳನ್ನು ಅಕ್ಕ ಎದುರಿಸಬೇಕಾಗುತ್ತದೆ, ತನ್ನನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಕಿನ್ನರಿಬೊಮ್ಮಯ್ಯನೆದುರು ತನ್ನ ದೇಹವನ್ನು ಪಣಕ್ಕಿಟ್ಟು ಕನ್ನೆತನ ನಾಶವಾಗಿಲ್ಲ ಎಂಬುದರ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಇಂಥ ಪರೀಕ್ಷೆಯ ಮೂಲಕ ಅವಳು ಪರಿಶುದ್ಧಳು, ಕಾಮಾರಿ ಎಂದು ಸಮಾಜಕ್ಕೆ ತೋರಿಸುವ ಅನಿವಾರ್ಯತೆ

ಶೂನ್ಯಸಂಪಾದನಕಾರರಿಗೆ ಇದ್ದಂತೆ ತೋರುತ್ತದೆ. ಹಲಗೆಯಾರ್ಯನ ಶೂನ್ಯಸಂಪಾದನೆಯಲ್ಲಿ ಮಾತ್ರ ಅಕ್ಕ ಮತ್ತು ಕಿನ್ನರಿ ಬೊಮ್ಮಯ್ಯನ ಪ್ರಸಂಗ ಬಹಳ ವಿವರವಾಗಿ ಕಾಣಿಸಿಕೊಳ್ಳುತ್ತದೆ. ಈ ಪ್ರಸಂಗವನ್ನು ಕುರಿತು ಆಧುನಿಕ ವಿದ್ವಾಂಸರನೇಕರು ಪ್ರಸ್ತಾಪವೇ ಮಾಡದೆ ಇರುವುದೂ ಇದೆ. ಅಕ್ಕನ ಪಾವಿತ್ರ್ಯತೆಗೆ ಚ್ಯುತಿ ಬರುವಂಥವನ್ನು ಮಾತನಾಡಬಾರದೆಂಬ ನಿಲವಿಗೆ ಬದ್ಧವಾದಂತಿದೆ.

ಆರ್ಥಿಕ ನೀತಿಯ ಜಿಜ್ಞಾಸೆ

ಆರ್ಥಿಕ ನೀತಿಯ ಜಿಜ್ಞಾಸೆಯು ಬಸವಣ್ಣ ಮತ್ತು ವಚನಕಾರ್ತಿಯರ ಸಂವಾದದ ನೆಲೆಗಳಲ್ಲಿ ಒಂದು. ಅಗತ್ಯಕ್ಕಿಂತ ಹೆಚ್ಚಿನದನ್ನು ಅಪೇಕ್ಷಿಸದ ಅನಾಯಾಸವಾಗಿ ಬಂದ ಸಂಪತ್ತನ್ನು ನಿರಾಕರಿಸುವ ಮೂಲಕ ಶರಣನ ಸತ್ಯಶುದ್ಧ ಕಾಯಕವನ್ನು ಒತ್ತಿ ಹೇಳುವ ಉದ್ದೇಶ ವಚನಗಳಲ್ಲಿವೆ. ಈ ಸಂದರ್ಭವನ್ನು ಮೋಳಿಗೆ ಮಾರಯ್ಯನ ಪತ್ನಿ ಮೋಳಿಗೆ ಮಹಾದೇವಿಯ ಸಂದರ್ಭದಲ್ಲಿ ಕಾಣಬಹುದು.

ಮೋಳಿಗೆ ಮಹಾದೇವಿ ಪಾದಾರ್ಚನೆಗೆ ನೀರನ್ನು ಕೊಟ್ಟು ಲಿಂಗಾರ್ಚನೆಯನ್ನು ಮಾಡಿಸಿ ಗೃಹದಲ್ಲಿದ್ದ ಪದಾರ್ಥಗಳನ್ನು ನೀಡಿ ಲಿಂಗಾರ್ಪಿತ ಮಾಡಿ ಬರುವಾಗ ಎರಡು ಜಾಳಿಗೆ ಹೊನ್ನನ್ನು ಬಸವಣ್ಣನವರು ಮಜ್ಜನ ಸಾಲೆಯ ಮರೆಯಲ್ಲಿರಿಸಿ ಬರುತ್ತಾರೆ. ಅದನ್ನು ನೋಡಿದ ಮಾರಯ್ಯ ಸತಿಯನ್ನು ಕೇಳಿದಾಗ ಭಕ್ತರೊಬ್ಬರು ಬಂದು ಹೋದದ್ದನ್ನು ತಿಳಿಸುತ್ತಾಳೆ. ಬಸವಣ್ಣನವರು ಗರ್ವದಿಂದ ಜಾಳಿಗೆ ಹೊನ್ನನ್ನು ಇಟ್ಟು ಹೋಗಿದ್ದಾರೆಂದು ಕನಲುತ್ತಾನೆ. ಬಸವಣ್ಣನ ಗೃಹಕ್ಕೆ ಹೋಗಿ 'ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ' ರನ್ನು ಬರಮಾಡಿಕೊಂಡು ದಾಸೋಹ ಮಾಡಿ ಸುವರ್ಣದ ದಂಡಗಳನ್ನು ಬಂದ ಶರಣರಿಗೆ ಕೊಡುತ್ತಾರೆ. ಅದನ್ನು ಪಡೆದ ಭಕ್ತರು ಬಸವಣ್ಣನವರ ಗೃಹಕ್ಕೆ ಹೋದಾಗ ಕೇಳುತ್ತಾರೆ. ಮಾರಯ್ಯ ಕೊಟ್ಟಿದ್ದಾಗಿ ತಿಳಿಸಿದಾಗ **"ಬಸವರಾಜ ದೇವರು ನಿರಾಶಾ ಮಹಾತ್ಮರೆಂದರಿಯದೆ ಇರ್ದೆನಲ್ಲಾ"** ಎಂದು ಆ ದಂಪತಿಗಳು ಕುರಿತು ನುಡಿಯುತ್ತಾರೆ.

> "ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾರಿಂಗಳ
> ನಡುವುದಯ್ಯಾ? ನಿಧಾನ ತಪ್ಪಿಬಂದರೆ ಒಲ್ಲೆನೆಂಬವರಿಲ್ಲ
> ಪ್ರಮಾದವಶ ಬಂದರೆ ಹುಸಿಯನೆಂಬವರಲ್ಲ. ನಿರಾಶೆ
> ನಿರ್ಭಯ ಕೂಡಲಸಂಗಮದೇವಾ, ನೀನೊಲಿದ ಶರಣಂಗಲ್ಲದಿಲ್ಲ

ಸಂಪತ್ತು ಅನಾಯಾಸವಾಗಿ ಬಂದರೆ ಬೇಡ ಎನ್ನದವರಿಲ್ಲ. ಹೀಗಿರುವಾಗ ಹಣವನ್ನು ಕುರಿತ ಈ ದಂಪತಿಗಳ ನಿರಾಶೆಯು, ನಿರ್ಭಯ ವ್ಯಕ್ತಿತ್ವ ಶಿವನನ್ನು

ಒಲಿದ ಶರಣರಿಗಲ್ಲದೆ ಅನ್ಯರಿಗಿರಲು ಸಾಧ್ಯವಿಲ್ಲ ಎನ್ನುತ್ತಾರೆ. ಇಂಥದೊಂದು ಆರ್ಥಿಕ ನೀತಿಯನ್ನು ರೂಢಿಸಿಕೊಂಡ ಶರಣರಲ್ಲಿ ಮೋಳಿಗೆ ಮಾರಯ್ಯ–ಮಹಾದೇವಿ ದಂಪತಿಗಳು ಆದರ್ಶಪ್ರಾಯರಾಗಿ ಕಾಣುತ್ತಾರೆ. ಬಸವಣ್ಣ ಅವರನ್ನು ಮತ್ತೂ ಕೊಂಡಾಡುತ್ತಾರೆ.

"ಮನೆಯ ನೋಡಾ ಬಡವರು, ಮನವ ನೋಡಾ ಧೀರರು ! ಸೋಂಕಿನಲಿ ಶುಚಿಗಳು, ಸರ್ವಾಂಗ ಧೀರರು ! ಪಸರವ ನೋಡಿದಡೇನೂ ಇಲ್ಲ. ಸಮಯೋಚಿತಕ್ಕೆ ಸಕಲ ಪದಾರ್ಥ ಬಂದಿಹುದು. ಕೂಡಲ ಸಂಗಮದೇವಾ, ನಿಮ್ಮ ಶರಣ ಸರ್ವಾಂಗಧೀರ ಮೋಳಿಗೆಯ ಮಾರಿತಂದೆ".

ಬಸವಣ್ಣ 'ಬಹುವಚನ'ದಲ್ಲಿ ಹೇಳುವ ಈ ವಚನ ಮಹಾದೇವಿಯ ವ್ಯಕ್ತಿತ್ವವನ್ನೂ ಪ್ರಶಂಸಿಸಿದಂತಿದೆ. ಬಡತನದಲ್ಲಿಯೂ ಮನಸ್ಸನ್ನು ಶುದ್ಧವಾಗಿಟ್ಟುಕೊಂಡ ಮನೋಧರ್ಮವನ್ನು ಬಸವಣ್ಣ ಕೊಂಡಾಡಿದ್ದಾರೆ. ಜಾಗತೀಕರಣದ ಹೊತ್ತಿನಲ್ಲಿ ಆರ್ಥಿಕವಾಗಿ ಸಂಪತ್ತಿನ ಕ್ರೋಢೀಕರಣ ಮಾಡುತ್ತ ಭೋಗಸಂಸ್ಕೃತಿಯ ಬದುಕನ್ನು ಅಪೇಕ್ಷಿಸುವ ಪ್ರಸ್ತುತ ವಾತಾವರಣದಲ್ಲಿ ಮೋಳಿಗೆ ಮಹಾದೇವಿಯ ವ್ಯಕ್ತಿತ್ವ ಮಾದರಿಯದಾಗಿದೆ.

ಆರ್ಥಿಕತೆಯ ನಿರ್ಮೋಹ : ನಿರಾಕರಣೆ

ಸತ್ಯ ಶುದ್ಧ ಕಾಯಕಕ್ಕೆ ಪಕ್ಕಾದ ಮನ ಒಮ್ಮನದಿಂದಿರಬೇಕು. ಆಸೆಯನ್ನು ಗೆಲ್ಲಬೇಕು ಎಂಬ ತಾತ್ವಿಕ ಬದ್ಧತೆಯ ಆಯ್ದಕ್ಕಿ ಲಕ್ಕಮ್ಮ ಪತಿಯನ್ನು ತಿದ್ದುವುದರೊಂದಿಗೆ ಇವರನ್ನು ಪರೀಕ್ಷಿಸುವ ಬಸವಣ್ಣನವರನ್ನು ಜ್ಞಾನಿಯನ್ನಾಗಿ ಮಾರ್ಪಡಿಸುವ ವ್ಯಕ್ತಿತ್ವದವಳು. ಕಾಯಕ ಮರೆತಿದ್ದ ಮಾರಯ್ಯನಿಗೆ ಲಕ್ಕಮ್ಮ **"ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು, ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಬೇಗ ಹೋಗು ಮಾರಯ್ಯಾ"** ಎನ್ನುತ್ತಾಳೆ. ಬಸವಣ್ಣನವರ ಅಂಗಳಕ್ಕೆ ಹೋಗಿ ಬಿದ್ದಿದ್ದ ಅಕ್ಕಿಯನ್ನು ಹೆಚ್ಚಾಗಿ ತಂದಾಗ ಲಕ್ಕಮ್ಮ 'ಎಂದಿನಂದವೆ ಸಾಕು, ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ' ಎಂದು ಹೀಗೆ ಹೇಳುತ್ತಾಳೆ; **"ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ? ... ಈಸಕ್ಕಿಯಾಕೆ ನಿಮಗೇಕೆ?"** ಆಗವಳಿಗೆ ಬಸವಣ್ಣನವರು ತಮ್ಮನ್ನು ಪರೀಕ್ಷಿಸಲು ಮಾಡಿರುವ ಸಂಚು ಇರಬಹುದೆಂಬ ಅನುಮಾನ ಬರುತ್ತದೆ.

"ಮತ್ತಂ ಒಮ್ಮನವ ಮೀಟಿ ಇಮ್ಮನದಲ್ಲಿ ತಂದಿರಿ. ಇದು ನಿಮ್ಮ ಮನವೋ? ಬಸವಣ್ಣನ ಅನುಮಾನದ ಚಿತ್ತವೊ? ಈ ಮಾತು ಮಾರಯ್ಯಾ ಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲದ ಬೋನ ಅಲ್ಲಿಯೆ ಸುರಿದು ಬನ್ನಿ ಮಾರಯ್ಯಾ".

ಆಯ್ದಕ್ಕಿ ಲಕ್ಕಮ್ಮ ಮತ್ತು ಬಸವಣ್ಣನವರ ನಡುವಿನ ಸಂವಾದ ಪರೋಕ್ಷ ನೆಲೆಯಲ್ಲಿ ಜರುಗುತ್ತದೆ. **"ಮನೆ ನೋಡಾ ಬಡವರು, ಮನನೋಡಾ ಸಂಪನ್ನರು, ಧನ ನೋಡಾ ಬಡವರು, ಘನ ಮನ ಸಂಪನ್ನರು"** ಎಂದು ಹೇಳುವುದಲ್ಲದೆ ತಮ್ಮ ಪರೀಕ್ಷಿಸುವ ಗುಣಕ್ಕೆ ತಾವೇ ನಾಚಿಕೊಳ್ಳುತ್ತಾರೆ.

"ನಾ ನಡೆವುದೆಲ್ಲಾ ಅನಾಚಾರ, ನಾ ನುಡಿವುದೆಲ್ಲಾ ಅವಿಚಾರ. ನಡೆನುಡಿ ಶುದ್ಧವಿಲ್ಲದ ಅಪವಿತ್ರನ ತಂದು, ನಿಮ್ಮೊಕ್ಕುದನಿಕ್ಕಿ ಸಲಹಿದಿರಾಗಿ ಎನಗಿನ್ನಾವ ಭಯವೂ ಇಲ್ಲ. ಕೂಡಲಸಂಗಮ ದೇವರು ಸಾಕ್ಷಿಯಾಗಿ, ಆಯ್ದಕ್ಕಿಯ ಮಾರಯ್ಯನ ಮನೆಯ ಮಗನಾನು".

ಮಾರಯ್ಯ ದಂಪತಿಗಳ ಆರ್ಥಿಕ ಬದ್ಧತೆಯ ಪರೀಕ್ಷೆಗೆ ತೊಡಗಿ ತಾವೇ ಅರಿವನ್ನು ತಂದುಕೊಳ್ಳುವ– ಇಂಥದೊಂದು ಬದಲಾವಣೆಯ ಪ್ರಕ್ರಿಯೆಯನ್ನು ಈ ಸಂವಾದದಲ್ಲಿ ಕಾಣಬಹುದು.

ಅರ್ಪಣಾ ಮನೋಭಾವ

ತಾನು, ತನ್ನದು ಎಂಬ ವ್ಯಾಮೋಹವನ್ನು ಬಿಟ್ಟು ಬೇರೆಯವರಿಗೆ ತನ್ನದೆಲ್ಲವನ್ನು ಅರ್ಪಿಸಬೇಕೆಂಬ ಮನೋಧರ್ಮದ ಜಿಜ್ಞಾಸೆ ಬಸವಣ್ಣ ಮತ್ತು ಅವರ ಪತ್ನಿ ನೀಲಾಂಬಿಕೆಯ ಸಂದರ್ಭದಲ್ಲಿದೆ. ಪತ್ನಿಯು ಪತಿಯನ್ನನುಸರಿಸುವವಳಾಗಬೇಕೆಂಬ ನಿಲವು ಇಲ್ಲಿಯದು. ಕಳ್ಳನೊಬ್ಬ ಬಸವಣ್ಣನವರ ಮನೆಗೆ ಬಂದಾಗ ಪತ್ನಿ ಒಡವೆಗಳಿಗಾಗಿ ಕಳವಳ ಪಡುವಾಗ ಬಸವಣ್ಣನವರ ನುಡಿ ಹೀಗಿದೆ :

"ಒಡನಿರ್ದ ಸತಿಯೆಂದು ನಂಬಿದೆ. ಕೈವಿಡಿದ ಸಜ್ಜನ ಸತಿಯೆಂದು ನಂಬಿದೆ ನಿನ್ನ. ಅಯ್ಯೋ ನಮ್ಮಯ್ಯನ ಕೈನೊಂದಿತು. ಕಳೆದುಕೊಡಾ ಎಲೆ ಚಾಂಡಾಲಗಿತ್ತಿ, ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ ಕೂಡಲ ಸಂಗಯ್ಯನಲ್ಲದಾರೂ ಇಲ್ಲ."

ಸತಿಯನ್ನು ಕುರಿತ ಅನುಮಾನದ ನೆಲೆ

ಬಸವಣ್ಣ ಸಂಗಮವನ್ನು ತಲುಪಿದಾಗ ನೀಲಾಂಬಿಕೆಯನ್ನು ಕರೆತರಲು ಹಡಪದ ಅಪ್ಪಣ್ಣನನ್ನು ಕಳಿಸುತ್ತಾರೆ. ಆಗ ನೀಲಾಂಬಿಕೆಯ ಬೇಗುದಿ ಹೀಗಿದೆ :

"ನಾನಾರ ಸಾರುವೆನೆಂದು ಚಿಂತಿಸಲೇಕಯ್ಯಾ?
"ನಾನಾರ ಹೊದ್ದುವೆನೆಂದು ಭ್ರಮೆಬಡಲೇಕಯ್ಯಾ?
"ನಾನಾರ ಇರವನರಿವೆನೆಂದು ಪ್ರಳಾಪಿಸಲೇತಕ್ಕಯ್ಯಾ?
ಪರಿಣಾಮ ಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ
ಬೆಳಗಿದ ಬಳಿಕ – ಸಂಗಯ್ಯನ ಹಂಗು ನಮಗೇತಕ್ಕಯ್ಯಾ ಅಪ್ಪಣ್ಣ?"

ಪತಿ–ಪತ್ನಿಯರ ದಾಂಪತ್ಯದ ಬಿರುಕನ್ನು ತೋರುವಂತಿದೆ ಈ ವಚನ. ಬಸವಣ್ಣನವರು ದೈಹಿಕವಾಗಿ ದೂರವಾದರೂ ಬಸವನ ರೂಪು ಕರಸ್ಥಲದಲ್ಲಿ ಬೆಳಗಿದೆ ಎಂಬುದಾಗಿ ತಿಳಿಸುತ್ತಾಳೆ. ನಾನು, ನನ್ನದು ಎಂಬ ಮಮಕಾರ ಕಳೆದುಕೊಂಡ ನಿಲವು ನೀಲಾಂಬಿಕೆಯದು.

ಕುರುಹು ಕಳೆದ ಸ್ಥಿತಿ. ಪತಿ–ಪತ್ನಿ ಸಂಬಂಧ ದೂರಾಗಿ ಇಹದ ಉಪಾಧಿಗಳನ್ನು ತೊರೆದ ಸ್ಥಿತಿ ಈಕೆಯದು :

"ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯದ ಕುಳವ ಹರಿದು ಬಸವಂಗೆ ಶಿಶುವಾದೆನು
ಬಸವನೆನ್ನ ಶಿಶುವಾದನು
ಪ್ರಮಥರು ಪುರಾತನರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಬ್ಬವ ಮೀರದೆ ಬಸವನೊಳಗಾನಡಗಿದೆ."

ದಾಂಪತ್ಯದ ಬಿರುಕುಗಳ ಕುರಿತ ಜಿಜ್ಞಾಸೆ

ಬಸವಣ್ಣನವರ ಪತ್ನಿಯಾದ ಗಂಗಾಂಬಿಕೆಯ ವಚನ ಪತಿ–ಪತ್ನಿಯರ ದಾಂಪತ್ಯ ಬಿರುಕುಗಳನ್ನು, ಅನ್ಯೋನ್ಯತೆ ಇಲ್ಲದುದನ್ನು ದಾಖಲಿಸುತ್ತದೆ.

"ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು?
ಪ್ರತಿಜ್ಞೆಯ ಪತಿಕರದಲ್ಲಿ ಪೋಪದಿರೆ ಯಾತನೆಯಲ್ಲದೆ?
ಇವಳ ಲಿಂಗನಿಷ್ಠೆ ಇವಳಿಗೆ,
ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ
ಗಂಗಾಪ್ರಿಯ ಕೂಡಲಸಂಗಮದೇವಾ"

ಗಂಗಾಂಬಿಕೆ ತನ್ನ ನಿಷ್ಠೆ ಬಸವಣ್ಣನಲ್ಲಿದೆ ಎಂಬುದನ್ನು ವ್ಯಂಗ್ಯದ ನೆಲೆಯಲ್ಲಿ ಹೇಳಿದಂತಿದೆ. ಪತಿಯ ಆಜ್ಞೆಯನ್ನು ಆಚರಿಸುವ ಸತಿಗೇಕೆ ಪ್ರತಿಜ್ಞೆ? ಎಂಬ ಮಾತು ಇದನ್ನು ಧ್ವನಿಸುತ್ತದೆ. ಆಕೆಯ ಮತ್ತೊಂದು ವಚನ ಹೀಗಿದೆ:

"ಲಿಂಗ ಕುಸುಮಗಳೆನ್ನಾಚಾರಲಿಂಗಕ್ಕಿಡಿಯೆ ಚೆನ್ನ
ಲಿಂಗನಸವದಂತರಂಗವಸನ ತರಿಸಿದೆಯೆ ಚೆನ್ನ
ಲಿಂಗದರ್ಚನೆಗುದಕವ ತರ ಪೋದೆಯೆ ಚೆನ್ನ
ಲಿಂಗ ನಿಮಿತ್ತ ಕುಸುಮಾರಾಮ ವಿರಚಿಸ ಹೋದೆಯೆ ಚೆನ್ನ
ಬಸವಯ್ಯನಾಚರಣೆ ಸೊಗಸಾಗದಾಗಿ ಹೋದೆಯೆ
ಗಂಗಾಪ್ರಿಯ ಕೂಡಲಸಂಗ ಚೆನ್ನ"

ಬಸವಣ್ಣನ ಆಜ್ಞಾ ಪ್ರವೃತ್ತಿ, ಆಚರಣೆ, ನಡವಳಿಕೆ ಗಂಗಾಂಬಿಕೆಗೆ ಅಸಮಾಧಾನವನ್ನುಂಟು ಮಾಡಿರುವ ಸಾಧ್ಯತೆಯನ್ನು ಈ ಮೇಲಿನ ವಚನ ತೆರೆದಿಡುತ್ತದೆ.

ವಿಧವಾ ವಿವಾಹದ ಬಗೆಗಿನ ನೆಲೆ

ವಿಧವಾವಿವಾಹ ಬಸವಣ್ಣನವರಿಗೆ ಒಪ್ಪಿತವಲ್ಲದ ವಿಷಯ. ಅವರ ಪತ್ನಿಯೂ ವಚನಕಾರ್ತಿಯೂ ಆಗಿರುವ ನೀಲಾಂಬಿಕೆಯ ಮತ್ತು ಬಸವಣ್ಣನವರಿಬ್ಬರ ವಚನಗಳಲ್ಲಿಯೂ ಈ ಬಗ್ಗೆ ಪ್ರಸ್ತಾಪವಿದೆ. ಬಸವಣ್ಣನವರ ವಚನ :

"ಏನನೋದಿ, ಏನಕೇಳಿ, ಏನ ಮಾಡಿಯೂ ಫಲವೇನು,
ನಿಮ್ಮವರೊಲಿಯದನ್ನಕ್ಕ?
ಶಿವಶಿವ, ಮಹಾದೇವಾ,
ಬಾಳಿಲ್ಲದವಳ ಓಲೆಯಂತಾಯಿತ್ತೆನಗೆ."

ಒಲಿಯುವ-ಒಲಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಫಲ ಕಾಣದ ಬಸವಣ್ಣನವರಿಗೆ ತಮ್ಮ ಬದುಕು 'ಬಾಳಿಲ್ಲದವಳ ಓಲೆಯಂತಾ'ಗುವುದು ದುಃಸ್ಥಿತಿಯನ್ನು ಸೂಚಿಸುತ್ತದೆ.

ನೀಲಾಂಬಿಕೆಯ ಒಂದು ವಚನದಲ್ಲಿ ಈ ಛಾಯೆಯಿದೆ. ಬಸವಣ್ಣ ಸಂಗಮದಲ್ಲಿ ಐಕ್ಯವಾಗುವ ಹಡಪದ ಅಪ್ಪಣ್ಣ ಮೊದಲು ಅವರ ಆದೇಶದಂತೆ ಕರೆತರಲು ನೀಲಾಂಬಿಕೆಯ ಬಳಿ ಬಂದಾಗ ಆಕೆ ಬಸವಣ್ಣನವರನ್ನುದ್ದೇಶಿಸಿ ಹೇಳುವ ವಚನ :

"ನಾನಾರ ಸಾರುವೆನೆಂದು ಚಿಂತಿಸಲೇತಕ್ಕಯ್ಯಾ ಬಸವಾ?
ನಾನಾರ ಹೊಂದುವೆನೆಂದು ಭ್ರಮೆಬಡಲೇತಕ್ಕಯ್ಯಾ ಬಸವಾ ?"

ಈ ಮಾತು ನೀಲಾಂಬಿಕೆಯ ಚಾರಿತ್ರ್ಯದ ಮೇಲಿನ ಅನುಮಾನವನ್ನು ಪತಿಯ ಮೇಲಿನ ಅವಳ ನಿಷ್ಠೆಯನ್ನು ಕುರಿತ ಬಸವಣ್ಣನವರ ಅನುಮಾನವನ್ನು ಪ್ರಶ್ನಿಸುತ್ತದೆ. ತಾವು ಐಕ್ಯವಾದನಂತರದ ನೀಲಾಂಬಿಕೆಯ ಬದುಕನ್ನು ಭ್ರಮಿಸುವ ಬಗೆಯನ್ನು ಈ ವಚನ ವಿಡಂಬಿಸುತ್ತದೆ.

ಮಾನವೀಯ ನೆಲೆಯ ಜಿಜ್ಞಾಸೆ

ಶರಣರಿಗೆ ಎಲ್ಲವನ್ನೂ ಅರ್ಪಿಸಬೇಕೆಂಬ ಬಸವಣ್ಣನವರ ತಿಳಿವಳಿಕೆ ಭಕ್ತಿಯ ಹೆಸರಿನಲ್ಲಿ ನಡೆದಿರಬಹುದಾದ ಅಚಾತುರ್ಯವಾಗಿ ಕಾಣುತ್ತದೆ. ಸಿರಿಯಾಳಸೆಟ್ಟಿ-ಚಂಗಳವ್ವೆಯರು ತಮ್ಮ ಏಳುವರ್ಷದ ಮಗ ಚೀಲಾಳನನ್ನು ಬಲಿಕೊಟ್ಟು ಅತಿಥಿಯನ್ನು ಸತ್ಕರಿಸಿದ ಸನ್ನಿವೇಶ ಇದಕ್ಕೆ ನಿದರ್ಶನ.

"ಪ್ರತ್ಯಕ್ಷವಾಗಿ ಸಿರಿಯಾಳಸೆಟ್ಟಿ ಚಂಗಳವ್ವೆಯ ಮನೆಗೆ ಬಂದು
ಅವರ ಮಗನ ಬೇಡುವಂತಲ್ಲ
ಸಂಗಮದೇವಾ, ನಿಮ್ಮ ಹೆಸರ ಚಿಕ್ಕ ಸಂಗಯ್ಯನಿದ್ದಾನೆ
ನೀನು ಜಂಗಮರೂಪಾಗಿ ಬಂದು, ಆತನ ಹಿಡಿದು
ಎನ್ನ ಮುಂದೆ ಹೆಡಗುಡಿಯ ಕಟ್ಟಿ, ಚನಿಖಂಡವ ಮಾಡಿ
ಬಾಣಸವ ಮಾಡುವಲ್ಲಿ,
ಎನ್ನ ಉದರದಲ್ಲಿ ಬಂದ ಪುತ್ರನೆಂದು ಮಾಯಕ್ಕೆ ನಾನು ಮರುಗಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ"

ಬಸವಣ್ಣನವರ ಇಂಥ ನಿಲವುಗಳು ಪತ್ನಿ ಮತ್ತು ವಚನಕಾರ್ತಿಯೂ ಆಗಿರುವ ನೀಲಾಂಬಿಕೆಗೆ ದುಃಖ ತರಿಸಿದಂತಿದೆ. 'ಏಕೆನ್ನ ಪುಟ್ಟಿಸಿದೆಯಯ್ಯ ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ' ಎಂಬಂಥ ಮಾತುಗಳು ಈ ಹಿನ್ನೆಲೆಯಲ್ಲಿ ಮೂಡಿರಬಹುದು.

ಪತ್ನಿಯನ್ನು ಮನೆಗೆ ಬಂದ ಅತಿಥಿಗಳಿಗೆ ಬಸವಣ್ಣ ಅರ್ಪಿಸಿ ಸೇವೆಗೈಯುತ್ತಿದ್ದರು ಎಂಬ ವಿಚಾರಕ್ಕೆ ಸಮೀಪವಾದ ವಚನ ಹೀಗಿದೆ :

"ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳೆಯ ಚೆಲುವೆ,
ಆಕೆಯನು ಸಂಗಮದೇವಾ, ನೀನು ಜಂಗಮರೂಪಾಗಿ ಬಂದು
ಎನ್ನ ಮುಂದೆ ಸಂಗವ ಮಾಡುತ್ತಿರಲು
ಎನ್ನೊಡನಿರ್ದ ಸತಿಯೆಂದು ಮಾಯಕ್ಕೆ ಮರುಗಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ"

ಬಸವಣ್ಣನವರ ಈ ನಡೆ ಅವರ ಪತ್ನಿ ನೀಲಾಂಬಿಕೆಗೆ ಇರಸು–ಮುರುಸು ಉಂಟುಮಾಡಿರುವ ಸಾಧ್ಯತೆ ಇದೆ. ಭೂಮಿಯಲ್ಲಿಯೇ ಚೆಲುವೆಯಾದ ತನ್ನ ಸತಿಯನ್ನು ಒಪ್ಪಿಸುವೆನೆಂಬ ಬಸವಣ್ಣನವರ ನಿಲವೂ ಪ್ರಶ್ನಾರ್ಹವೇ ಆಗಿ ಬಿಡುತ್ತದೆ.

ವೇಶ್ಯಾವೃತ್ತಿಯನ್ನು ಕುರಿತ ನಿಲವು

ಬಸವಣ್ಣನವರಿಗೆ ವೇಶ್ಯಾವೃತ್ತಿಯನ್ನು ಕುರಿತು ತೀವ್ರ ಅಸಮಾಧಾನವಿದೆ. ವೇಶ್ಯಾವೃತ್ತಿಯನ್ನು ಮಾಡುವ ಮಹಿಳೆಯರ ಪ್ರತಿನಿಧಿಯಂತೆ ವಚನಕಾರ್ತಿ ಸಂಕವ್ವೆ ಇದ್ದಾಳೆ. ವೇಶ್ಯಾವೃತ್ತಿಯನ್ನು ಕುರಿತಂತೆ ಬಸವಣ್ಣನವರ ಪ್ರತಿಕ್ರಿಯೆ ಇಂತಿದೆ :

"ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡರೆ
ಕೂಸಿಂಗಲ್ಲ ಬೊಜಗಂಗಲ್ಲ !
ಕೂಸನೊಮ್ಮೆ ಸಂತಯ್ಸುವಳು ಬೊಜಗನನೊಮ್ಮೆ ನೆರೆವಳು
ಧನದಾಸೆ ಬಿಡದು, ಕೂಡಲ ಸಂಗಮದೇವಾ"

ಧನದಾಸೆಗೆ ಒಳಗಾದ ವೇಶ್ಯೆ ತನ್ನ ಕಾಯಕದಲ್ಲಿ ನಿಷ್ಠೆಯನ್ನು ತೋರಲು ಅಸಮರ್ಥಳೆಂಬುದನ್ನು ಬಸವಣ್ಣ ಎಚ್ಚರಿಸುತ್ತಾರೆ. ಇಂಥ ಹಲವು ವಚನಗಳಿವೆ.

"ಸೂಳೆಯ ಮಗ ಮಾಳವ ಮಾಡಿದಡೆ
ತಾಯ ಹೆಸರಾಯಿತ್ತು, ತಂದೆಯ ಹೆಸರಿಲ್ಲ
ಕೂಡಲ ಸಂಗಮ ದೇವಾ"

"ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ 'ಅಯ್ಯಾ, ಅಯ್ಯಾ' ಎನಲಾರೆ
ಚೆನ್ನಯ್ಯನೆಮ್ಮಯ್ಯನು, ಚೆನ್ನಯ್ಯನ ಮಗ ನಾನು
ಕೂಡಲಸಂಗನ ಮಹಾಮನೆಯಲಿ
ಧರ್ಮಸಂತಾನಿ ಭಂಡಾರಿ ಬಸವಣ್ಣನು"

ವೇಶ್ಯೆಯ ಮಕ್ಕಳ ದುಸ್ಥಿತಿಯನ್ನು, ಅನಾಥ ಪ್ರಜ್ಞೆಯನ್ನು ಈ ವಚನ ತೆರೆದಿಡುತ್ತದೆ.

ಬಸವಣ್ಣನವರ ಅಕ್ಕ ಎನ್ನಲಾದ ನಾಗಲಾಂಬಿಕೆ ಕದಿರರೆಮ್ಮವ್ವೆ, ಗಜೇಶಮಸಣಯ್ಯನ ಪುಣ್ಯಸ್ತ್ರೀ, ದುಗ್ಗಳೆ ಮೊದಲಾದ ವಚನಕಾರ್ತಿಯರು ತಮ್ಮ ವಚನಗಳಲ್ಲಿ ಬಸವಣ್ಣನವರನ್ನು ಸ್ಮರಿಸಿದ್ದಾರೆ. ಕುಲ–ಛಲ–ತನು–ಮನ ನೆನಹು–ಭಾವ ಸೂತಕಗಳನ್ನು ಕಳೆದಾತ ಬಸವಣ್ಣ ಎಂಬ ವಿಚಾರ ಅವರ ವಚನಗಳ ಸಾರವಾಗಿದೆ. ಭಕ್ತಿಗೆ, ಗುರುತ್ವಕ್ಕೆ ಬಸವಣ್ಣನವರನ್ನು ಮಾದರಿಯನ್ನಾಗಿ ಸ್ವೀಕರಿಸಿದ್ದರೆಂಬುದರಲ್ಲಿ ಸಂಶಯವಿಲ್ಲ. ನೇರ ಸಂವಾದದ ಸುಳಿವು ದೊರೆಯದಿದ್ದರೂ ಈ ವಚನಕಾರ್ತಿಯರ ವಚನಗಳಲ್ಲಿ ವ್ಯಕ್ತವಾಗಿರುವ ಸ್ತುತಿರೂಪದ ಭಕ್ತಿಭಾವಗಳು ಬಸವಣ್ಣನವರನ್ನು ಆದರ್ಶವನ್ನಾಗಿ ಗ್ರಹಿಸಿದ ಸಂಗತಿಗಳಾಗಿವೆ. ಭಾವ ಸಂವಾದದ ನೆಲೆಯನ್ನು ಇದು ಕಟ್ಟಿಕೊಡುತ್ತದೆ.

ಬಸವಣ್ಣನವರ ವಚನಗಳಲ್ಲಿ ಬಡಗಿ ಮಾಚಲದೇವಿ, ನಿಂಬಿಯವ್ವೆಯರ ಪ್ರಸ್ತಾಪವಿದೆ. ಆದರೆ ಈ ಹೆಸರಿನ ವಚನಕಾರ್ತಿಯರು ವಚನಗಳನ್ನು ರಚಿಸಿರುವುದಕ್ಕೆ ಆಧಾರಗಳು ದೊರೆತಿಲ್ಲ. ಇವರಿಬ್ಬರೂ ಶರಣರಾಗಿ ಗೋಷ್ಠಿಗಳಲ್ಲಿ ಭಾಗವಹಿಸಿ ಬಸವಣ್ಣನವರ ಅನುಗ್ರಹಕ್ಕೆ ಪಾತ್ರರಾಗಿದ್ದಿರಬಹುದಾದ ಸಾಧ್ಯತೆಯನ್ನು ತಿಳಿಸುತ್ತದೆ.

ಒಟ್ಟಾರೆಯಾಗಿ ಬಸವಣ್ಣ ಮತ್ತು ವಚನಕಾರ್ತಿಯರ ನಡುವೆ ನೇರ ಸಂವಾದ ಮತ್ತು ಪರೋಕ್ಷವಾದ ಸಂವಾದ ಜರುಗಿದೆಯೆಂಬುದು ಒಟ್ಟು ವಿಶ್ಲೇಷಣೆಯಿಂದ ಗ್ರಹಿತವಾಗುತ್ತದೆ. ಬಸವಣ್ಣನವರ ಮನೋಧರ್ಮಗಳು, ತಾತ್ವಿಕ ನಿಲವುಗಳು, ಹನ್ನೆರಡನೇ ಶತಮಾನದ ಸಾಮಾಜಿಕ ಆಗುಹೋಗುಗಳಿಗೆ ಪ್ರತಿಕ್ರಿಯಿಸಿರಬಹುದಾದ

ಬಸವಣ್ಣನವರ ಧೋರಣೆಗಳು ಇಲ್ಲಿವೆ. ವಚನಕಾರ್ತಿಯರೊಂದಿಗಿನ ಸಾತ್ವಿಕ ವಾಗ್ವಾದಗಳು ಅಧ್ಯಾತ್ಮದ ಗುರಿಯನ್ನು ಹೊಂದಿರುವುದೂ ಕಾಣಬರುತ್ತವೆ. ಭಕ್ತಿಯ ಪರಾಕಾಷ್ಠೆಯ ಪರಿಣಾಮ, ಬಸವಣ್ಣನವರ ಮನೋಧರ್ಮವನ್ನು ಕೆಲವೊಮ್ಮೆ ಅನುಮಾನದಿಂದ ಅಳೆದು ತೂಗಿ ನೋಡುವಂತೆ ಮಾಡುತ್ತವೆ. ಹನ್ನೆರಡನೆ ಶತಮಾನದ ಅಧ್ಯಾತ್ಮದ ಹಲವು ಮಜಲುಗಳನ್ನು ಇಪ್ಪತ್ತೊಂದನೆ ಶತಮಾನದ ಹೊಸ್ತಿಲಲ್ಲಿ ನಿಂತು ಅವಲೋಕಿಸುವಾಗ ಸ್ತ್ರೀಯರನ್ನು ಕುರಿತ ಸಮಾನತೆ ಅಧ್ಯಾತ್ಮದ ಸ್ವಾತಂತ್ರ್ಯ (ಅಕ್ಕನ ಸಂದರ್ಭ)ದ ಪರಿಕಲ್ಪನೆ ಪ್ರಶ್ನಾರ್ಹವಾಗುತ್ತವೆ. ಇದನ್ನು ನಾವು ವ್ಯಾಖ್ಯಾನಿಸುವ ವಿಧಾನವೇ ಬೇರೆಯಾಗಿಬಿಡುತ್ತದೆ. ವಚನಕಾರ್ತಿಯರೂ ಸತಿಯರೂ ಆದ ಗಂಗಾಂಬಿಕೆ ಮತ್ತು ನೀಲಾಂಬಿಕೆಯರ ಸಂದರ್ಭದಲ್ಲಿನ ಬಸವಣ್ಣನವರ ನಡಾವಳಿ ಪ್ರಶ್ನಾರ್ಹವೆನಿಸುತ್ತದೆ. ಭಕ್ತಿ ಮತ್ತು ಗುರುತ್ವದ ನೆಲೆಯಲ್ಲಿ ನೋಡಿದಾಗ ಅನೇಕ ವಚನಕಾರ್ತಿಯರಿಗೆ ಅರಿವಿನ ಆದರ್ಶದ ದ್ಯೋತಕವಾಗಿ ಕಾಣುತ್ತಾರೆ. ಬಸವಣ್ಣನವರ ಈ ಗುರುತ್ವದ ಮಾದರಿಯು ಗೌರವಿಸುವಂಥದ್ದಾಗಿದೆ.

□□□

೯. ಜಯಂತ ಕಾಯ್ಕಿಣಿ ಅವರ ನೀರು ಕಥೆಯಲ್ಲಿನ ಮಾನವೀಯ ಅಂತಃಕರಣದ ಅನಾವರಣ

– *ಆಶಾ ಎಸ್.*

ನವ್ಯಸಾಹಿತ್ಯದ ಕಿರಿಯ ತಲೆಮಾರಿನಲ್ಲಿ ಕಾಣಿಸಿಕೊಳ್ಳುವ ಬಹುಮುಖ ಪ್ರತಿಭೆಯ ಜಯಂತ ಕಾಯ್ಕಿಣಿ ಅವರು ಕಥೆ, ಕಾವ್ಯ, ನಾಟಕ, ಅಂಕಣಬರಹ, ಕಿರುತೆರೆ, ಪತ್ರಿಕಾರಂಗ, ಚಿತ್ರರಂಗ ಹೀಗೆ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ತಮ್ಮ ವಿಶಿಷ್ಟ ಬರವಣಿಗೆ ಶೈಲಿಯಿಂದ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎನ್ನಬಹುದು. ಅವರು ಮಧ್ಯಮ ವರ್ಗದ ನಗರಜೀವನವನ್ನು ಮತ್ತು ಜನಸಾಮಾನ್ಯರ ಸಮಸ್ಯೆಗಳನ್ನು, ಅವರ ಅತಂತ್ರ ಸ್ಥಿತಿಯ ಬದುಕಿನ ಹೋರಾಟವನ್ನು ಬಿಂಬಿಸುವುದರ ಜೊತೆಗೆ ಸೂಕ್ಷ್ಮ ಸಂವೇದನಾಶೀಲತೆಯಿಂದ ಮನುಷ್ಯನ ಭಾವನಾಲೋಕದೊಳಗೆ ಹೊಕ್ಕು ಮಾನವೀಯ ಸಂಬಂಧಗಳ ಮುಖಾಮುಖಿಗೆ, ಮಾನವೀಯ ಅಂತಃಕರಣಕ್ಕೆ ಹೆಚ್ಚು ಒತ್ತನ್ನು ನೀಡಿರುವುದರಿಂದ ಅವರ ಕಥೆಗಳು ಯಶಸ್ವಿ ಹಾದಿಯತ್ತ ಸಾಗಿತೆನ್ನಬಹುದು.

ಮಾನವೀಯತೆ ಒಂದು ಜೀವನಸ್ಪಂದ ಮಿಡಿತ, ಪ್ರತಿಯೊಂದು ಜೀವದಲ್ಲಿಯೂ ಇರಲೇಬೇಕಾದ ಒಂದು ಜೀವದಂಶ ಮನುಷ್ಯತ್ವದ ಪ್ರತೀಕ. ಪ್ರೀತಿ, ಕರುಣೆಯಂತೆ ಮಾನವೀಯತೆಯೂ ಕೂಡ ಮನುಷ್ಯನಲ್ಲಿರಬೇಕಾದಂತಹ ಅತ್ಯಮೂಲ್ಯವಾದ ಗುಣ. ಮಾನವೀಯ ಕಳಕಳಿಯಿಲ್ಲದ ಮನೋನಿಗ್ರಹವಿಲ್ಲದ ಆದರ್ಶಕ್ಕೆ ಬೆಲೆ ಇಲ್ಲ. ಕೌಟುಂಬಿಕವಾಗಿಯೂ, ಸಾಮಾಜಿಕವಾಗಿಯೂ, ಮಾನವೀಯತೆ ಮುಖ್ಯ. ಮಾನವೀಯ ಭಾವದ ಕೊರತೆ ಆರೋಗ್ಯಕರ ಸಮಾಜವನ್ನು ನಿರ್ಮಿಸಲಾರದು. ಮಾನವೀಯತೆಯ ಕೊಂಡಿಯೇ ಅಪರಿಚಿತತನದಲ್ಲೂ ಪರಿಚಯದ ಬೆಸುಗೆ ಹಾಕಿ ತನ್ನ ಮನುಷ್ಯತ್ವವನ್ನು ಮೆರೆಸುತ್ತದೆ. ಈ ನಿಟ್ಟಿನಲ್ಲಿ ಜಯಂತ ಕಾಯ್ಕಿಣಿ ಅವರ ಅಮೃತಬಳ್ಳಿ ಕಷಾಯ, ಸಂತೆಯ ದಿನ, ಭಾಮಿನಿ ಸಪ್ತಪದಿ, ಚಾರ್‌ಮಿನಾರ್, ನೀರು ಮುಂತಾದ ಕತೆಗಳಲ್ಲಿ

ಅಪರಿಚಿತತನದಲ್ಲೂ ಪರಿಚಿತ ಭಾವವನ್ನು ತೋರ್ಪಡಿಸುವಂತಹ ಅಂಶಗಳು ಕಂಡುಬಂದಿದ್ದು ಮಾನವೀಯ ಮೌಲ್ಯ ಪರಾಕಾಷ್ಠತೆಯನ್ನು ಮುಟ್ಟಿ ಓದುಗರ ಗಮನಸೆಳೆಯುವಂತಿದೆ.

ಈ ಹಿನ್ನೆಲೆಯಲ್ಲಿ ಜಯಂತ ಕಾಯ್ಕಿಣಿ ಅವರ ಉತ್ತಮ ಕಥಾಸಂಕಲನವೆನಿಸಿರುವ ಚಾರ್‌ಮಿನಾರ್ ಕೃತಿಯಿಂದಾಯ್ದ 'ನೀರು' ಕಥೆಯನ್ನು ವಿಶ್ಲೇಷಣೆಗೊಳಪಡಿಸುವ ಮೂಲಕ ಪ್ರಸ್ತುತ ಕಥೆಯಲ್ಲಿನ ಚಂದ್ರಹಾಸ, ಕುಂಜುವಿಹಾರಿ, ಕಾಂಚುಬೆಹನ್ ಮತ್ತು ಬನಿಯಾ ಪಾತ್ರಗಳಲ್ಲಿ ಮನುಷ್ಯತ್ವ, ಮಾನವೀಯ ಅಂತಃಕರಣ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನು ಜೊತೆಗೆ ಕಥನದ ಮುಖ್ಯ ಆಶಯವಾದ ಮಾನವೀಯ ಸಂವೇದನೆಯ ನೆಲೆಯತ್ತ ನಿಂತು ಓದುಗರನ್ನು ಗಮನ ಹರಿಸುವಂತೆ ಮಾಡಿರುವ ಜಯಂತ ಕಾಯ್ಕಿಣಿ ಅವರ ಭಾಷಾಭಿವ್ಯಕ್ತಿ ಮತ್ತು ಭಾವಾಭಿವ್ಯಕ್ತಿಯನ್ನು ಅರ್ಥೈಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ನೀರು' ಕಥೆಯು ಮಾನವೀಯ ಸಂವೇದನೆಯ ಭಾವನೆಗಳ ಮಿಡಿತದೊಂದಿಗೆ ಸಾಮಾಜಿಕ ಸ್ವರೂಪವನ್ನು ಅರ್ಥೈಸಿಕೊಡುವಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ ಎನ್ನಬಹುದು. ಯಾವುದೇ ಗುರುತು ಪರಿಚಯವಿರದ ವ್ಯಕ್ತಿಗೆ ಸಹಾನುಭೂತಿ ತೋರಿ ಮಾನವೀಯತೆಯನ್ನು ಮೆರೆಸುವುದು ಓದುಗರ ಗಮನ ಸೆಳೆಯುತ್ತದೆ. ಬೆಂಗಳೂರಿನಿಂದ ಮುಂಬಯಿಗೆ ಹೊರಟ ವಿಮಾನದಲ್ಲಿ ಚಂದ್ರಹಾಸ ಮತ್ತು ಸಂತೋಷನ್‌ರ ಪರಿಚಯವಾಗುತ್ತದೆ. ಕಾಯಿಲೆಯನ್ನು ಗುಣಪಡಿಸಿಕೊಳ್ಳಲು ಸಂತೋಷನ್ ಮುಂಬಯಿಗೆ ಬಂದ ಕಾರಣವನ್ನು ತಿಳಿಸಿದಾಗ, ವಯಸ್ಸಾದ ಆತನನ್ನು ನೋಡಿ ಒಬ್ಬನನ್ನೇ ಬಿಟ್ಟು ಹೋಗಲು ಮನಸ್ಸಾಗದೆ ಹೀಗೆ ಹೇಳುತ್ತಾನೆ. "ಸರ್ ಇರಲಿ ಅವಸರವಿಲ್ಲ, ನನಗಂಥ ಕೆಲಸವಿಲ್ಲ. ಬೇಕಿದ್ದರೆ ನಿಮ್ಮ ಅಳಿಯ ಮುಂದಿನ ಫ್ಲೈಟ್‌ನಲ್ಲಿ ಬಂದು ತಲುಪುವ ತನಕ ನಿಮ್ಮ ಜತೆ ಇರಲು ನಾನು ರೆಡಿ" (ಪುಟ ೪೫, ಚಾರ್‌ಮಿನಾರ್) ಎಂದು ಹೇಳಿ ಆಸ್ಪತ್ರೆಗೆ ಕರೆದೊಯ್ಯುತ್ತಾನೆ. ಚಂದ್ರಹಾಸನ ಈ ಮಾತಿನಲ್ಲಿ ಮಾನವೀಯ ಅಂತಃಕರಣದ ಎಳೆಯಿರುವುದು ಗಮನಾರ್ಹ. ವಯಸ್ಸಾದ ಅವರನ್ನು ಒಬ್ಬರನ್ನೇ ಕಳಿಸಲು ಮನಸ್ಸಾಗದೆ ಅವರನ್ನು ಕರೆದೊಯ್ಯಲು ಅಳಿಯ ಬರುವವರೆಗೂ ಜೊತೆಯಲ್ಲಿರುವೆನೆಂದು ಧೈರ್ಯ ತುಂಬಿ, ತಾನೇ ಸ್ವತಃ ಟ್ಯಾಕ್ಸಿಯನ್ನು ಕರೆದು ಆಸ್ಪತ್ರೆಗೆ ಕರೆದೊಯ್ಯುವಲ್ಲಿ ಅವರಿಗೆ ಸಹಾಯ ಮಾಡುತ್ತಿರುವ ಮನಸ್ಸಿನ ಹಿಂದೆ ಮನುಷ್ಯತ್ವ, ಮಾನವೀಯ ಕಾಳಜಿ ಇರುವುದು ಗೋಚರಿಸುತ್ತದೆ.

ಕುಂಜು ವಿಹಾರಿಯ ಟ್ಯಾಕ್ಸಿಯಲ್ಲಿ ಸಂತೋಷನ್‌ನನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಪಡೆದ ನಂತರ ವಿಮಾನ ನಿಲ್ದಾಣಕ್ಕೆ ಹಿಂದಿರುಗುವ ಸಂದರ್ಭದಲ್ಲಿ ಜಡೀ ಮಳೆಯಲ್ಲಿ ಸಿಲುಕಿಕೊಂಡಾಗ, ಕುಂಜುವಿಹಾರಿಯು ಯಾರೋ ಪರಿಚಯವಿರದ, ಸಂಬಂಧವಿರದ ಪ್ರಯಾಣಿಕರನ್ನು ತನ್ನ ಗೆಳೆಯನ ಮನೆಗೆ ಕರೆದೊಯ್ದು, ಗೆಳೆಯನ ಹೆಂಡತಿಯಾದ ಕಾಂಚು ಬೆಹನ್‌ಳಿಗೆ ಮೊದಲಿಗೆ ತನ್ನನ್ನು ಪತಿಯು ಸ್ನೇಹಿತನೆಂದು ಪರಿಚಯಿಸಿಕೊಂಡು ನಂತರ ಜಡೀಮಳೆಯಿಂದಾಗಿ ರಸ್ತೆ ಮುಚ್ಚಿದೆ ಅದಕ್ಕಾಗಿ ಚಂದ್ರಹಾಸ ಮತ್ತು ಸಂತೋಷನ್‌ರನ್ನು ಕರೆತಂದುದಾಗಿ ಹೇಳಿದಾಗ ಆಕೆ ಪ್ರೀತಿಯಿಂದ ಬರಮಾಡಿಕೊಂಡು ಉಪಚರಿಸುವಲ್ಲಿ ಮಾನವೀಯತೆ ಎದ್ದು ತೋರುವಂತಿದೆ.

ಕಾಂಚು ಬೆಹನ್‌ಳು ಕೊಟ್ಟ ನೀರನ್ನು ಕುಡಿದಾಗ ಸಂತೋಷನ್‌ನಿಗೆ 'ಇದುವರೆವಿಗೂ ತಾನು ಇಂತಹ ನೀರನ್ನು ಕುಡಿದಿಲ್ಲ' ಎಂಬ ಭಾವ ವ್ಯಕ್ತಪಡಿಸುವಲ್ಲಿ ತಾನು ಅದೇ ನೀರನ್ನು ಎಪ್ಪತ್ತು ದಶಕಗಳ ಹಿಂದೆ ಇದೇ ಮುಂಬಯಿಯಲ್ಲಿ ಹಣಕ್ಕಾಗಿ ಮಾರಿದ್ದೇನಲ್ಲವೆ, ಹಾಗೇ ಮಾರಿದ್ದರಿಂದಲೇ ತನಗೆ ಕಾಯಿಲೆ ಬಂದಿರುವುದಾಗಿ ಮನೋವಿಶ್ಲೇಷಣೆ ಮಾಡಿಕೊಳ್ಳುವಲ್ಲಿ ತನ್ನ ತಪ್ಪಿನ ಅರಿವಾಗಿರುವುದು ವ್ಯಕ್ತಗೊಂಡಿದೆ. ಹಾಗೆಯೇ ಕುಂಜುವಿಹಾರಿಯ ಗ್ರಹಿಕೆಯಂತೆ ಆತ ಹೇಳಿದ್ದ ಮಾತು "ಮುಂಬಯಿಯಲ್ಲಿ ಹಣ ನೀರಿನಂತೆ ಹರೀತದೆ ಸಾಬ್, ಕೆಲವರಿಗೆ ಕಾಣುತ್ತೆ ಅದು ಕೆಲವರಿಗೆ ಕಾಣಲ್ಲ, ಕಂಡವರು ಅದನ್ನು ಮೊಗೆದು ಮೊಗೆದು ತಮ್ಮದಾಗಿಸಿಕೊಳ್ಳುತ್ತಾರೆ. ಟ್ಯಾಕ್ಸಿಯಲ್ಲಿ ಪಯಣಿಸುತ್ತಾರೆ ಕಾಣದವರು ಟ್ಯಾಕ್ಸಿ ನಡೆಸುತ್ತಾರೆ" (ಚಾರ್‌ಮಿನಾರ್ ಪುಟ, ೪೬) ಎಂಬುದನ್ನು ನೆನೆದು ತಾನು ಕಾಣುವಂತಹ ನೀರನ್ನೇ ಹಣಕ್ಕಾಗಿ ಮಾರಿದೆನಲ್ಲ ಎಂದು ಆತನಿಗೆ ಹೇಳುತ್ತಾ ಪರಿತಪಿಸಿ, ಪಶ್ಚಾತ್ತಾಪ ಪಡುವಲ್ಲಿ ಸಂತೋಷನ್‌ನ ವ್ಯಕ್ತಿತ್ವ ಅನಾವರಣಗೊಂಡಿದೆ.

ಪ್ರಸ್ತುತ ಕಥೆಯಲ್ಲಿನ ಆಶಯ ತುಂಬಾ ಮಹತ್ವದೆನಿಸುತ್ತದೆ. ತಪ್ಪು ಮಾಡುವಾಗ ಯಾರಿಗಾದರೂ ಒಂದು ಮನಸ್ಸು ಬೇಡವೆನ್ನುತ್ತಿರುತ್ತದೆ. ಆ ಕ್ಷಣದಲ್ಲಿ ಒಳ್ಳೆಯ ಮನಸ್ಸಿನ ಮಾತನ್ನು ಕೇಳಿ ನಡೆದರೆ ಮುಂದಿನ ಅನಾಹುತಗಳು ತಪ್ಪುತ್ತದೆ. ಇಲ್ಲವಾದರೆ ಬದುಕಿನುದ್ದಕ್ಕೂ ಆ ಒಂದು ತಪ್ಪು ನಮ್ಮನ್ನು ಕಾಡುತ್ತಿರುತ್ತದೆ. ಪಾಪಪ್ರಜ್ಞೆ ಪಶ್ಚಾತ್ತಾಪ ಪಡುವಂತೆ ಪರದಾಡಿಸುತ್ತದೆ ಎಂಬ ಅಂಶವನ್ನು ಸಂತೋಷನ್‌ನ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಜಯಂತ ಅವರ ಕೈಚಳಕದಲ್ಲಿ ಭಾವಾಭಿವ್ಯಕ್ತಿಗೊಂಡಿರುವ ಕಥನದಲ್ಲಿನ ಈ ಸಾಲುಗಳು ಓದುಗರ ಮನಸ್ಸನ್ನು

ಸೆರೆಹಿಡಿಯುವಂತಿದೆ. ಮಾನವೀಯತೆಯನ್ನು ಮೆರೆಸುವ ನಿಟ್ಟಿನಲ್ಲಿ ಪ್ರಸ್ತುತ ಕಥೆ ಯಶಸ್ಸು ಕಂಡಿದೆ ಎಂದು ಹೇಳಬಹುದು.

'ನೀನು ಇವತ್ತು ತಿನ್ನಿಸಿದ ರೊಟ್ಟಿಗಿಂತ, ಕುಡಿಸಿದ ನೀರಿಗಿಂತ ರುಚಿಯಾದದ್ದನ್ನು ನಾನು ಈ ಜನ್ಮದಲ್ಲೇ ಪಡೆದಿಲ್ಲ. ಕುಂಜ್ ಭಯ್ಯಾ ಅದು ಅಮೃತ' .... ಅಪರಿಚಿತರು ತನಗೆ ಮಾಡಿದ ಈ ಉಪಚಾರಕ್ಕೆ ಕೃತಜ್ಞನಾಗಿ ಸಂತಸಪಡುತ್ತಾನೆ. ಹಾಗೆಯೇ ತನ್ನ ತಪ್ಪನ್ನು ನೆನೆದು "ನನಗೆ ಈ ಕಾಯಿಲೆ ಯಾಕೆ ಬಂತು ಗೊತ್ತಾ? ನನಗೆ ಗೊತ್ತಿದೆ ಅದು. ನಾನು ಈ ದೇಶದಲ್ಲಿ ನೀರು ಮಾರಿದ ಮೊದಲಿಗರಲ್ಲಿ ಒಬ್ಬ. ಹೌದು ೭೦ರ ದಶಕದಲ್ಲೇ ಬಾಟಲಿಯಲ್ಲಿ ನೀರು ಮಾರಿದವ ನಾನು ತಪ್ಪು ಅದು. ನನ್ನ ಮನಸ್ಸು ಬೇಡ ಬೇಡ ಅಂತ ಹೇಳ್ತಾ ಇತ್ತು. ಆದರೂ ಕೇಳಲಿಲ್ಲ ನಾನು. ಕಾಣದ ನೀರಿನಂತೆ ದುಡ್ಡು ಹರಿಯುತ್ತದೆ. ಅಂದಿಯಲ್ಲ ಕುಂಜ್‌ಭಯ್ಯಾ, ನಾನು ಕಾಣೋ ನೀರನ್ನೇ ದುಡ್ಡಿಗೆ ಮಾರಿದೆ! ಸರಿ ಅನಿಸಿದ್ದನ್ನು ಮಾಡೋದರಲ್ಲಿ ಇರೋ ಸುಖಕ್ಕಿಂತ ಹೆಚ್ಚಿನ ದುಃಖ ತಪ್ಪು ಅನಿಸಿದ್ದನ್ನು ಮಾಡೋದರಲ್ಲಿದೆ ಪಾಪ ಅದು. ಮನಸ್ಸಿನ ಮಾತು ಕೇಳದ ತಪ್ಪಿಗೆ ನನ್ನ ದೇಹವೇ ನನಗೆ ಕೊಟ್ಟಿರುವ ಶಿಕ್ಷೆ ಇದು. ಅನುಭವಿಸುತ್ತಿದ್ದೇನೆ, ಅನುಭವಿಸಲೇಬೇಕು" (ಚಾರ ಮಿನಾರ್, ಪುಟ. ೫೫) ಎಂಬ ಸಂತೋಷನ್‌ನ ಪಶ್ಚಾತ್ತಾಪದ ಮಾತಿನ ಹಿಂದೆ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದೆಂಬುದರ ಜೊತೆಗೆ ಮನುಷ್ಯನಿಗೆ ಮನುಷ್ಯತ್ವ ಮಾನವೀಯ ಅಂತಃಕರಣವಿರಬೇಕು. ಹಣವೇ ಎಲ್ಲಾ ಅಲ್ಲ ಎಂಬುದನ್ನು ಒತ್ತಿ ಹೇಳುತ್ತಿರುವ ಅಂಶ ಅಡಗಿದೆ.

ತಮ್ಮ ಮೊಮ್ಮಗಳ ಮದುವೆ ಆಗುವವರೆಗಾದರೂ ತಾನು ಬದುಕಬೇಕು ಎನ್ನುವ ಆಸೆ ಹೊತ್ತ ವೃದ್ಧ ಜೀವ ಸಂತೋಷನ್‌ಗೆ ವೈದ್ಯರು ಧೈರ್ಯ ತುಂಬುತ್ತಾರೆ. ಹಾಗೆಯೇ, ತನಗೆ ಸಹಾಯ ಮಾಡಿದ ಚಂದ್ರಹಾಸ, ಕುಂಜುವಿಹಾರಿ, ಕಾಂಚುಬೆಹನ್, ಹಣ್ಣು ಹಂಚುತ್ತಿರುವವರು, ಬನಿಯಾ ಎಲ್ಲರೂ ತನ್ನವರೆಂಬ ಭಾವ ಆತನಿಗಾಗುತ್ತದೆ.

ಪ್ರಸ್ತುತ ಕಥೆಯಲ್ಲಿನ ಗಮನ ಸೆಳೆದು ಮಾನವೀಯತೆ ಮೆರೆಸಿದ ಮತ್ತೊಂದು ಪಾತ್ರ ಬಿಸ್ಲೇರಿ ಬನಿಯ ಟ್ರಾಫಿಕ್‌ನಲ್ಲಿ ಜಡಿಮಳೆಗೆ ಸಿಲುಕಿದಾಗ ಕುಡಿಯುವ ನೀರಿಲ್ಲದೆ ಪರದಾಡುವ ಪರಿಸ್ಥಿತಿ ಬಂದಾಗ ಜನರೆಲ್ಲಾ ಕಂಗಾಲಾಗುತ್ತಾರೆ. ಈ ಸಂದರ್ಭದಲ್ಲಿ ಚಂದ್ರಹಾಸನು ಬಿಸ್ಲೇರಿ ಮಾರುವ ಬನಿಯಾನನ್ನು ಕೇಳುವುದು ಹೀಗೆ.

"'ಈ ಬಾಟಲಿಯ ಕ್ರೇಟೇ ಕೊಟ್ಟು ಬಿಡಿ, ಬೇಕಿದ್ದರೆ ಡಬಲ್ ಹಣ ತಗೊಳ್ಳಿ' ಎಂದ. ಬನಿಯಾ ವಿಚಿತ್ರವಾದ, ವಿಷಣ್ಣವಾದ ನಗು ಕೊಟ್ಟು – ಏನಪ್ಪಾ, ಆತನ

ಮಾತಿಗೆ ಪ್ರತ್ಯುತ್ತರವಾಗಿ ಬನಿಯಾ ಹೇಳುವುದು ಈ ರೀತಿ 'ನೀನೊಬ್ನೆ ಏನಪಾ ಸಿಕ್ಕಿಹಾಕಿಕೊಂಡೋನು? ನೋಡ್ರಾ ಇಲ್ವಾ? ಹೆಂಗಸರು .... ಮಕ್ಕಳು, ಮುದುಕರು ಎಲ್ರೂ ಸಿಕ್ಕಿಹಾಕಿಕೊಂಡಿದ್ದಾರೆ .... ಎಲ್ರಿಗೂ ಬೇಕಲ್ವಪ್ಪಾ, ಇರೋದೇ ಇಷ್ಟು ನೀನು ಯುವಕ ಹಟ್ಟಾ – ಖಟ್ಟಾ ಇದೀಯಾ, ಒಂದು ಸಾಕು ನಿನಗೆ, ಗೆಳೆಯನಿಗೆ ಒಂದು ತಗೋ, ಇದು ದುಡ್ಡು ಗಳಿಸೋ ಸಮಯಾನೇನಪ್ಪಾ? ತಗೋ, ಎರಡು ಬಾಟಲಿ, ಮುಖಬೆಲೆ ೨೦ ರೂಪಾಯಿ ಕೊಡು" (ಪುಟ, ೫೪) ಎಂದು ಹೇಳುವ ಬನಿಯ ಎಲ್ಲರ ಮನಸ್ಸನ್ನು ಸೂರೆಗೊಳ್ಳುತ್ತಾನೆ. ಯಾವ ಸಂಬಂಧವೂ ಇಲ್ಲದಿರುವ ಜನರ ಬಗೆಗಿರುವ ಆತನ ಕಾಳಜಿ, ಮಾನವೀಯ ಅಂತಃಕರಣ ಗಮನಸೆಳೆಯುತ್ತದೆ. ಆತ ಬೇಕಾದಷ್ಟು ಹಣಕ್ಕಾಗಿ ನೀರನ್ನು ಮಾರಬಹುದಿತ್ತು. (ಸಂತೋಷನ್‌ನ ರೀತಿ) ಸದ್ಯದ ಪರಿಸ್ಥಿತಿಯಲ್ಲಿ ಚಂದ್ರಹಾಸನಂತಹವರು ಬೇಕಾದಷ್ಟು ಹಣವನ್ನು ಬನಿಯನಿಗೆ ನೀಡುತ್ತಿದ್ದರು, ಆತನು ಕೇಳಬಹುದಿತ್ತು. ಆದರೆ ಪ್ರಾಮಾಣಿಕನಾದ ಬನಿಯಾ ಗಳಿಸುವ ಉದ್ದೇಶ ಹೊಂದದೆ, ಮನುಷ್ಯತ್ವವನ್ನು ಮೆರೆದು ಮಾನವೀಯತೆಯ ಸಂದೇಶ ನೀಡಿದ್ದಾನೆ ಎಂಬುದನ್ನಿಲ್ಲಿ ಗಮನಿಸಬೇಕಾಗುತ್ತದೆ.

ಹಾಗೆಯೇ ಕಥನದೊಳಗೆ ಕೆಲವು ಪ್ರಸಂಗಗಳನ್ನು ಲೇಖಕರು ತಂದಿದ್ದಾರೆ. ಅಮಿತಾಭನ ಆರೋಗ್ಯ ಸುಧಾರಣೆಯಾಗಲಿ, ಚೇತರಿಸಿಕೊಳ್ಳಲೆಂದು ಸಾವಿರಾರು ಕಿಲೋಮೀಟರ್ ದೂರದಿಂದ ಸೈಕಲ್ ತುಳಿದುಕೊಂಡು ಹೋಗಿ ಗಂಗಾ ಯಮುನಾ ಸಂಗಮದ ನೀರನ್ನು ಬಿಂದಿಗೆಯಲ್ಲಿ ತರುವ ಅನಾಮಿಕ ಅಭಿಮಾನಿ ಇರುವುದು ಮತ್ತು ತನ್ನ ತಾಯಿಯ ಕಷ್ಟ, ಸಂಕಟವೆಲ್ಲವೂ ಒಂದೇ ಬಾರಿಗೆ ಅಂತ್ಯವಾಗಿ ಬಿಡಲೆಂದು ಆಲೋಚಿಸುತ್ತಾ ಪೆಪ್ಸಿಯಲ್ಲಿ ಪೆಸ್ಟಿಸೈಡ್ ಇರಬಹುದೆಂದು ಅದನ್ನೇ ಕುಡಿದು ಸಾಯಬಹುದಲ್ಲವೇ ಎಂದು ತರ್ಕಿಸುವ ಎಂಟು ವರ್ಷದ ಮುಗ್ಧ ಬಾಲಕನು ಕಥೆಯೊಳಗಿರುವುದು ಮನಸ್ಸಿಗೆ ತಾಗುವಂತಿದೆ ಎನ್ನಬಹುದು. ಕಥೆಯಲ್ಲಿ ಬರುವ ಗಂಗೆ, ಬಿಸ್ಲೇರಿ, ಪೆಪ್ಸಿ ಎಲ್ಲವೂ ಒಂದು ರೀತಿಯಲ್ಲಿ ವ್ಯಾಪಾರೀಕರಣದೊಳಗೆ ಒಂದಾಗಿರುವುದೇ ಆಗಿದೆ. ಆದರೂ ಅದರೊಳಗೆ ಒಂದು ಕಡೆ ಮಾನವೀಯ ನೆಲೆಯಲ್ಲಿ ಮೂಡಿಬಂದಿರುವಂತಹ ಮಾನವ ಪ್ರೀತಿ, ಸಹಜ ಅಭಿಮಾನ, ಇತರರ ನೋವಿಗೆ, ಭಾವಗಳಿಗೆ ಪರಸ್ಪರ ಸ್ಪಂದಿಸುವ ಮಾನವೀಯ ಕಳಕಳಿ ಅರಳಿರುವುದನ್ನು ಕಾಣುವ ಕಣ್ಣು ಇಲ್ಲಿ ಮುಖ್ಯವಾಗಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಅದೇ ಜಯಂತ ಕಾಯ್ಕಿಣಿ ಅವರ ಬರವಣಿಗೆಯ ವಿಶೇಷತೆ ಎಂದರೆ ತಪ್ಪಾಗಲಾರದು ಎನಿಸುತ್ತದೆ.

ನೀರಿನ ಬಹುಮುಖಿ ಸಂವೇದನಾ ಸಾಧ್ಯತೆಗಳು ಕಥೆಯೊಳಗೆ ಬಂದಿದೆ. ಮನುಷ್ಯನ ಪ್ರಾಣಿಗಳ ಹಾಗೆ ಪ್ರತಿಯೊಂದು ಜೀವರಾಶಿಗೆ ಮೂಲಭೂತ ಅವಶ್ಯಕತೆಯಾದ ನೀರು ಪ್ರಸ್ತುತ ಕಥೆಯೊಳಗೆ ಮಾನವ ಸಂವೇದನೆಯ ಮೂಲಭೂತ ಅಂತಃಕರಣದ ಸ್ವರೂಪವಾಗಿ ರೂಪಕತೆ ಪಡೆದುಕೊಳ್ಳುವಂತೆ ಮಾಡಿ ಜೀವ – ಜೀವಗಳ ಭಾವಗಳೊಳಗೆ ಬೆರೆತು ಮಿಡಿಯುವಂತೆ ಮಾಡಿರುವ ಜಯಂತ ಕಾಯ್ಕಿಣಿ ಅವರ ಪ್ರಯತ್ನ ಯಶಸ್ವಿಯಾಗಿದೆ ಎನ್ನಬಹುದು.

ಪ್ರವಾಹವಾಗಿ ಹರಿದ ನೀರು ಮುಂಬಯಿಯ ಬದುಕನ್ನು ದಿಕ್ಕೆಡಿಸಿದ ವರ್ತಮಾನ, ಅದೇ ನೀರು ದಾರಿಯಲ್ಲಿ ಹರಿಯುವಾಗ ಸಂತಸದಿಂದ ನಲಿದಾಡುವ ಜನರು, ನೀರನ್ನೇ ಮಾರಾಟ ಮಾಡಿದ್ದಕ್ಕಾಗಿ ತನಗೆ ಕಾಯಿಲೆ ಬಂದಿದೆ ಎಂದು ವ್ಯಥೆ ಪಡುವ ಸಂತೋಷನ್, ಬಿಸ್ಲೇರಿ ನೀರನ್ನು ಮಾರಾಟ ಮಾಡುವ ಬನಿಯಾ ಸಂಬಂಧವಿರದಿದ್ದರೂ ಎಲ್ಲರಿಗೂ ಸಮಾನವಾಗಿ ಸದ್ಬಳಕೆಯಾಗಲಿ ಎಂದು ಚಿಂತಿಸಿ ಲಾಭಕ್ಕಾಗಿ ಮಾರದೆ ಉಳಿಯುವಲ್ಲಿನ ಆತನ ಮಾನವೀಯತೆಯ ಅಂತಃಕರಣ ಎಲ್ಲವೂ ನೀರಿನ ಬಹುಮುಖಿ ಸಂವೇದನಾ ಸಾಧ್ಯತೆಗಳಾಗಿ ಕಾಣಿಸಿಕೊಳ್ಳುವಂತೆ ಮಾಡಿರುವ ಲೇಖಕರ ಕೈಚಳಕ, ಯೋಚನಾ ಲಹರಿ, ಅದನ್ನು ಅಭಿವ್ಯಕ್ತಿಸುವಲ್ಲಿನ ಭಾಷಾಭಿವ್ಯಕ್ತಿ, ಭಾವಾಭಿವ್ಯಕ್ತಿ ಅರ್ಥಪೂರ್ಣವಾಗಿ ಕಥೆಯುದ್ದಕ್ಕೂ ಮೂಡಿಬಂದಿರುವುದನ್ನು ಗಮನಿಸಬಹುದಾಗಿದೆ.

"ಪ್ಯಾರೇ ಮೋಹನನ ಗೆಳೆಯನಾದ ಹಸಮುಖ್ ಆಲಿಯ ಸ್ನೇಹಿತ ನಾನು ಎಂದೇ ಪರಿಚಯಿಸಿಕೊಳ್ಳುವಾಗ ಅಪರಿಚಿತತನದಲ್ಲೂ ಒಂದು ಪರಿಚಯದ ನೆಲೆ ಒಡಮೂಡುತ್ತದೆ. ಭಿನ್ನ ಸಾಂಸ್ಕೃತಿಕ, ಧಾರ್ಮಿಕ ಪರಿವೇಶಗಳ ಏಕೀಕರಣದಿಂದ ಮೂಡಿದ ಮಾನವೀಯ ಸಾಮಾಜಿಕತೆಯ ಸ್ವರೂಪ ಇದು. ಅಂತಹ ಮಾನವೀಯ ಸಂವೇದನೆಯೇ 'ಮುಂಬಯಿ' ಎಂಬ ಮಹಾಪರಿಧಿಯ ಸಾಮಾಜಿಕತೆಯಲ್ಲಿ ವಿಶಿಷ್ಟತೆಯನ್ನು, ಆಪ್ತತೆಯನ್ನು, ವಿಲಕ್ಷಣ ಸುರಕ್ಷಿತ ಭಾವವನ್ನು ಏರ್ಪಡಿಸಿರುವುದು ಎಂಬ ಗ್ರಹಿಕೆಯೇ ಕಥನದ ನಿರೂಪಣೆಯ ಹಿಂದಿರುವುದು ಗೋಚರವಾಗುತ್ತದೆ. ಅಂತಹ ಆಪ್ತತೆಯು ಮಾತ್ರ ನಗರದ ಎಲ್ಲಾ ಜಂಜಡ, ತಾಕಲಾಟ ಮತ್ತು ಧಾವಂತದ ನಡುವೆಯೂ ನೆಮ್ಮದಿಯನ್ನೂ, ಆತ್ಮೀಯತೆಯನ್ನು ಮೂಡಿಸುವುದು. ಈ ನಿಟ್ಟಿನಲ್ಲಿ ಪ್ರಸ್ತುತ ಕಥನ ಮಾನವೀಯ ಸಂವೇದನೆಯ ನೆಲೆಯಲ್ಲಿ ಮುಂಬಯಿಯ ಎಲ್ಲಾ ಗಡಿಬಿಡಿಯ ನಡುವೆಯೂ ಮೌನವನ್ನು, ನಿರಾತಂಕ, ನೆಮ್ಮದಿಯನ್ನು ಗ್ರಹಿಸಲೆತ್ನಿಸಿದೆ" ಎಂಬುದನ್ನು ಗಮನಿಸಬೇಕಾಗುತ್ತದೆ. (ಕಥಾಸ್ವರೂಪ, ಪುಟ. ೩೬೪).

ಒಟ್ಟಾರೆಯಾಗಿ ಹೇಳುವುದಾದರೆ, ಮಾನವೀಯ ನೆಲೆಯಲ್ಲಿ ಮೂಡಿಬಂದಿರುವ ನೀರು ಕಥೆಯಲ್ಲಿನ ಚಂದ್ರಹಾಸ, ಕುಂಜುವಿಹಾರಿ, ಕಾಂಚು ಬೆಹೆನ್, ಬನಿಯಾ ಹೀಗೆ ಎಲ್ಲಾ ಪಾತ್ರಗಳಲ್ಲಿ ಜಯಂತ ಕಾಯ್ಕಿಣಿ ಅವರು ವ್ಯಕ್ತಪಡಿಸಿರುವ ಮನುಷ್ಯತ್ವ, ಮಾತೃತ್ವ, ಮಾನವೀಯ ಅಂತಃಕರಣವು ಕಥನದ ಮುಖ್ಯ ಆಶಯವಾದ ಮಾನವೀಯ ಸಂವೇದನೆಯ ನೆಲೆಯತ್ತ ನಿಂತು ಓದುಗರನ್ನು ಗಮನ ಹರಿಸುವಂತೆ ಮಾಡುತ್ತದೆ ಎಂಬುದನ್ನಿಲ್ಲಿ ಗ್ರಹಿಸಬೇಕಾಗುತ್ತದೆ.

ಪರಾಮರ್ಶನ ಗ್ರಂಥಗಳು

೧. ಜಯಂತ ಕಾಯ್ಕಿಣಿ ಕಥೆಗಳು (ಪ್ರಶಸ್ತಿ ವಿಜೇತ ಮೂರು ಪುಸ್ತಕಗಳ ಸಂಪುಟ), **ಜಯಂತ ಕಾಯ್ಕಿಣಿ**, ಅಂಕಿತ ಪುಸ್ತಕ, ಬೆಂಗಳೂರು, ೨೦೦೩.

೨. ಚಾರ್‌ಮಿನಾರ್, **ಜಯಂತ ಕಾಯ್ಕಿಣಿ**, ಅಂಕಿತ ಪುಸ್ತಕ, ಬೆಂಗಳೂರು, ೨೦೧೨.

೩. ಜಯಂತ ಕಾಯ್ಕಿಣಿ ವಾಚಿಕೆ, **ಸಿ.ಎನ್. ರಾಮಚಂದ್ರನ್**, ಸುಡಿ ಪುಸ್ತಕ, ಬೆಂಗಳೂರು, ೨೦೧೦.

೪. ಮಯೂರ (ಮಾಸಿಕ, ಆಗಸ್ಟ್ ೨೦೧೩).

೫. ಅಂತರ್ಜಾಲ ಮಾಹಿತಿ.

□□□

೧೦. ಕಾರ್ನಾಡರ ಹಯವದನ : ದೇಹ ಮತ್ತು ಮನಸ್ಸುಗಳ ಶೋಧ

– *ಡಾ. ಎಚ್.ಎಸ್. ಧನಂಜಯ್ಯ*

ಹಯವದನ ಮೂಲತಃ ಗಂಭೀರ ಚಿಂತನೆಗೆ ಹಚ್ಚುವ ಒಂದು ಪ್ರಯೋಗಾತ್ಮಕ ನಾಟಕ. ಹಯವದನ ಎಂದರೆ ಕುದುರೆಮುಖ ಎಂದರ್ಥ. ನವ್ಯದ ಧಾಟಿಯಲ್ಲಿ ಬಿಡಿಸುವುದಾದರೆ ಹುಚ್ಚು ಕಲ್ಪನೆಗಳ ಮೂಲಕ ಸಾಗುವ ಕಾಮ ಸಂಬಂಧಿ ನೆಲೆಯ ಪರಿಪೂರ್ಣತೆಯನ್ನು ಬಯಸುವ ಅಹಂಭಾವದ ಪೂರ್ಣರೂಪವೆಂದೇ ಕರೆಯಬೇಕಾಗುತ್ತದೆ. ಹಾಗಾಗಿ ನಾಟಕ ಕೂಡ ಆ ನೆಲೆಯಲ್ಲಿ ಪ್ರಯೋಗಗೊಳ್ಳುವುದನ್ನು ಇಲ್ಲಿ ನೋಡಬೇಕಾಗುತ್ತದೆ. ಪ್ರಮುಖವಾಗಿ ದೇಹ ಮತ್ತು ಬುದ್ಧಿಯ ಪ್ರತಿನಿಧೀಕರಣಗಳು ಏಕತ್ವದಲ್ಲಿ ಸಂಭವಿಸಿರಲಾರವು ಎಂಬುದನ್ನು ಹಾಗೂ ಮನುಷ್ಯ ಪರಿಪೂರ್ಣನಾಗಿರುವುದೇ ಈ ನೀತಿಯಿಂದ ಮತ್ತು ಅವನ ಬಯಕೆ ಪೂರ್ಣತ್ವದ ಕಡೆಗೆ ತುಡಿಯುತ್ತಿರುತ್ತದೆ.

ಈ ದೃಷ್ಟಿಗೆ ಪೂರ್ಣತ್ವ ಕೂಡ ಅವನಿಗೆ ಲಭಿಸುವುದು ತುಂಬ ದುಸ್ತರವಾದುದು ಎಂಬುದನ್ನು ತಾತ್ವಿಕವಾಗಿ ಪ್ರಸ್ತುತ ಪಡಿಸುವ ಹಯವದನ ನಾಟಕ ತನ್ನ ವಿಚಾರವಂತಿಕೆಯಲ್ಲಿ ತಾತ್ವಿಕ ವಿಚಾರದ ಹಲವು ಮಗ್ಗಲುಗಳನ್ನು ತೋರ್ಪಡಿಸುತ್ತದೆ. ನಾಟಕದ ಮುಖ್ಯ ಪಾತ್ರಗಳು ಎರಡು, ಕಪಿಲ ಮತ್ತು ದೇವದತ್ತ. ಕಪಿಲ, ಇವನು ದೈಹಿಕ ವೀರ್ಯವಂತಿಕೆಯಲ್ಲಿ ಪ್ರಬಲನಾದವನು. ಇನ್ನೊಬ್ಬ ದೇವದತ್ತ ಇವನು ಬುದ್ಧಿಯ ಪ್ರತಿನಿಧಿಯಾಗಿರುವುದರೊಂದಿಗೆ ದೇಹದ ವೀರ್ಯವಂತಿಕೆಯಲ್ಲಿ ಅಮೂರ್ತನಾದ.

ಕಪಿಲನ ದೈಹಿಕ ಗಡುಸುತನಕ್ಕೆ ಸರಿಸಾಟಿಯಾಗಿರುತಕ್ಕಂತಹದ್ದು ದೇವದತ್ತನ ಬುದ್ಧಿಯ ಚುರುಕುತನ. ಇವರಿಬ್ಬರ ಮೂರ್ತ, ಅಮೂರ್ತ ಚಿಂತನೆಗಳು ಒಂದನ್ನೊಂದು ಸಂಧಿಸುವುದು ಪದ್ಮಿನಿಯ ಆಯ್ಕೆಯ ಸಂಕೀರ್ಣದಲ್ಲಿ. ಏಕೆಂದರೆ ಪರಿಪೂರ್ಣತೆಯನ್ನು ಹುಡುಕುವ ಆಯ್ಕೆಯಲ್ಲಿ ಪದ್ಮಿನಿ ಇಬ್ಬರನ್ನು ಆಯ್ಕೆ

ಮಾಡಿಕೊಳ್ಳುವ ಅವಶ್ಯಕತೆಯುಂಟಾಗುತ್ತದೆ. ಆದರೆ ಇಬ್ಬರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿಲ್ಲದರಿಂದ ಅವಳ ಆಯ್ಕೆಯು ತುಂಬ ಜಟಿಲವಾಗಿ ಕಾಣಸಿಗುತ್ತದೆ. ಈ ಸಂದಿಗ್ಧತೆಯ ವಿಚಾರದ ಹಂದರದಲ್ಲಿ ಸಾಗುವ ನಾಟಕ ತಂತ್ರ ಮತ್ತು ಬುದ್ಧಿಪೂರ್ವಕವಾಗಿ ಉಪಯೋಗಿಸಲ್ಪಡುವ ವ್ಯವಸ್ಥೆಯಲ್ಲಿ ಬೇರೆಯಾದ ರೂಪವಾಗಿ ಕಾಣಸಿಗುತ್ತದೆ.

ಕಪಿಲ ಮತ್ತು ದೇವದತ್ತ ಇಬ್ಬರ ಕಲ್ಪನೆ ಬ್ರಾಹ್ಮಣ ಮತ್ತು ಶೂದ್ರ ಕಲ್ಪನೆಯನ್ನು ಕೂಡ ಕೂಡಿಸಿದ್ದೆ ಆಗಿದೆ. ಏಕೆಂದರೆ ದೇವದತ್ತ ಬ್ರಾಹ್ಮಣ, ಕಪಿಲ ಕಮ್ಮಾರನಾಗಿದ್ದಾನೆ. ಭಾಗವತ ದೇವದತ್ತನನ್ನು ಉದ್ದೇಶಿಸಿ ರೂಪದಲ್ಲಿ ಸುಂದರವಾಗಿಯು ಶರೀರದಲ್ಲಿ ತೆಳ್ಳಗಾಗಿಯೂ ವಿದ್ಯೆಯಲ್ಲಿ ನಿಸ್ಸೀಮನಾಗಿರುವ ಈ ಯುವಕ ವಿಪ್ರವರಿಯನಾದ ವಿದ್ಯಸಾಗರನ ಏಕಮೇವಮಿತ್ರ, ತರ್ಕದಲ್ಲಿ ಪ್ರಕಾಂಡ ಪಂಡಿತರನ್ನು, ಕಾವ್ಯ ಸ್ಪರ್ಧೆಯಲ್ಲಿ ಕಲಾ ಪಂಡಿತರನ್ನು ಎದುರಿಸಿ, ದಿಂಡುಗೆಡೆದ ಇನ್ನೋರ್ವನನ್ನು ಯಾರೂ ಕಂಡರಿಯರು ಎಂಬ ವಿಚಾರವು ದೇವದತ್ತನ ಒಟ್ಟಾರೆ ವ್ಯಕ್ತಿತ್ವವನ್ನು ಅದು ಪ್ರಸ್ತುತಪಡಿಸುತ್ತಾ ಹೋಗುತ್ತದೆ.

ಒಂದು ನೆಲೆಯಲ್ಲಿ ದೇವದತ್ತನಿಗೆ ಸ್ನೇಹಿತನಾಗುವ ಕಪಿಲ ದೇವದತ್ತನಲ್ಲಿರುವ ವಿಚಾರಶೀಲತೆಯನ್ನು ಹೊರಹಾಕುವುದೇ "ಯಾವ ಹೊಲದಲ್ಲೋ ಕಮ್ಮಾರ ಶಾಲೆಯಲ್ಲೋ ದನವಾಗಿ ಸರಿಗಾಡುತ್ತಾ ಇರುತ್ತಿದ್ದೆ. ನಿನ್ನ ಗೆಳೆತನದ ಪುಣ್ಯದಿಂದ ಕಾವ್ಯ ಪಾಂಡಿತ್ಯ ಎಂದರೇನೆಂದು ಗೊತ್ತಾಯಿತು ಮನುಷ್ಯನಾದೆ" ಎನ್ನುತ್ತಾನೆ. ಈ ಪ್ರಕ್ರಿಯೆ ಮೊದಲ ಬಾರಿಗೆ ಒಂದು ಮುಖ್ಯ ಸಂಗತಿಯನ್ನು ಬಹಿರಂಗ ಪಡಿಸುತ್ತದೆ. ಅದು ಕಪಿಲನಲ್ಲಿ ಇಲ್ಲದೆ ಇರುವ ಎಲ್ಲಾ ಗುಣಗಳನ್ನು ಕಪಿಲ ದೇವದತ್ತನ ಮೂಲಕ ತನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂಬುದನ್ನು.

ಹಾಗೆ ದೇವದತ್ತ ಕೂಡ ತನ್ನಲ್ಲಿ ಇಲ್ಲದ ಕೆಲವು ದೈಹಿಕ ಸಾಮರ್ಥ್ಯದ ಗಡುಸುತನಗಳನ್ನು ಕಪಿಲನನ್ನು ಸ್ನೇಹಿತನಾಗಿ ಮಾಡಿಕೊಳ್ಳುವುದರ ಮೂಲಕ ಅದರ ಮೇಲೆ ಹಿಡಿತ ಸಾಧಿಸಲು ಪ್ರಾರಂಭಿಸುತ್ತಿರುತ್ತಾನೆ. ಈ ಪ್ರಕ್ರಿಯೆ ಕೊಡುಕೊಳ್ಳುವಿಕೆಯ ಆಯಾಮದಲ್ಲಿ ಬಂದು ಮಾನಸಿಕವಾದ ಸಂಬಂಧವನ್ನು ನಿರ್ಮಿಸಲು ಮತ್ತು ಆ ಮೂಲಕ ಅದರ ಸಮರ್ಥನೆಗಳೊಂದಿಗೆ ನಾಟಕ ಪ್ರಧಾನವಾಗಿ ಬೆಳೆಯುತ್ತಾ ಸಾಗುತ್ತದೆ.

ಪದ್ಮಿನಿ ದೇವದತ್ತನ ಬುದ್ಧಿಶಕ್ತಿಗೆ ಮಾರುಹೋದ ಹಾಗೆ ಕಪಿಲನ ದೈಹಿಕ ಶಕ್ತಿಗೂ ಮಾರು ಹೋಗುತ್ತಾಳೆ. ಹೀಗೆ ಇರುವ ಒಂದು ಸಂದರ್ಭದಲ್ಲಿ ಕಪಿಲನ ದೇಹಕ್ಕೆ ದೇವದತ್ತನ ತಲೆಯೂ ದೇವದತ್ತನ ದೇಹಕ್ಕೆ ಕಪಿಲನ ತಲೆಯೂ ಸೇರಿದಾಗ ಪದ್ಮಿನಿ ಕಪಿಲನ ದೇಹ ಮತ್ತು ದೇವದತ್ತನ ತಲೆಯನ್ನು ಹೊಂದಿರುವ ದೇಹವನ್ನು ಒಪ್ಪಿಕೊಳ್ಳುತ್ತಾಳೆ.

ಇಲ್ಲಿ "ನಿನಗೆ ದೇವದತ್ತನ ಬುದ್ಧಿ, ತಲೆ ಬೇಕು. ಕಪಿಲನ ಶಕ್ತಿವಂತ ಮೈಬೇಕು" ಎನ್ನುವ ಕಪಿಲನ ವಿಚಾರ ಅನುರುಣಿಸುತ್ತದೆ. ಪದ್ಮಿನಿ ಇದರಿಂದ ಸಂತೃಪ್ತಳಾದಂತೆ ಅಪ್ರತಿಮ ಮೈ, ಅಪ್ರತಿಮ ಮೆದುಳು. ಅಪ್ರತಿಮ ದೇವದತ್ತನೆಂದೂ ಹಾಡಿ ಕುಣಿಯುತ್ತಾಳೆ ಮತ್ತು ಸಂಭ್ರಮಿಸುತ್ತಾಳೆ.

ಕಾರ್ನಾಡರು ಹೇಳುವಂತೆ ಮುಖವಾಡಗಳ ಅವಶ್ಯಕತೆಯ ಮೂಲಕ ಮಾನಸಿಕ ತುಮುಲಗಳನ್ನು ಬಹಿರಂಗಗೊಳಿಸುವ ಕ್ರಿಯೆ. ಮನದಿಷ್ಟದಂತೆ ಒಬ್ಬರ ತಲೆ ಮತ್ತೊಬ್ಬರ ದೇಹಕ್ಕೆ ಅಂಟಿಸಿ ಆ ಮೂಲಕ ಪರಿಪೂರ್ಣತ್ವದ ನೆಲೆಯಾಗುವುದು ಎಂಬುದನ್ನು ಗೋಚರಿಸುತ್ತಾರೆ. ಇದನ್ನು ಮೊದಲೆ ಅವರು ಗಣಪನ ವಿಗ್ರಹವನ್ನು ಆಧಾರವಾಗಿಟ್ಟುಕೊಂಡು ಆ ಮೂಲಕ ಕೂಡ ಪ್ರಾಸಂಗಿಕವಾಗಿ ನಾಟಕದೊಳಗಿನ ಕಥಾಹಂದರವನ್ನು ಸೂಚಿಸುವ ಮತ್ತು ಸಮರ್ಥಿಸುವ ಪ್ರಯತ್ನವನ್ನು ಮಾಡುತ್ತಾರೆ. ನಾಟಕದ ಚಲನೆಯಾದಂತೆ ತಲೆ ದೇಹಗಳು ಒಂದಾಗುವುದಕ್ಕಿಂತ ಮುಂಚೆ ಬೌದ್ಧಿಕಶಕ್ತಿ ಮತ್ತು ದೈಹಿಕಶಕ್ತಿಯ ವಿವಿಧ ಸಾಂಸ್ಕೃತಿಕ ಪಲ್ಲಟಗಳನ್ನು ಬಹಿರಂಗ ಪಡಿಸುವ ಹಯವದನ ಕಪಿಲ ಮತ್ತು ದೇವದತ್ತನನ್ನು ಮುಖಾಮುಖಿ ಮಾಡುತ್ತಲೆ ಸಾಗುತ್ತಿರುತ್ತದೆ.

ಹಾಗಾಗಿ ಪದ್ಮಿನಿಗೆ ಆಯ್ಕೆಯ ಅವಶ್ಯಕತೆಯಲ್ಲಿ ಗೊಂದಲ ಉಂಟಾಗುವ ಪರಿಸ್ಥಿತಿ ಬೌದ್ಧಿಕ ರಚನೆಯನ್ನು ಪಡೆಯುವುದಾದರೆ, ದೇವದತ್ತನ ಕಡೆಗೆ ವಾಲಬೇಕು. ಇಲ್ಲಿ ದೈಹಿಕ ಅಗತ್ಯದ ಕಡೆಗೆ ವಾಲಿದರೆ ಕಪಿಲನ ಕಡೆಗೆ ಸಾಗಬೇಕು. ಈ ಆಯ್ಕೆಯ ಸಾಧ್ಯತೆಗಳು ಒಂದೊಂದನ್ನು ಬಿಟ್ಟು ಮತ್ತು ಒಂದೊಂದನ್ನು ಕೂಡಿದ್ದು. ಹಾಗಾಗಿ ನಾಟಕ ತನ್ನ ಏರಿಳಿತಗಳನ್ನು ಸಾಗಿಸುತ್ತಾ ಹೋಗುತ್ತಿರುತ್ತದೆ.

ಇಲ್ಲಿ ನೋಡು ಅರಿಸಿನ ಪಕಳೆ. ಅಲ್ಲಿ ಒಳಗೆ ಪಕಳೆಗಳ ತಳಕ್ಕೆ ಒಂದು ದೊಡ್ಡ ಕೆಂಪು ವರ್ತುಲ ಕುಂಕುಮದ ಹಾಗೇ, ಇಲ್ಲಿ ಪುಂಕೇಶರ ಎರಡು, ಆದಲ್ಲಿ ಬೈ ತಲೆಯಲ್ಲಿಯ ಸಿಂಧೂರ ಇವು ದಟ್ಟನ ಹತ್ತಿರ ಕರಿಮಣಿಗಳ ಹಾಗೇ ಎನ್ನುವ ಭಾಗದಲ್ಲಿ ದೇವದತ್ತನಿಗೆ ಪದ್ಮಿನಿ ಎದುರಾದಾಗ ಪ್ರೇಮದ ನಿಜಸ್ವರೂಪ ಏನೆಂದು ಗೋಚರವಾಗುತ್ತದೆ.

ಈ ಮೇಲಿನ ಭಾಗವನ್ನು ಪದ್ಮಿನಿ ಮರಹತ್ತಿ ಮುತ್ತೈದೆಯ ಹೂವುಗಳನ್ನು ಕೀಳುವಾಗ ಕಪಿಲ ವರ್ಣಿಸುವ ಪರಿಯಿದು. ತಾನು ದೇವದತ್ತನ ಸಹಯೋಗದೊಂದಿಗೆ ಪಡೆದ ಕವಿತ್ವದ ನಿಜವಾದ ಪ್ರಕ್ರಿಯೆ ಆರಂಭಗೊಂಡಿದ್ದು ಇಲ್ಲಿಯೆ ಎಂದು ಗೋಚರವಾಗುತ್ತದೆ.

ಪದ್ಮಿನಿಯ ಭಾವ ಕೂಡ ಒಮ್ಮೊಮ್ಮೆ ಕಪಿಲನ ಉತ್ಕಟದಿಂದ ಅರಳಿದರೂ, ದೇವದತ್ತನ ಪ್ರಕಾಶತೆಗೆ ಮಾರುಹೋಗಿ ಅದು ಕ್ಷಣಿಕವಾದಂತೆ ಕಾಣಸಿಗುತ್ತದೆ. ಆದರೆ ಕಪಿಲನ ದೈಹಿಕವಾದ ಆಕರ್ಷಣೆಯನ್ನು ಮಾತ್ರ ಪದ್ಮಿನಿ ತೊಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಪ್ರಕ್ರಿಯೆ ಜರುಗುತ್ತಿರುವಾಗ ದೇವದತ್ತ ತನ್ನ ಶುಷ್ಕ ಪಾಂಡಿತ್ಯಕ್ಕೂ ಮತ್ತು ಸವಾಲಿನ ಸನ್ನಿವೇಶಗಳಲ್ಲೂ ಇರಬಹುದಾದ ಸೌಂದರ್ಯ ಅನುಭವದ ಹೊಸ ಸಾಧ್ಯತೆಗಳನ್ನು ಗುರುತಿಸುತ್ತಾನೆ.

ಅದು ದೇವದತ್ತನನ್ನು ಕೂಡ ಅವನ ಅಪೂರ್ಣತ್ವದಲ್ಲಿಯೇ ಕಟ್ಟಿ ಹಾಕುವಲ್ಲಿ ವ್ಯವಸ್ಥಿತವಾದ ರೂಪವಾಗಿದೆ. ಕಪಿಲನ ಮುಂದೆ ದೇವದತ್ತ ಮಂಕಾಗಿ ಹೋಗುವುದು, ಇನ್ನೊಬ್ಬನ ಮನಸ್ಸನ್ನು ಹೊಕ್ಕಬಲ್ಲಂತಹ ಆ ಸಾಮರ್ಥ್ಯ ಅವನಲ್ಲಿ ಇಲ್ಲದೆ ಹೋದುದರಿಂದ. ಅಂದರೆ ಕಪಿಲ ಮನಸ್ಸನ್ನು ಹೊಕ್ಕಬಲ್ಲ. ಆದರೆ, ಅದನ್ನು ತನ್ನ ಅಗತ್ಯಕ್ಕೆ ಬಳಸಿಕೊಳ್ಳುವ ಶಕ್ತಿ ಮತ್ತು ಸಾಮರ್ಥ್ಯ ಇಲ್ಲದೆ ಹೋಗಿ ಅದನ್ನು ಕೂಡ ದೇವದತ್ತನಲ್ಲಿ ಕಲಿಯಬೇಕಾದ ಅಗತ್ಯ ಕಪಿಲನಿಗೆ ತಲೆದೋರುತ್ತದೆ.

ಈ ಕ್ರಿಯೆ ಜರುಗುತ್ತಿರುವಾಗ ಮತ್ತೊಂದು ಕ್ರಿಯೆಯು ಜೊತೆಯಲ್ಲಿ ನಡೆಯುತ್ತಾ ಬರುತ್ತಿರುತ್ತದೆ. ಅದು ಅನಂತಮೂರ್ತಿಯವರು ಗುರುತಿಸುವಂತೆ ಬ್ರಾಹ್ಮಣ ಮತ್ತು ಶೂದ್ರ ಪರಿಕಲ್ಪನೆಯ ಮತ್ತೊಂದು ವಿಧಾನವೆ ಸರಿ. ತನ್ನ ಜನ್ಮಜಾತ ಸ್ಥಾನಮಾನದಿಂದ ಹಾಗೂ ತಾನು ಪಡೆದ ಪಾಂಡಿತ್ಯದಿಂದ ಆಕರ್ಷಕವಾದ ವ್ಯಕ್ತಿತ್ವವನ್ನು ಪಡೆದ ದೇವದತ್ತನ ಪ್ರಜ್ಞೆ ನಾಟಕದಲ್ಲಿ ನಿರಂತರವಾಗಿ ಅದೇ ಪ್ರಜ್ಞೆಯ ಆರಾಧಕ ಸ್ಥಿತಿಯಾಗಿ ಅದು ಮತ್ತೆ ಮತ್ತೆ ಗೋಚರಿಸಲ್ಪಡುತ್ತದೆ.

ಆದರೆ ಕಪಿಲ ತಾನು ಪಡೆದ ದೇವದತ್ತನ ಸಹಯೋಗದೊಂದಿಗೆ ವಿನಮ್ರನಾದರೂ ತನ್ನ ಬೆಳವಣಿಗೆಯನ್ನು ಜಾಗೃತವಾಗಿ ಇಟ್ಟುಕೊಂಡಿರುವವನೇ ಆಗಿದ್ದಾನೆ ಎನ್ನುವ ವಿಚಾರವನ್ನು ಬ್ರಾಹ್ಮಣ ಶೂದ್ರ ಪರಿಕಲ್ಪನೆಗೆ ಹೋಲಿಸುತ್ತಾರೆ ಅನಂತಮೂರ್ತಿಯವರು. ಮರ ಹತ್ತುವ ಸಂದರ್ಭಗಳು ಗಾಡಿ ಪ್ರಯಾಣದ ಸಂದರ್ಭದಲ್ಲಿ ಪದ್ಮಿನಿ ಕಪಿಲನತ್ತ ಮೋಹಿತಳಾಗಿ ನೋಡುತ್ತಿರುವುದನ್ನು ಗಮನಿಸಿದ ಸ್ಥಿತಿಯಲ್ಲಿ "ಯಾವ ಹೆಣ್ಣಾದರೂ ದೂರು ಹೋಗಬೇಕು. ಕುಮಾರಿಯಾದರೇನು ಮುತ್ತೈದೆಯಾದರೇನು? ಎಂತಹ ಮೂರ್ಖನಾಗು ನಿನ್ನ ದ್ವೇಷ ಗಂಟಲಲ್ಲೇ ಹಿಚುಕಿ ಬಿಡು. ನಿನ್ನ ಕವಳದ ನಾಲಗೆ ಕಿತ್ತು ಓಗೆ ಈಗ ಪುಕ್ಕ ಆಗಬೇಡ" ಎಂಬ ಭಾವವು ಕಪಿಲ ಮತ್ತು ದೇವದತ್ತರ ಮಾನಸಿಕ ಅಪೂರ್ಣತೆಯನ್ನು ತುಂಬಬಲ್ಲ ಹೊಸ ಸಂಕೀರ್ಣವಾಗಿ ತುಂಬಿಕೊಳ್ಳುತ್ತದೆ.

ಹಾಗೆಯೇ ಇದರ ಇನ್ನೊಂದು ರೂಪವಾಗಿ ಕಪಿಲ 'ಋಷಿ ನನ್ನನ್ನು ನಿನ್ನ ಪಾಲಿಗೆ ಕೊಟ್ಟಿದ್ದರೆ ಕೊನೆಗೆ ಹೀಗೆ ನಾನು ನಿನ್ನನ್ನು ಬಿಟ್ಟು ದೇವದತ್ತರ ಕಡೆ ಹೋಗಬೇಕಾಗುತ್ತಿತ್ತು ಏನೋ ಎನ್ನುವ ವಿಚಾರ' ಕೂಡ ಮುಖ್ಯವಾಗುತ್ತದೆ. ಈ ಸಂದರ್ಭದಲ್ಲಿ ಪದ್ಮಿನಿ ಈ ದೇಹ ಮತ್ತು ತಲೆಯನ್ನು ಬದಲಾಯಿಸುವ ಕ್ರಿಯೆಯಲ್ಲಿ ಉದ್ಯುಕ್ತಳಾಗಿ ದೇವದತ್ತನ ತಲೆಯನ್ನು ಮತ್ತು ಕಪಿಲನ ದೇಹವನ್ನು ಒಟ್ಟುಗೂಡಿಸಿ ಆ ಮೂಲಕ ತನ್ನ ಪೂರ್ಣತ್ವದ ಅಭಿಲಾಷೆಯನ್ನು ಈಡೇರಿಸಿಕೊಳ್ಳುತ್ತಾಳೆ.

ಆದರೆ ತದನಂತರದಲ್ಲಿ ಆ ಎರಡು ದೇಹ ಮತ್ತು ಶಿರಗಳು ಮತ್ತೆ ಅದಲು-ಬದಲು ಆದಾಗ ಪದ್ಮಿನಿಗೆ ಎರಡು ಕೂಡ ಸಂಪೂರ್ಣವಾಗಿ ಅವ್ಯವಸ್ಥಿತವಾದಂತೆ ಕಾಣುತ್ತದೆ. ಹಾಗೆಯೇ ಅವೆರಡರಲ್ಲೂ ಕೂಡ ಪೂರ್ಣತ್ವವನ್ನು ಬಯಸುವ ಅಭಿಲಾಷೆ ಪದ್ಮಿನಿಯದಾಗಿ, ಆಯ್ಕೆ ಇವರಿಬ್ಬರ ಕಡೆ ಮುಖ ನೋಡಿದಾಗ ಕಪಿಲ ಮತ್ತು ದೇವದತ್ತರೇ ತಮ್ಮ ಅಪೂರ್ಣತ್ವಕ್ಕೆ ವ್ಯಸನ ಪಡುತ್ತಾರೆ. ಆ ಮೂಲಕ ಪಡುವ ವ್ಯಸನದಲ್ಲಿ ದೇವದತ್ತ ಮನಸ್ಸು ಮಾಡಿದ್ದಾನೆ. ಇಡೀ ಪದ್ಮಿನಿಯ ಚಿತ್ತವನ್ನು ತನ್ನ ಕಡೆಗೆ ಬೌದ್ಧಿಕವಾಗಿ ಆಕರ್ಷಿತಗೊಳಿಸಿ ತನ್ನ ಪ್ರತಿಷ್ಠೆಯ ಮೂಲಕ ಹಿಡಿದಿಡಬಹುದಿತ್ತು. ಹಾಗೆ ಕಪಿಲ ಕೂಡ ದೈಹಿಕ ಆಕ್ರಮಣದ ಮೂಲಕ ಪದ್ಮಿನಿಯನ್ನು ವಶಪಡಿಸಿಕೊಳ್ಳುವುದು ತುಂಬ ಅಸಾಧ್ಯವೇನು ಆಗಿರಲಿಲ್ಲ. ಆದರೆ ನಾಟಕದ ಬಹುಮುಖ್ಯವಾದ ತಾಕಲಾಟ ಎದುರಾಗುವುದು ಈ ರೀತಿ ವಶಪಡಿಸಿಕೊಳ್ಳುವ ಕ್ರಿಯೆಯಲ್ಲಿ ಅಲ್ಲ. ಅದು ಸೈದ್ಧಾಂತಿಕವಾಗಿ ಮೂಡಿಬರುವ ಸ್ವಾತಂತ್ರ್ಯ ನಿರ್ಣಯದ ದಾರಿಯಾಗಿದೆ. ಹಾಗಾಗಿ ಇಲ್ಲಿ ಕಪಿಲ ಮತ್ತು ದೇವದತ್ತರಿಗೆ ಪೂರ್ಣತ್ವ ಪಡೆಯಲು ಬೇರೆ ಮಾರ್ಗಗಳಿಲ್ಲ. ಹಾಗೆಯೇ ಇವರಿಬ್ಬರೂ ಪೂರ್ಣತ್ವಗೊಳ್ಳದಿದ್ದರೆ ಪದ್ಮಿನಿಗೆ ಸಂತೃಪ್ತಿ ಎದುರಾಗುವುದಿಲ್ಲ. ಹಾಗಾಗಿ ನಾಟಕದ ಕೊನೆಯು ದೇವದತ್ತ ಮತ್ತು ಕಪಿಲ ಇಬ್ಬರೂ ಪೂರ್ಣತ್ವಕ್ಕಾಗಿ ಹಂಬಲಿಸಿ ತಮ್ಮನ್ನು ತಾವೆ ನಾಶ ಮಾಡಿಕೊಳ್ಳುವ ಅಂದರೆ ತಲೆಯನ್ನು ಜಜ್ಜಿಕೊಳ್ಳುವುದರ ಮೂಲಕ ಸಾವಿಗೆ ಒಳಗಾಗುತ್ತಾರೆ.

ಪದ್ಮಿನಿ ತಾನು ಪೂರ್ಣವಾಗಿ ಅಪೂರ್ಣಳಾಗುತ್ತಾಳೆ. ಇದನ್ನು ಗಿರೀಶ್ ಕಾರ್ನಾಡ್‌ರವರು ಕಪಿಲ ಮತ್ತು ದೇವದತ್ತರ ದುರಂತ ಸಂಪೂರ್ಣ ವೈಯಕ್ತಿಕವಾದುದು. ಸುತ್ತಲಿನ ಸಮಾಜಕ್ಕೆ ಅದರ ಪತ್ತೆಯೇ ಹಚ್ಚುವುದಿಲ್ಲ. ಅಲ್ಲಿ ನನಗೆ ಕಂಡ ವ್ಯಂಗ್ಯ ಇಷ್ಟೇ ಅಪೂರ್ಣತೆ; ಅಪೂರ್ಣತೆ ಎಂದು ಇಬ್ಬರೂ ತಲೆ ಜಜ್ಜಿ ಸತ್ತರು. ಕೊನೆಗೆ ಅಪೂರ್ಣರಾಗಿರುವವರು ಅವರಲ್ಲ ಪದ್ಮಿನಿ ಪೂರ್ಣಾಂಗಗಳಾಗಿ ಅಪೂರ್ಣಳಾಗುತ್ತಾಳೆ. ಈ ಮೂವರಿಗೂ ವಿರುದ್ಧವಾಗಿ

ಹಯವದನ ನೀಡುವುದು ಸಾಮಾಜಿಕ ಸಮಸ್ಯೆಯನ್ನು. ಅವನಿಗೆ ತನ್ನ ವೈಯಕ್ತಿಕ ಕೊರತೆಗಿಂತ ತನ್ನದೇ ಆದ ಸಮಾಜದ ಅಭಾವ ಹೆಚ್ಚು ದುಃಖ ಕೊಡುತ್ತದೆ.

ದೇಹ ಮತ್ತು ಮನಸ್ಸುಗಳ ದ್ವಂದ್ವವೆ ನಾಟಕಕ್ಕೆ ತೀರ ಮುಖ್ಯವಾದುದು. ಇದೇ ಸಂದರ್ಭದಲ್ಲಿ ಕಾರ್ನಾಡರು ಸೃಷ್ಟಿಸಿದ ಹಯವದನ ಅಂದರೆ ಕುದುರೆಮುಖವನ್ನು ಉಳ್ಳವನು ಎದುರಿಸಬಹುದಾದ ದೊಡ್ಡ ಸಮಸ್ಯೆ ನಮಗೆ ಗೋಚರಿಸುತ್ತದೆ. ಮಾನವದೇಹ ಮತ್ತು ಕುದುರೆಮುಖವನ್ನು ಹೊಂದಿರುವ ಈ ಹಯವದನ ಪೂರ್ಣ ಪ್ರಮಾಣದಲ್ಲಿ ಮನುಷ್ಯ ಆಗಲಾರ ಮತ್ತು ಕುದುರೆಯನ್ನು ಪ್ರತಿನಿಧಿಸಲಾರ ಎಂಬುದು ಮುಖ್ಯವಿಚಾರ.

ಅದರೊಂದಿಗೆ ಹಯವದನ ಪೂರ್ಣತ್ವದ ಮಾನವ ಪರಿಕಲ್ಪನೆಯನ್ನು ಪ್ರಶ್ನಿಸುವ ಮೂಲಕ ತನ್ನ ಪರಿಪೂರ್ಣತೆಗೆ ಅಗತ್ಯವಾದ ಸಾಮಾಜಿಕ ಸನ್ನಿವೇಶವೊಂದನ್ನು ಬೇಡುತ್ತಿದ್ದಾನೆ. ಆದರೆ ಸಾಮಾಜಿಕ ಸನ್ನಿವೇಶ ಅವನಿಗೆ ಅಲಭ್ಯವಾದುದು ಎಂಬುದನ್ನು ನಾಟಕ ಮತ್ತೆ ಮತ್ತೆ ಪ್ರತಿಧ್ವನಿಸುತ್ತದೆ.

ಇಡೀ ಪೂರ್ಣತ್ವದ ಧಾಟಿಯ ವಿಚಾರಗಳಿಗೆ ಹೊಸ ತಿರುವನ್ನು ನೀಡುವ ಮೂಲಕ ಪದ್ಮಿನಿ ಗುರುತಿಸಿಕೊಳ್ಳಲಾಗದೆ ಹೋದ ದ್ವಂದ್ವ ಮನಸ್ಥಿತಿಯನ್ನು ಸಾಮಾಜಿಕವಾದ ಒಂದು ಸನ್ನಿವೇಶದ ಮೂಲಕ ಸೃಷ್ಟಿಸಿ ಆ ಮೂಲಕ ನಾಟಕ ಸಕ್ರಿಯವಾಗಿ ಮಂಡಿಸುತ್ತದೆ. ಮನುಷ್ಯನ ಬುದ್ಧಿಶಕ್ತಿಗೆ ಮತ್ತು ದೈಹಿಕಶಕ್ತಿಗೆ ಇರುವುದಾದ ಎರಡು ಸಾಧ್ಯತೆಗಳ ಕೊರತೆಯನ್ನು ಪ್ರತಿಬಿಂಬಿಸುವ ಇಡೀ ನಾಟಕ ಹಯವದನನ ಹುಟ್ಟು ಆಗುವ ಮೂಲಕ ಕಾಮ ವ್ಯವಸ್ಥೆಯ ಅಸಂತೃಪ್ತ ಮತ್ತು ಅಭಿಲಾಷಿತ ಪೂರ್ಣತ್ವದ ನಿರ್ದಶನ ಯಾವುದು? ಎಂಬುದನ್ನು ಪ್ರಶ್ನಿಸುತ್ತದೆ.

ಹಯವದನ ಕಥೆ ಬರಿ ಚೌಕಟ್ಟಿನ ವಿಚಾರವೆಂದು ತಿಳಿಯಲಾಗದೆ ಇಬ್ಬರು ಮನುಷ್ಯ ಮತ್ತು ಸಂಸ್ಕೃತಿಯ ಪ್ರಶ್ನೆಯ ಸಂಬಂಧದ ವಿಭಿನ್ನ ಸಂಬಂಧಗಳನ್ನು ಅದು ಪ್ರಮುಖವಾಗಿ ಮಂಡಿಸುತ್ತಾ ಸಾಗುತ್ತದೆ. ಇದಕ್ಕೆ ಹಲವು ಆಯಾಮಗಳನ್ನು ಮಂಡಿಸುವ ತಾತ್ವಿಕತೆ ಕೂಡ ಇದ್ದು, ಎತ್ತುವ ಪ್ರಶ್ನೆಗಳಿಂದ ಮುಖ್ಯವಾದಂತೆ ಅನಂತಮೂರ್ತಿ ಗುರುತಿಸುವ ಬ್ರಾಹ್ಮಣ ಶೂದ್ರರ ನೆಲೆಯೂ ಕೂಡ ಇಲ್ಲಿ ಬಿಚ್ಚಿಕೊಳ್ಳುತ್ತದೆ.

ಒಟ್ಟಾರೆಯಾಗಿ ಭಾರತೀಯ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪರೀಕ್ಷೆಗೆ ಒಡ್ಡುವ ಹಯವದನ ನಾಟಕ ಆಯ್ಕೆ ಮತ್ತು ಪ್ರಕ್ರಿಯೆಯಲ್ಲಿ ದೋಷವಿರುವುದನ್ನು ಪ್ರಸ್ತುತಪಡಿಸುತ್ತದೆ. ಹಯವದನನನ್ನು ಸಾಮಾಜಿಕ ಸಂದರ್ಭದ ಕೇಂದ್ರದಲ್ಲಿರಿಸಿ ಅವನ ಮೂಲಕ ಇಡೀ ತಾತ್ವಿಕತೆಯನ್ನು ಮತ್ತೊಮ್ಮೆ ಮರು ಪರಿಶೀಲಿಸಲು

ಯತ್ನಿಸುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಪುರಾಣದ ಕೆಲವು ವಿಚಾರಗಳು ಸಹವರ್ತಿಯಾದರೂ ತಾತ್ವಿಕತೆ ಮತ್ತು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತುವ ಹಿನ್ನಲೆಯಲ್ಲಿ ಹಯವದನ ತುಂಬ ಪ್ರಮುಖ ಸಾಲಿನಲ್ಲಿದೆ. ಹಾಗಾಗಿ ಪದ್ಮಿನಿ ತಾನು ಪಡೆಯಲಾಗದ ಪೂರ್ಣತ್ವವನ್ನು ಪಡೆದ ಹಯವದನನ ತಾಯಿ ಪಡೆದ ಮಗುವಿನ ಸಾಮಾಜಿಕ ಸ್ಥಿತಿ ಯಾವುದು? ಹಾಗೂ ಇಲ್ಲಿ ಬಿಡಿಸಿಕೊಳ್ಳಬೇಕಾದ ಬಹುಮುಖ್ಯ ಪ್ರಶ್ನೆ ಮತ್ತು ಅದರ ಗುರುತಿಸುವಿಕೆಯಲ್ಲಿರುವ ದೋಷವನ್ನು ಹಯವದನ ಗುರುತಿಸುತ್ತದೆ.


ಒಟ್ಟಾರೆಯಾಗಿ ಪುರಾಣಪ್ರತೀಕ ಚಿಂತನೆಗಳನ್ನು ಸಮಕಾಲೀನ ವರ್ತಮಾನದ ಸಾಧ್ಯತೆಯ ಸಮಸ್ಯೆಗಳ ರೂಪದಲ್ಲಿ ಪ್ರಸ್ತುತ ಪಡಿಸುವ ಕಾರ್ನಾಡರು ಆ ಮೂಲಕ ಇಡೀ ಸಾಂಸ್ಕೃತಿಕ ವ್ಯವಸ್ಥೆ ನಂಬಿಕೊಂಡ ಮೌಲ್ಯಗಳ ಒಳಗೆ ಇರುವ ಟೊಳ್ಳುತನವನ್ನು ಬಯಲಿಗೆಳೆಯುತ್ತಾರೆ.

ಗ್ರಂಥಋಣ

೧. ಹಯವದನ : ಗಿರೀಶ್ ಕಾರ್ನಾಡ್.
೨. ನವ್ಯ ಸಾಹಿತ್ಯ ದರ್ಶನ : ಶಾಂತಿನಾಥ ದೇಸಾಯಿ.
೩. ಸನ್ನಿವೇಶ : ಯು.ಆರ್. ಅನಂತಮೂರ್ತಿ.

□□□

ರೆ.ಸಂ. ೨೨೦೭೩-೨೦೦ ಪ್ರತಿಗಳು-ಮೈ.ವಿ.ಮು-11-6-12-16



ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು